ಡಾ|| ಜೆ. ಕೃಷ್ಣಪ್ಪ

ರಸ್ತೆ ನಿಯಮಗಳು

ಕಾಮಧೇನು
ಪುಸ್ತಕ ಭವನ

ರಸ್ತೆ ನಿಯಮಗಳು

ಡಾ॥ ಜಿ. ಕೃಷ್ಣಪ್ಪ

ಕಾಮಧೇನು ಪುಸ್ತಕ ಭವನ

ನಂ. 5/1, ನಾಗಪ್ಪ ಬೀದಿ, ಶೇಷಾದ್ರಿಪುರ, ಬೆಂಗಳೂರು – 560 020

RASTE NIYAMAGALU - By Dr. G. KRISHNAPPA, # 22, Sri Gurudatta Nilaya, 1st Cross, Netaji Nagara, Mattikere, Bengaluru - 560 054, Phone: 080-23603402, Mobile : 99721 09209

Published by : D.K. SHYAMASUNDARA RAO for KAMADHENU PUSTAKA BHAVANA # 5/1, Nagappa Street, Seshadripura, Bengaluru - 560 020.

First Edition	:	2000, Prasaranga, Mysore University
Second Edition	:	2010, Kmadhenu Pustaka Bhavana
Copyright	:	Dr. G. Krishnappa
Price	:	₹ 99/-
Paper used	:	80 GSM Maplitho NS
Copies	:	500

ರಸ್ತೆ ನಿಯಮಗಳು

ಲೇಖಕರು : ಡಾ॥ ಜಿ. ಕೃಷ್ಣಪ್ಪ, # ೨೨, ಶ್ರೀ ಗುರುದತ್ತ ನಿಲಯ, ಮೊದಲನೇ ಅಡ್ಡರಸ್ತೆ, ನೇತಾಜಿನಗರ, ಮತ್ತಿಕೆರೆ, ಬೆಂಗಳೂರು – ೫೬೦ ೦೫೪, ದೂರವಾಣಿ: ೦೮೦–೨೩೬೦೩೪೦೨, ಜಂಗಮವಾಣಿ : ೯೯೭೨೧೦೯೨೦೯

ಪ್ರಕಾಶಕರು : ಡಿ.ಕೆ. ಶ್ಯಾಮಸುಂದರರಾವ್, ಕಾಮಧೇನು ಪುಸ್ತಕ ಭವನ, # ೫/೧, ನಾಗಪ್ಪ ಬೀದಿ, ಶೇಷಾದ್ರಿಪುರ, ಬೆಂಗಳೂರು – ೫೬೦ ೦೨೦

ಮೊದಲ ಮುದ್ರಣ	:	೨೦೦೦, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ
ಎರಡನೆಯ ಮುದ್ರಣ	:	೨೦೧೦, ಕಾಮಧೇನು ಪುಸ್ತಕ ಭವನ
ಕೃತಿಸ್ವಾಮ್ಯ	:	ಡಾ॥ ಜಿ. ಕೃಷ್ಣಪ್ಪ
ಬೆಲೆ	:	₹ ೯೯/–
ಪ್ರತಿಗಳು	:	೫೦೦

ಮುದ್ರಕರು : ಆರ್. ಶ್ರೀನಾಥ್, ಮಾಲೀಕರು, ಪರಿಶ್ರೀ ಪ್ರಿಂಟರ್ಸ್, # ೯, ಜೆ.ಟಿ. ನಿವಾಸ್, ೪ನೇ ಅಡ್ಡರಸ್ತೆ, ನಾಗಪ್ಪ ಬ್ಲಾಕ್, ಶ್ರೀರಾಮಪುರಂ, ಬೆಂಗಳೂರು–೫೬೦ ೦೨೧.
© ೨೩೧೨೮೨೮೬, ೩೨೦೧೬೩೫೮, www.parishree.com

ಲೇಖಕರ ಮಾತು

ಇದು ಮೋಟಾರು ವಾಹನಗಳ ಯುಗ. ರಸ್ತೆಯನ್ನು ಉಪಯೋಗಿಸುತ್ತ, ವಾಹನಗಳಲ್ಲಿ ಓಡಾಡುತ್ತ, ವಾಹನಗಳನ್ನು ನಡೆಸುತ್ತ ಬದುಕುವ ಪ್ರತಿಯೊಬ್ಬರೂ ರಸ್ತೆ ನಿಯಮಗಳನ್ನು ತಿಳಿಯಲೇಬೇಕಾಗಿದೆ. 'ರಸ್ತೆ ನಿಯಮಗಳು' ಎಂಬ ಈ ಕೃತಿ ಜನರಿಗೆ ರಸ್ತೆ ನಿಯಮವನ್ನು ತಿಳಿಸಲು, ಆ ನಿಯಮಗಳಂತೆ ಅವರು ನಡೆಯಲು ಮಾರ್ಗದರ್ಶಿ ಸೂತ್ರವಾಗಿದೆ.

ಮೋಟಾರು ವಾಹನಗಳಿಗೆ ಸಂಬಂಧಿಸಿದಂತೆ ಹಲವು ಕಾಯದೆ ಕಾನೂನುಗಳ ಪುಸ್ತಕಗಳಿವೆ. ಅವುಗಳಲ್ಲಿ ಮೋಟಾರು ವಾಹನ ಕಾಯ್ದೆ ೧೯೮೮, ಕೇಂದ್ರ ಮೋಟಾರು ವಾಹನಗಳ ನಿಯಮಗಳು ೧೯೮೯ ಈ ಮೊದಲಾದವು ಪ್ರಮುಖವಾಗಿವೆ. ಅವುಗಳಲ್ಲಿ ಬಂದಿರುವ ವಿವರಗಳನ್ನು ಅನುವಾದಿಸಿ ಕೊಡುವುದು ಇಲ್ಲಿ ನನ್ನ ಉದ್ದೇಶವಲ್ಲ. ಅವುಗಳಲ್ಲಿ ಬಂದಿರುವ ಸಂಪೂರ್ಣವಾದ ವಿವರಗಳನ್ನು ಸಾರ್ವಜನಿಕರಿಗೆ ಉಪಯೋಗವಾಗುವ ಬಗೆಯಲ್ಲಿ ನಿರೂಪಿಸುವ ಯತ್ನವನ್ನು ನಾನಿಲ್ಲಿ ನಡೆಸಿದ್ದೇನೆ. ಕಾಯಿದೆ ಗ್ರಂಥಗಳನ್ನು ನಾನು ನಿರೂಪಣೆಯಲ್ಲಿ ಬಳಸಿಕೊಳ್ಳುವಾಗ ಕ್ರಮವಾಗಿ ಮೋ.ವಾ.ಕಾ. ೧೯೮೮, ಕೇಂ.ಮೋ.ವಾ.ನಿ. ೧೯೮೯, ಕ.ರಾ.ಮೋ.ವಾ.ನಿ. ೧೯೮೯ ಎಂದು ಸಂಕೇತಿಸಿದ್ದೇನೆ.

ನಾನು ಈ ಕೃತಿಯನ್ನು ರಚಿಸಲು ಬೇಕಾದ ಸಲಹೆ ಮಾರ್ಗದರ್ಶನ ನೀಡಿದ ಜಂಟಿ ಸಾರಿಗೆ ಆಯುಕ್ತರಾದ ಶ್ರೀ ಡಿ. ವಿಜಯವಿಕ್ರಂ, ಶ್ರೀ ಸಿ.ಆರ್. ಮಹಮದ್ ಸುಲೇಮಾನ್, ಶ್ರೀ ಆರ್. ಮುನಿವೀರೇಗೌಡ; ಸಾಹಿತಿಗಳಾದ ಡಾ॥ ಸಿ.ಪಿ.ಕೆ. ಮತ್ತು ಡಾ॥ ಕೆ. ಅನಂತರಾಮು ಅವರಿಗೆ ಮನಃಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಕೃತಿಯನ್ನು ಮೊದಲ ಮುದ್ರಣವಾಗಿ ಪ್ರಕಾಶಿಸಿದ ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗದ ನಿರ್ದೇಶಕರಾಗಿದ್ದ ಡಾ॥ ಅರವಿಂದ ಮಾಲಗತ್ತಿ ಅವರಿಗೆ ಮತ್ತು ಈಗ ಸೂಕ್ತ ಪರಿಷ್ಕರಣಗಳೊಂದಿಗೆ ಮರುಮುದ್ರಿಸಿಕೊಳ್ಳಲು ಅನುಮತಿ ನೀಡಿದ ಈಗಿನ ನಿರ್ದೇಶಕರಾದ ಡಾ॥ ಸಿ. ನಾಗಣ್ಣ ಅವರಿಗೆ ನನ್ನ ನಮನಗಳನ್ನು ಅರ್ಪಿಸುತ್ತೇನೆ.

ನಮ್ಮ ಮೋಟಾರು ವಾಹನ ಇಲಾಖೆಯ ಎಲ್ಲ ಅಧಿಕಾರಿಗಳಿಗೆ ಮತ್ತು ಸಹೋದ್ಯೋಗಿಗಳಿಗೆ ಹಾಗೂ ನನ್ನ ಸಾಹಿತ್ಯಾಸಕ್ತಿಯನ್ನು ಪ್ರೋತ್ಸಾಹಿಸುತ್ತಿರುವ ಶ್ರೀ ಎಚ್.ಎಸ್. ಹರಿಶಂಕರ್ ಮತ್ತು ಶ್ರೀ ಕ್ಯಾತನಹಳ್ಳಿ ರಾಮಣ್ಣ ಅವರಿಗೆ ವಂದಿಸುತ್ತೇನೆ.

ಈ ಕೃತಿಯ ಪರಿಷ್ಕೃತ ಆವೃತ್ತಿಯನ್ನು ಎರಡನೆಯ ಮುದ್ರಣವಾಗಿ ಪ್ರಕಾಶಿಸುತ್ತಿರುವ ಪ್ರೊ॥ ಡಿ.ಕೆ. ಶ್ಯಾಮಸುಂದರರಾವ್ ಅವರಿಗೆ ಮತ್ತು ಉತ್ತಮವಾಗಿ ಮುದ್ರಿಸಿರುವ ಶ್ರೀ ಆರ್. ಶ್ರೀನಾಥ್, ಪರಿಶ್ರೀ ಪ್ರಿಂಟರ್ಸ್ ಅವರಿಗೆ ನನ್ನ ಧನ್ಯವಾದಗಳು.

'ರಸ್ತೆ ನಿಯಮ'ಗಳನ್ನು ತಿಳಿಯಲು ಆಸಕ್ತಿ ತೋರಿಸಿ, ಈ ಕೃತಿಯನ್ನು ಓದಿ ಪ್ರೋತ್ಸಾಹಿಸುತ್ತಿರುವ ಸಹೃದಯ ಓದುಗರಿಗೆ ನಾನು ಸದಾ ಋಣಿಯಾಗಿರುವೆನು.

– ಡಾ॥ ಜಿ. ಕೃಷ್ಣಪ್ಪ

ಪರಿವಿಡಿ

* * *

ಕುತೂಹಲದ ಸಂಗತಿಗಳು

- ೧೮೮೫ರಲ್ಲಿ ಜರ್ಮನಿಯ ಕಾರ್ಲ್‌ಬೆಂಜ್ ಮೊದಲ ಪೆಟ್ರೋಲ್ ಕಾರನ್ನು, ರುಡಾಲ್ಫ್ ಡೀಸೆಲ್ ಮೊದಲ ಡೀಸೆಲ್ ಕಾರನ್ನು, ಗಾತ್ಲಿಯೆಬ್ ಡೈಮ್ಲರ್ ಮೊದಲ ಮೋಟಾರು ಸೈಕಲನ್ನು ಕಂಡುಹಿಡಿದರು.
- ಮೋಟಾರು ವಾಹನಗಳನ್ನು ರಸ್ತೆಯಲ್ಲಿ ನಡೆಸಲು ಪ್ರಾರಂಭಿಸಿದ ಮೊದಲಲ್ಲಿ ಹೆಚ್ಚು ಶಬ್ದ ಮತ್ತು ಹೊಗೆಯಿಂದ ಕೂಡಿತ್ತು. ಅದು ಕುದುರೆಗಳನ್ನು ಗಾಬರಿಗೊಳಿಸುತ್ತಿತ್ತು. ಆಗ ಜನಗಳಿಗೆ ಎಚ್ಚರಿಕೆ ನೀಡಲು ಗ್ರೇಟ್‌ಬ್ರಿಟನ್ ೧೮೬೫ರಲ್ಲಿ **ದಿ ರೆಡ್‌ಪ್ಲಾಗ್ ಆಕ್ಟ್** ಜಾರಿಗೆ ತಂದಿತು. ಅದು ಮೋಟಾರು ಕ್ಯಾರೇಜ್‌ನ ವೇಗವನ್ನು ನಗರ ರಸ್ತೆಗಳಲ್ಲಿ ಗಂಟೆಗೆ ೨ ಮೈಲಿ (೩ ಕೆ.ಎಂ.ಪಿ.ಎಚ್) ಮತ್ತು ಇತರ ರಸ್ತೆಗಳಲ್ಲಿ ಗಂಟೆಗೆ ೪ ಮೈಲಿ (೬ ಕೆ.ಎಂ.ಪಿ.ಎಚ್) ಎಂದು ನಿಗದಿಗೊಳಿಸಿತ್ತು. ಓರ್ವ ಗೊತ್ತುಪಡಿಸಿದ ವ್ಯಕ್ತಿ ಹಗಲುಹೊತ್ತಿನಲ್ಲಿ ಕೆಂಪು ಬಾವುಟವನ್ನು ಹಿಡಿದು, ರಾತ್ರಿಹೊತ್ತಿನಲ್ಲಿ ಒಂದು ಲ್ಯಾಟಿನ್ ಹಿಡಿದು ಆ ವಾಹನಗಳ ಮುಂದೆ ನಡೆಯಬೇಕೆಂದು ಕಾನೂನು ಮಾಡಿತ್ತು.
- ೧೮೯೩ರಲ್ಲಿ ಪ್ಯಾರೀಸ್‌ನ ಪೊಲೀಸರು ನೋಂದಣಿ ಫಲಕವನ್ನು ಮೊದಲು ಜಾರಿಗೆತಂದರು. ಅದನ್ನು ೧೯೦೨ರಲ್ಲಿ ನ್ಯೂಯಾರ್ಕ್ ಸ್ಟೇಟ್ (ಯು.ಎಸ್.ಎ.) ನವರು, ೧೯೦೩ರಲ್ಲಿ ಬ್ರಿಟೀಷ್ ಪೊಲೀಸರು ಅನುಸರಿಸಿದರು. ಪ್ರಾರಂಭದಲ್ಲಿ ಈ ನೋಂದಣಿ ಫಲಕಗಳು ಮಾಲೀಕರ ಇನಿಷಿಯಲ್ಸ್ ಮಾತ್ರ ಹೊಂದಿದ್ದವು. ಮೋಟಾರು ವಾಹನಗಳ ಸಂಖ್ಯೆ ಹೆಚ್ಚಿದಂತೆ, ಅಕ್ಷರಗಳು ಮತ್ತು ಸಂಖ್ಯೆಗಳನ್ನು ಹೊಂದಿಸಿ ನೋಂದಣಿ ಮಾಡುವ ಪದ್ಧತಿ ಜಾರಿಗೆ ಬಂತು.
- ೧೯೦೩ರಲ್ಲಿ ಗ್ರೆಟ್ ಬ್ರಿಟನ್ ಚಾಲನಾ ಲೈಸನ್ಸ್‌ನ ವ್ಯವಸ್ಥೆಯನ್ನು ಮೊದಲು ಪ್ರಾರಂಭಿಸಿತು. ಆಗ ಚಾಲಕನು ಮೋಟಾರು ವಾಹನ ನೋಂದಣಿಗೆ ಒಂದು ಪೌಂಡನ್ನು, ಮೋ. ವಾಹನ ಚಾಲನಾ ಲೈಸೆನ್ಸ್‌ಗೆ ಐದು ಷಿಲ್ಲಿಂಗ್‌ಗಳನ್ನು ನೀಡಬೇಕಾಗಿತ್ತು.

  ತುಂಬಾ ಕುತೂಹಲದ ಸಂಗತಿಯೆಂದರೆ ಆಗ ಚಾಲನಾ ಸಾಮರ್ಥ್ಯ ಪರೀಕ್ಷೆ ಇರಲಿಲ್ಲ. ಅಂಚೆ ಕಛೇರಿಯಲ್ಲಿ ಹಣ ಪಾವತಿಸಿ ಲೈಸನ್ಸ್ ಪಡೆಯಬಹುದಾಗಿತ್ತು.
- ೧೮೯೮ರಲ್ಲಿ ಭಾರತಕ್ಕೆ ಮೊದಲು ಕಾರು ತಂದವರು ಮೆ॥ ಕ್ರಾಂಪ್ಟನ್ ಗ್ರೀವ್ಸ್ ಕಂಪನಿಯ ಪೋಸ್ಟರ್ ಅವರು.
- ೧೯೦೧ರಲ್ಲಿ ಭಾರತೀಯನಾಗಿ ಜಮ್‌ಶೆಡ್‌ಜಿ ಟಾಟ ಅವರು ಕಾರಿನ ಮೊದಲ ಮಾಲೀಕರಾದರು.

➢ ೧೯೦೫ರಲ್ಲಿ ಶ್ರೀಮತಿ ಸುಝನ್ ಆರ್.ಡಿ. ಟಾಟ ಅವರು ಭಾರತದಲ್ಲಿ ಮೊಟ್ಟ ಮೊದಲ ಮಹಿಳೆಯಾಗಿ ಕಾರು ನಡೆಸಿದರು.

➢ ೧೯೨೦ರಲ್ಲಿ ಭಾರತದಲ್ಲಿ ಒಂದು ಗ್ಯಾಲನ್ (೪.೫ ಲೀಟರ್) ಪೆಟ್ರೋಲ್ ಬೆಲೆ ೦೬ ಪೈಸೆ.

➢ ೧೯೨೮ರಲ್ಲಿ ಭಾರತದಲ್ಲಿ ಕಾರುಗಳ ಬೆಲೆ ರೂ. ೨,೪೦೦ ರಿಂದ ರೂ. ೩,೦೦೦ ಷೆವರ್‌ಲೇ ಟ್ರಕ್ ಬೆಲೆ ರೂ. ೨,೭೦೦.

➢ ಈಜಿಪ್ಟ್‌ನಲ್ಲಿ ಚಾಲಕನು ೬ ಮೀಟರ್ ಮುಂದಕ್ಕೆ ಮತ್ತು ಅಷ್ಟೇ ದೂರ ಹಿಂಚಲನೆಯಲ್ಲಿ(Reverse) ವಾಹನ ನಡೆಸಿದರೆ ಚಾಲನ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಲೈಸೆನ್ಸ್ ಪಡೆಯುವನು.

➢ ಮೊಟ್ಟಮೊದಲ ರಸ್ತೆ ಅಪಘಾತ: ೧೮೯೬ ಮೇ ೩೦ರಂದು ನ್ಯೂಯಾರ್ಕ್ ನಗರದಲ್ಲಿ ಕಾರು ಬೈಸಿಕಲ್‌ಗೆ ಡಿಕ್ಕಿಯಾಗಿ ಥಾಮಸ್ ಎಂಬ ವ್ಯಕ್ತಿಯ ಕಾಲು ಮುರಿಯಿತು.

➢ ಮೊಟ್ಟಮೊದಲ ಮರಣ ತಂದ ಅಪಘಾತ : ೧೮೯೯ ಫೆಬ್ರವರಿ ೨೬ರಂದು ಲಂಡನ್‌ನ ಗ್ರೋವ್ ಬೆಟ್ಟದ ತಿರುವಿನಲ್ಲಿ ಸಂಭವಿಸಿದ ಅಪಘಾತದಲ್ಲಿ ಚಾಲಕ ಮರಣ ಹೊಂದಿದನು.

➢ **ಹಿನ್ನೋಟದ ಕನ್ನಡಿ:** ಇದರ ಮೂಲವು 'ದಿ ವುಮನ್ ಅಂಡ್ ಕಾರ್' ಪುಸ್ತಕವಾಗಿದೆ. ಅದು ಸ್ತ್ರೀ ಚಾಲಕರಿಗೆ ತಮ್ಮ ಸೌಂದರ್ಯವನ್ನು ಪ್ರಸಾದನ ಮಾಡಿಕೊಳ್ಳಲು ಒಂದು ಚಿಕ್ಕ ಕನ್ನಡಿಯನ್ನು, ಚಾಲಕನ ಸೀಟ್‌ನ ಕೆಳಗೆ ಇಟ್ಟುಕೊಳ್ಳಲು ತಿಳಿಸಿತು. ಕ್ಷಣ ಕ್ಷಣಕ್ಕೂ ಆ ಸ್ತ್ರೀಯರು ಪ್ರಸಾದನ ಮಾಡಿಕೊಳ್ಳುವಾಗ ಹಿಂದೆ ಬರುವ ವಾಹನವನ್ನು ಗಮನಿಸಲು ಸಾಧ್ಯವೆಂದು ಅದು ತಿಳಿಸಿತು. ಈ ಆಲೋಚನೆ ಅನಂತರದಲ್ಲಿ ೧೯೧೪ರ ಸುಮಾರಿನಲ್ಲಿ ಎಲ್ಲ ಕಾರುಗಳಿಗೂ ಹಿನ್ನೋಟದ ಕನ್ನಡಿಯನ್ನು ಅಳವಡಿಸಲು ಕಾರಣವಾಯಿತು.

➢ ೧೯೧೬ರಲ್ಲಿ ಅಮೆರಿಕವು ಮೊದಲ ವಿಂಡ್‌ಸ್ಕ್ರೀನ್ ವೈಪರನ್ನು ಕಾರಿಗೆ ಅಳವಡಿಸಿತು. ಅದಕ್ಕೂ ಮೊದಲು ಚಾಲಕರು ಕತ್ತರಿಸಿದ ಆಲೂಗಡ್ಡೆಯಿಂದ ವಿಂಡ್‌ಸ್ಕ್ರೀನನ್ನು ಶುದ್ಧಗೊಳಿಸುತ್ತಿದ್ದರು.

೧. ರಸ್ತೆಗಳು : ಅಪಘಾತಗಳು ಮತ್ತು ಚಾಲಕ

ಸಂಪರ್ಕ ಸಾಧನಗಳಲ್ಲಿ ಭೂಸಂಪರ್ಕ, ಜಲಸಂಪರ್ಕ ಮತ್ತು ವಾಯುಸಂಪರ್ಕ ಎಂಬ ಮೂರು ಬಗೆಗಳಿವೆ. ಭೂ ಸಂಪರ್ಕದಲ್ಲಿ ರಸ್ತೆ ಮತ್ತು ರೈಲು ಸಂಪರ್ಕಗಳೆಂದು ಎರಡು ವಿಭಾಗಗಳಿವೆ. ಇಲ್ಲಿಯೂ ರಸ್ತೆ ಸಂಪರ್ಕವೆಂಬುದು ಅತ್ಯಂತ ವ್ಯಾಪಕವೂ ಪುರಾತನವೂ ಆಗಿದೆ. ರಸ್ತೆಯು ಅನಾದಿಕಾಲದಿಂದ ಪ್ರಾಣಿಗಳು ಮತ್ತು ಜನಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಲು ಸಹಾಯಕವಾಗಿ ನಿಂತಿವೆ.

ವೈಜ್ಞಾನಿಕ ಪ್ರಗತಿಯಾಗುತ್ತ ಮೋಟಾರು ವಾಹನಗಳು ರಸ್ತೆಯ ಮೇಲೆ ಚಲಿಸಲು ಪ್ರಾರಂಭಿಸಿದ ನಂತರ ರಸ್ತೆಯ ಪ್ರಾಮುಖ್ಯ ಇನ್ನೂ ಹೆಚ್ಚಿದೆ. ಅದು ರಾಷ್ಟ್ರದ ಮೂಲೆಮೂಲೆಗಳಿಗೆ ಸಂಪರ್ಕ ಸಾಧಿಸಿದೆ. ಅದು ಜನರನ್ನು ಹಾಗೂ ಸರಕನ್ನು ಸಾಗಿಸುತ್ತ ಜನರ ಆರ್ಥಿಕ, ಸಾಮಾಜಿಕ ಜೀವನ ನಿರ್ವಹಣೆಯ ಅಗತ್ಯಗಳನ್ನು ಪೂರೈಸುತ್ತ ಅವರ ಬದುಕಿನ ಭಾಗವೇ ಆಗಿ ಹೋಗಿದೆ.

ಇಂದು ಜಾಗತಿಕರಣ, ಖಾಸಗೀಕರಣ, ಉದಾರಿಕರಣಗಳಿಂದಾಗಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿಯಲ್ಲಿ ಉತ್ತಮರಸ್ತೆ ಪ್ರಮುಖ ಪಾತ್ರವಹಿಸುತ್ತಿದೆ. ರಸ್ತೆ ಸಂಚಾರ (ಟ್ರಾಫಿಕ್) ಎಂದರೆ ಮೋಟಾರು ವಾಹನಗಳು, ಮೋಟಾರುವಾಹನ ಅಲ್ಲದವುಗಳಿಂದ ಜನರು ರಸ್ತೆಯ ಮೇಲೆ ಸರಕುಗಳನ್ನು ಸಾಗಿಸಲು, ತಾವು ಪ್ರಯಾಣಿಸಲು ಮತ್ತು ಪಾದಚಾರಿಗಳು ನಡೆದಾಡಲು ಉಪಯೋಗಿಸುವ ಚಲನ ಶೀಲ ವ್ಯವಸ್ಥೆಯಾಗಿದೆ. ಆ ಸಂಚಾರದಲ್ಲಿ ತಳ್ಳುಗಾಡಿಗಳಿವೆ, ಪ್ರಾಣಿಗಳು ಓಡಾಡುತ್ತವೆ.

ಪ್ರಪಂಚದ ಒಟ್ಟು ವಾಹನಗಳಲ್ಲಿ ನಮ್ಮ ದೇಶದಲ್ಲಿರುವುದು ಶೇ. ೧ ರಷ್ಟು ಮಾತ್ರ. ಆದರೆ ಅಪಘಾತದ ಪ್ರಮಾಣ ಶೇ. ೧೦. ನಮ್ಮ ದೇಶದಲ್ಲಿ ೨೦೦೯ರಲ್ಲಿ ೧.೩ ಲಕ್ಷ ಜನ ರಸ್ತೆ ಅಪಘಾತದಲ್ಲಿ ಸತ್ತಿದ್ದಾರೆ. ಪ್ರತಿ ಗಂಟೆಗೆ ೧೩ ಜನ ರಸ್ತೆ ಅಪಘಾತದಲ್ಲಿ ಸಾಯುತ್ತಿದ್ದಾರೆ. ಹೀಗೆ ಸಾಯುವವರಲ್ಲಿ ಹೆಚ್ಚು ಜನ ಅವರ ಕುಟುಂಬದ ಆಧಾರವಾಗಿದ್ದ ಏಕೈಕ ಸಂಪಾದನೆ ಮಾಡುವ ವ್ಯಕ್ತಿಗಳಾಗಿರುತ್ತಾರೆ. ಈ ಅಪಘಾತಕ್ಕೆ ಒಳಗಾದವರಲ್ಲಿ ಶೇ. ೮೫ರಷ್ಟು ಪುರುಷರಾಗಿದ್ದು, ಅವರಲ್ಲಿ ಶೇ. ೭೦ರಷ್ಟು ಜನ ೩೦ ರಿಂದ ೫೯ ವಯೋಮಾನದ ದುಡಿಯುವ ವ್ಯಕ್ತಿಗಳಾಗಿದ್ದಾರೆ.

ಅದು ಯಾವ ಬಗೆಯ ಮೋಟಾರು ವಾಹನವೇ ಇರಲಿ, ಇದುವರೆಗಿನ ಅಪಘಾತಗಳನ್ನೆಲ್ಲ ಗಮನಿಸಿದರೆ ಬಹುಪಾಲು ಅಪಘಾತಗಳೆಲ್ಲ ದೇಶದ ಮಹಾನಗರಗಳಲ್ಲೆ ನಡೆದಿರುವುದು ನಮಗೆ ವೇದ್ಯವಾಗುತ್ತದೆ. ಇದು ಯಾಕೆ ಹೀಗೆ ಎಂದು ತಲೆಕೆಡಿಸಿಕೊಳ್ಳಬೇಕಾದ ಅಗತ್ಯ ಇಲ್ಲ. ಮಿತಿ ಮೀರಿದ ಜನ ಸಾಂದ್ರತೆ ಇರುವಲ್ಲೇ ಹೆಚ್ಚು ಅಪಘಾತಗಳು ಸಂಭವಿಸಿರುವ ಅಂಶ ನಿಚ್ಚಳವಾಗಿ ಕಂಡು ಬರುತ್ತದೆ. ಅಪಘಾತಗಳ

ತೀವ್ರತೆ ಎಷ್ಟೆಂದು ತಿಳಿಯಲು ಕರ್ನಾಟಕದ ಅಂಕಿಅಂಶಗಳೆಡೆ ಒಮ್ಮೆ ಪಕ್ಷಿನೋಟ ಬೀರಬಹುದು.

ವರ್ಷ	ಒಟ್ಟು ಅಪಘಾತಗಳು	ಸಾವುಗಳು	ಗಾಯಾಳುಗಳು
೨೦೦೭	೩೫೨೮೪	೮೬೮೬	೬೦೪೩೦
೨೦೦೮	೪೫೫೭೯	೮೮೫೬	೬೯೯೧೭
೨೦೦೯	೪೪೭೧೩	೮೭೮೦	೬೦೬೪೨

ರಸ್ತೆ ಅಪಘಾತದಲ್ಲಿ ಸತ್ತವರ ಕುಟುಂಬ ನಿರಾಧಾರವಾದರೆ, ಗಾಯಾಳುಗಳು ಪರಾವಲಂಬಿಯಾಗಿ ದೈಹಿಕ ಹಾಗೂ ಮಾನಸಿಕ ರೋಗಿಗಳಾಗುತ್ತಾರೆ. ಅವರಲ್ಲಿ ಕೆಲವರು ಬದುಕಿದ್ದೂ ಸತ್ತಂತವರಾಗಿಬಿಡುತ್ತಾರೆ. ಅಪಘಾತಗಳಿಂದ ಆಗುವ ಮಾನವ ಸಂಪತ್ತಿನ ನಷ್ಟದ ಜೊತೆಗೆ ಆಸ್ತಿಪಾಸ್ತಿ ನಷ್ಟವಾಗಿ ರಾಷ್ಟ್ರದ ಆರ್ಥಿಕ ಪರಿಸ್ಥಿತಿಯ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ.

ಈ ಅಪಘಾತಗಳಿಗೆ ಎಲ್ಲರಿಗೂ ತಿಳಿದಿರುವ ಹಲವು ಕಾರಣಗಳಿವೆ. ಅವುಗಳೆಂದರೆ: ಕೆಟ್ಟ ರಸ್ತೆಗಳು, ನಿರ್ವಹಣೆ ಸರಿಯಾಗಿಲ್ಲದ ರಸ್ತೆಗಳು, ರಸ್ತೆನಿಯಮ ಮತ್ತು ನಿಬಂಧನೆಗಳನ್ನು ಸರಿಯಾಗಿ ತಿಳಿದು ವಾಹನ ಚಾಲನೆ ಮಾಡದ ಚಾಲಕರು, ಹೆಲ್ಮೆಟ್ ಸೀಟ್ ಬೆಲ್ಟ್ ಉಪಯೋಗಿಸದಿರುವುದು, ಮದ್ಯಪಾನ ಸೇವಿಸಿ ವಾಹನ ಚಾಲನೆ ಮಾಡುವುದು, ಮೋಟಾರು ವಾಹನ ನಿಯಮಗಳನ್ನು ಸರಿಯಾಗಿ ಜಾರಿಗೊಳಿಸದಿರುವುದು, ಅಪಘಾತಕ್ಕೆ ಈಡಾದವರಿಗೆ ತಕ್ಷಣ ಒದಗದ ನೆರವು (Accident relief and traumacare facilities) ಇತ್ಯಾದಿ.

ನಮ್ಮ ದೇಶದ ಅಭಿವೃದ್ಧಿಪರ ಚಾಲನೆಯಾಗಿ ವೈವಿಧ್ಯಪೂರ್ಣವಾದ ಹಾಗೂ ಅತಿವೇಗದ ಮೋಟಾರು ವಾಹನಗಳಿವೆ. ಅವು ಎಷ್ಟೇ ವಿಶ್ವಸನೀಯವಾಗಿದ್ದರೂ ವಾಹನ ಚಾಲಕರ ಹಾಗೂ ರಸ್ತೆಯನ್ನು ಉಪಯೋಗಿಸುವ ಇತರರೆಲ್ಲರ ಸುರಕ್ಷತೆಯಿಂದ ವಾಹನ ಚಾಲಕರು ವಾಹನ ಚಾಲನೆಯಲ್ಲಿ ಚತುರರೂ ಪರಿಣತರೂ ಆಗಬೇಕಾಗಿರುವುದು ಇಂದು ತುಂಬಾ ಅವಶ್ಯಕವಾಗಿದೆ. **ಸರಿಯಾದ ವಾಹನ ಚಾಲನಾಭ್ಯಾಸವನ್ನು, ಸುರಕ್ಷಿತ ವಾಹನ ಚಾಲನ ಮನೋಧರ್ಮವನ್ನು ವಾಹನ ಕಲಿಕೆಯ ಪ್ರಾರಂಭದಿಂದಲೇ ಒಂದು ಗುಣವಾಗಿ ಬೆಳೆಸಿಕೊಂಡರೆ ಅವನೊಬ್ಬ ವೈಜ್ಞಾನಿಕ ಯುಗದ ಸತ್ಪ್ರಜೆ ಎನಿಸಿಕೊಳ್ಳುತ್ತಾನೆ.** ಅವನು ರಸ್ತೆ ವಿವೇಚನಾನುಸಾರಿ ಚಾಲಕನಾಗಲು ಅವನಿಗೆ ರಸ್ತೆ ನಿಯಮಗಳ ಸೂಕ್ತ ಪರಿಚಯವಿರಬೇಕು.

ಇಂದು ಅಕ್ಷರಜ್ಞಾನ ಪಡೆದವನಾಗಿರಲಿ, ನಿಕ್ಷರಕುಕ್ಷಿಯಾಗಿರಲಿ ಅವನ ಹಾಗೂ ಇತರರ ಸುರಕ್ಷತೆಗೆ ರಸ್ತೆ ನಿಯಮಗಳನ್ನು ತಿಳಿದಿರಬೇಕಾಗುತ್ತದೆ. **ರಸ್ತೆ ನಿಯಮಗಳು ಹಾಗೂ ಸಂಕೇತಗಳು ಒಂದು ದೇಶದ ಒಂದು ಭಾಷೆಯ ಮಿತಿಗೆ ಒಳಪಟ್ಟಿದ್ದಲ್ಲ. ಅದು ವಿಶ್ವವ್ಯಾಪಿಯಾಗಿದೆ.** ಈ ಜಾಗತಿಕ ಗುಣದ ರಸ್ತೆ ಸಂಕೇತ ಮತ್ತು ರಸ್ತೆ ನಿಯಮಗಳನ್ನು ತಿಳಿಯಬೇಕಾದ್ದು ಇಂದಿನ ಅವಶ್ಯಕತೆಯಾಗಿದೆ.

ನಮ್ಮ ದೇಶದಲ್ಲಿ ಮೋಟಾರು ವಾಹನಗಳ ತಯಾರಿಕೆ, ನೋಂದಣಿ, ಲೈಸನ್ಸ್ ನೀಡುವುದು, ಪರವಾನಗಿ, ವಾಹನಗಳನ್ನು ಸಜ್ಜುಗೊಳಿಸುವುದು ಮತ್ತು ಸುಸ್ಥಿತಿಯಲ್ಲಿಡುವುದು; ಸಂಚಾರ ನಿಯಂತ್ರಣ, ರಸ್ತೆ ನಿಯಮಗಳು, ವಾಹನಗಳ ವಿಮೆ, ವಾಹನಕ್ಕೆ ಸಂಬಂಧಿಸಿದ ಅಪರಾಧಗಳು, ದಂಡನೆಗಳು ಮತ್ತು ಪ್ರಕ್ರಿಯೆಗಳು ಮೋಟಾರು ವಾಹನ ಕಾಯ್ದೆ ೧೯೮೮ ಮತ್ತು ಕೇಂದ್ರ ಮೋಟಾರು ವಾಹನ ನಿಯಮ ೧೯೮೯ರ ಪ್ರಕಾರ ಮತ್ತು ಅದರಡಿ ಮಾಡಿರುವ ಪ್ರತಿರಾಜ್ಯಗಳ ಮೋಟಾರು ವಾಹನ ನಿಯಮಗಳನ್ನು ಅನುಸರಿಸಿವೆ.

ಇದರಲ್ಲಿ ಪ್ರಮುಖವಾಗಿ ರಸ್ತೆ ನಿಯಮಕ್ಕೆ ಸಂಬಂಧಿಸಿದಂತೆ ಪ್ರತಿಯೊಬ್ಬ ಚಾಲಕನೂ ಒಳಗೊಂಡಂತೆ ರಸ್ತೆ ಉಪಯೋಗಿಸುವ ಪ್ರತಿಯೊಬ್ಬ ಪ್ರಜೆಯೂ ತಿಳಿಯಲೇಬೇಕಾದ ಅವಶ್ಯಕ ನಿಯಮಾವಳಿಗಳನ್ನು ತಿಳಿಸಿಕೊಡುವುದೇ ಈ ಗ್ರಂಥದ ಉದ್ದೇಶ.

೨. ಸಂಚಾರ ಚಿಹ್ನೆಗಳು

ಮೋಟಾರು ವಾಹನ ಚಾಲಕನು ಮೋಟಾರು ವಾಹನ ಕಾಯ್ದೆ ೧೯೮೮ರ ಅನುಸೂಚಿಯಲ್ಲಿ ಸಲಹೆ ಮಾಡಿರುವ ರೀತಿನೀತಿಗಳನ್ನು ಸ್ಪಷ್ಟವಾಗಿ ತಿಳಿದಿರಬೇಕು. ಆ ರೀತಿನೀತಿಗಳು ಯಾವುವೆಂದರೆ, ಆಜ್ಞಾರ್ಥಕ ಹಾಗೂ ಕಡ್ಡಾಯ ಚಿಹ್ನೆಗಳು, ಎಚ್ಚರಿಕೆ ನೀಡುವ ಚಿಹ್ನೆಗಳು ಮತ್ತು ಮಾಹಿತಿ ನೀಡುವ ಚಿಹ್ನೆಗಳು.

ಆಜ್ಞಾರ್ಥಕ ಹಾಗೂ ಕಡ್ಡಾಯ ಚಿಹ್ನೆಗಳ ಮಾರ್ಗದರ್ಶನದಂತೆ ವಾಹನವನ್ನು ನಡೆಸಬೇಕು. ಎಚ್ಚರಿಕೆ ನೀಡುವ ಚಿಹ್ನೆಗಳು ಆಯಾ ರಸ್ತೆಗಳ ಸ್ವರೂಪದ ತಿಳಿವಳಿಕೆಯನ್ನು ಕೊಡುವ ಕಾರಣ ಚಾಲಕನು ಅವುಗಳಿಗೆ ಸ್ಪಂದಿಸುವುದರಿಂದ ಅಪಘಾತಗಳನ್ನು ತಡೆಗಟ್ಟಬಹುದು. ಮಾಹಿತಿ ನೀಡುವ ಚಿಹ್ನೆಗಳು ಮಾರ್ಗಸೂಚಿ ಫಲಕಗಳನ್ನು, ಆ ಮಾರ್ಗದಲ್ಲಿ ದೊರಕುವ ಸೌಲಭ್ಯಗಳಾದ ಟೆಲಿಫೋನ್, ಪೆಟ್ರೋಲ್ ಬಂಕ್, ಆಸ್ಪತ್ರೆ, ವಿರಾಮ ಸ್ಥಳ ಹಾಗೂ ಇತರ ಮಾಹಿತಿಗಳನ್ನು ನೀಡುತ್ತವೆ. ಈ ಅನುಸೂಚಿಯ ಪ್ರತಿಯೊಂದು ಚಿಹ್ನೆಯೂ ಸುರಕ್ಷಿತ ವಾಹನ ಚಾಲನೆಗೆ ಕೈದೀವಿಗೆಯಂತಿವೆ. ತಾಳ್ಮೆಯಿಂದ ಓದಿ ಅರ್ಥ ಮಾಡಿಕೊಳ್ಳಬೇಕಷ್ಟೇ.

ಪ್ರತಿಯೊಬ್ಬ ವಾಹನ ಚಾಲಕನು ಆಜ್ಞಾರ್ಥಕ ಹಾಗೂ ಕಡ್ಡಾಯ ಚಿಹ್ನೆಗಳು ಸೂಚಿಸುವ ಎಲ್ಲ ಸೂಚನೆಗನುಗುಣವಾಗಿ ಮತ್ತು ಕೇಂದ್ರ ಮೋಟಾರು ವಾಹನ ನಿಯಮ ೧೯೮೯ರ ಪರಿಶಿಷ್ಟ–೨ರಲ್ಲಿ ವಿವರಿಸಿರುವ 'ರಸ್ತೆ ನಿಯಂತ್ರಣದ ನಿಯಮ' (Rules of the Road Regulations, ೧೯೮೯) ಗಳಿಗನುಗುಣವಾಗಿ ವಾಹನವನ್ನು ನಡೆಸಬೇಕು, ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಸಂಚಾರ ನಿಯಂತ್ರಣದಲ್ಲಿ ತೊಡಗಿರುವ ಯಾರೇ ಪೊಲೀಸ್ ಅಧಿಕಾರಿಯು ಅವನಿಗೆ ನೀಡುವ ಎಲ್ಲ ನಿರ್ದೇಶನಗಳನ್ನು ಪಾಲಿಸಬೇಕು. (ಮೋಟಾರು ವಾಹನ ಕಾಯ್ದೆ ೧೯೮೮, ಕಲಮು ೧೧೯)

ಮೋಟಾರು ವಾಹನಗಳ ಕಾಯಿದೆ 1988ರ ಅನುಸೂಚಿಯಲ್ಲಿ ನಿರೂಪಿಸಲಾದ ಸಂಚಾರ ಚಿನ್ಹೆಗಳು

M – ಕಡ್ಡಾಯ ಚಿನ್ಹೆಗಳು

M-1



ನಿಲ್ಲಿ

M-2



ದಾರಿಕೊಡಿ

M-3



ನೇರ ದಾರಿ ನಿಷೇಧಿಸಿದೆ ಅಥವಾ ಪ್ರವೇಶವಿಲ್ಲ

M-4A



M-4B



ಏಕಮುಖ ಸಂಚಾರದ ಚಿನ್ಹೆ

M-5



ಎರಡು ದಿಕ್ಕಿನಲ್ಲಿ ವಾಹನ ಸಂಚಾರ ನಿಷೇಧಿಸಿದೆ

M-6



ಎಲ್ಲ ಮೋಟಾರು ವಾಹನಗಳನ್ನು ನಿಷೇಧಿಸಿದೆ

M-7



ಟ್ರಕ್‌ಗಳನ್ನು ನಿಷೇಧಿಸಿದೆ

M-8



ಎತ್ತಿನ ಗಾಡಿ ಮತ್ತು ಕೈಗಾಡಿಗಳನ್ನು ನಿಷೇಧಿಸಿದೆ

M-9



ಎತ್ತಿನ ಗಾಡಿಗಳನ್ನು ನಿಷೇಧಿಸಿದೆ

M-10



ಟಾಂಗಾಗಳನ್ನು ನಿಷೇಧಿಸಿದೆ

M-11



ಕೈಗಾಡಿಗಳನ್ನು ನಿಷೇಧಿಸಿದೆ

M-12



ಸೈಕಲ್
ನಿಷೇಧಿಸಿದೆ

M-13



ಪಾದಚಾರಿಗಳನ್ನು
ನಿಷೇಧಿಸಿದೆ

M-14



ಬಲತಿರುವು
ನಿಷೇಧಿಸಿದೆ

M-15



ಎಡ ತಿರುವು
ನಿಷೇಧಿಸಿದೆ

M-16



U ತಿರುವು
ನಿಷೇಧಿಸಿದೆ

M-17



ಓವರ್ ಟೇಕಿಂಗ್
ನಿಷೇಧಿಸಿದೆ

M-18



ಹಾರನ್
ನಿಷೇಧಿಸಿದೆ

M-19



ನಿಲುಗಡೆ
ಮಾಡಕೂಡದು

M-20



ನಿಲ್ಲಿಸಬಾರದು
ನಿಂತಿರಬಾರದು

M-21



ವೇಗಮಿತಿ

M-22



ಅಗಲ ಮಿತಿ

M-23



ಎತ್ತರ ಮಿತಿ

M-24



ಉದ್ದ ಮಿತಿ

M-25



ಹೊರೆ ಮಿತಿ

M-26



ಆಕ್ಸಲ್ ಹೊರೆ ಮಿತಿ

M-27



ನಿರ್ಬಂಧಕೊನೆಗೊಳ್ಳುವ ಚಿನ್ಹೆ

M-28



ಕಡ್ಡಾಯವಾಗಿ ಎಡಕ್ಕೆ ತಿರುಗಿ

M-29



ಕಡ್ಡಾಯವಾಗಿ ಮುಂದಕ್ಕೆ ಹೋಗಿ

M-30



ಕಡ್ಡಾಯವಾಗಿ ಮುಂದೆ ಬಲಕ್ಕೆ ತಿರುಗಿ

M-31



ಕಡ್ಡಾಯವಾಗಿ ಮುಂದಕ್ಕೆ ಅಥವಾ ಬಲಕ್ಕೆ ತಿರುಗಿ

M-32



ಕಡ್ಡಾಯವಾಗಿ ಮುಂದಕ್ಕೆ ಅಥವಾ ಎಡಕ್ಕೆ ತಿರುಗಿ

M-33



ಕಡ್ಡಾಯವಾಗಿ ಎಡಕ್ಕೆ ಚಲಿಸಿ

M-34



ಕಡ್ಡಾಯ ಸೈಕಲ್ ದಾರಿ

M-35



ಕಡ್ಡಾಯವಾಗಿ ಹಾರನ್ ಮಾಡಿ

M-36



ಕಡ್ಡಾಯವಾಗಿ ಬಸ್ ನಿಲುಗಡೆ

C – ಎಚ್ಚರಿಕೆ ಚಿನ್ಹೆಗಳು

C-1

ಸಾಮಾನ್ಯ ವಿನ್ಯಾಸ

C-2

ಬಲಗಡೆ ತಿರುವು

C-3

ಎಡಗಡೆ ತಿರುವು

C-4

ಅಂಕುಡೊಂಕು

C-5

ಎಡಗಡೆ ಅಂಕುಡೊಂಕು

C-6

ಬಲ ಹಿಮ್ಮುರಿ

C-7

ಎಡ ಹಿಮ್ಮುರಿ

C-8

ಕಡಿದಾದ ಏರು

C-9

ಕಡಿದಾದ ಇಳಿವು

C-10

ಮುಂದೆ ರಸ್ತೆ ಕಿರಿದಾಗಿದೆ

C-11

ಮುಂದೆ ರಸ್ತೆ ಅಗಲಗೊಳ್ಳುತ್ತದೆ

C-12

ಕಿರಿದಾದ ಸೇತುವೆ

C-13

ಜಾರು ರಸ್ತೆ

C-14



ಗರಸು ಮಣ್ಣು
(ಜೆಲ್ಲಿ / ಮರಳು)

C-15



ಸೈಕಲ್
ದಾಟುವ ಸ್ಥಳ

C-16



ಪಾದಚಾರಿಗಳು
ದಾಟುವ ಸ್ಥಳ

C-17



ಮುಂದೆ ಶಾಲೆಯಿದೆ

C-18



ಕಾರ್ಯನಿರತ ಜನ

C-19



ದನಗಳು

C-20



ಕಲ್ಲುಬಂಡೆಗಳು
ಬೀಳಬಹುದು

C-21



ನಾವೆ
ದಾಟು ಸ್ಥಳ

C-22



ಅಡ್ಡ
ರಸ್ತೆ

C-23



ಸಮಾನಾಂತರ
ರಸ್ತೆಯಲ್ಲಿ 'U' ತಿರುವು

C-24



ಪಾರ್ಶ್ವರಸ್ತೆ ಬಲಕ್ಕೆ

C-25



ಪಾರ್ಶ್ವರಸ್ತೆ ಎಡಕ್ಕೆ

C-26-A



Y ಕವಲು

C-26-B



Y ಕವಲು

C-26-C



Y ಕವಲು

C-27



T ಕವಲು

C-28-A



ಎಡಬಲ
ಕವಲು ರಸ್ತೆಗಳು

C-28-B



ಬಲ ಎಡ
ಕವಲು ರಸ್ತೆಗಳು

C-29-A



ಮುಖ್ಯರಸ್ತೆ
ಮುಂದಿದೆ

C-29-B



ಮುಖ್ಯರಸ್ತೆ
ಮುಂದಿದೆ

C-30



ಸುತ್ತಿರುಗು
ರಸ್ತೆ

C-31



ಅಪಾಯಕಾರಿಹಳ್ಳ

C-32



ರಸ್ತೆ ಉಬ್ಬರ ಅಥವಾ
ತಗ್ಗುದಿಣ್ಣೆರಸ್ತೆ

C-33



ಮುಂದೆ ಎಡೆ ಇದೆ

C-34



200 ಮೀಟರುಗಳು

C-35



50–100 ಮೀಟರುಗಳು
ಸಮತಟ್ಟು ಮತ್ತು
30–60 ಮೀಟರುಗಳು ಬೆಟ್ಟಪ್ರದೇಶ

ಕಾವಲು ರಹಿತ ಲೆವೆಲ್ ಕ್ರಾಸಿಂಗ್

C-36



200 ಮೀಟರುಗಳು

C-37




50–100 ಮೀಟರುಗಳು
ಸಮತಟ್ಟು ಮತ್ತು
30–60 ಮೀಟರುಗಳು ಬೆಟ್ಟಪ್ರದೇಶ

ಕಾವಲು ಸಹಿತ ಲೆವೆಲ್ ಕ್ರಾಸಿಂಗ್

E- ಮಾಹಿತಿ ಸೂಚನಾ ಚಿನ್ಹೆಗಳು

E-1




ಸ್ಥಳ ದಿಕ್ ಸೂಚಿ ಫಲಕ

E-2




ಸ್ಥಳಗಳ ದೂರ

E-3




E-4



ಮರು ದೃಢೀಕರಣ ಫಲಕ

E-5




ಸ್ಥಳದ ಹೆಸರಿನ ಫಲಕ

E-6



ಸಾರ್ವಜನಿಕ ದೂರವಾಣಿ

E-7



ಪೆಟ್ರೋಲ್ ಪಂಪ್

E-8



ಆಸ್ಪತ್ರೆ

E-9



ಪ್ರಥಮ ಚಿಕಿತ್ಸೆ

E-10



ತಿನಿಸು ಸ್ಥಳ

E-11



ನವಚೈತನ್ಯ ತಾಣ

E-12




ವಿಶ್ರಾಂತಿ ಸ್ಥಳ

E-13



ಮುಂದೆ ದಾರಿಯಿಲ್ಲ

E-14



ಬದಿಯಲ್ಲಿ ನೇರ ರಸ್ತೆಯಿರುವುದಿಲ್ಲ

E-15



ಈ ಬದಿಯಲ್ಲಿ ವಾಹನ ನಿಲುಗಡೆ

E-16



ಎರಡು ಬದಿಗಳಲ್ಲಿ ವಾಹನ ನಿಲುಗಡೆ

E-17



ಸ್ಕೂಟರ್ ಹಾಗೂ ಮೋಟಾರ್ ಸೈಕಲ್ ನಿಲ್ಲಿಸುವ ಸ್ಥಳ

E-18



ಸೈಕಲ್ ನಿಲ್ಲಿಸುವ ಸ್ಥಳ

E-19



ಟ್ಯಾಕ್ಸಿ ನಿಲ್ಲುವ ಸ್ಥಳ

E-20



ಆಟೋರಿಕ್ಷಾಗಳು ನಿಲ್ಲುವ ಸ್ಥಳ

NO.E-21



ಸೈಕಲ್ ರಿಕ್ಷಾ ನಿಲ್ಲುವ ಸ್ಥಳ

NO.E-22



ಪ್ರವಾಹ ಮಟ್ಟ ಮಾಪಕ

ಸಂಚಾರಿ ದೀಪ ಸಂಕೇತಗಳು



ಸ್ಥಿರವಾದ ಕೆಂಪು ದೀಪ

ನಿಲ್ಲು ಸೂಚನೆ : ಈ ಕೆಂಪು ಸಂಕೇತ ಇರುವವರೆಗೂ ಕವಲು ರಸ್ತೆ ನಿಲ್ಲುಗೆರೆ ಅಥವಾ ಅಡ್ಡದಾರಿಯನ್ನು ತಲುಪುವ ಮೊದಲೇ ವಾಹನವನ್ನು ಸಂಪೂರ್ಣ ನಿಲ್ಲಿಸಬೇಕು.

ಕೆಂಪು ದೀಪ ಕಂಡಾಗ ಬಲಕ್ಕೆ ತಿರುವು : ಕವಲು ಹಾದಿಗಳ ಬಳಿ ಕೆಂಪು ದೀಪಕ್ಕೆ ಬಲಕ್ಕೆ ತಿರುಗಬೇಕಾಗಿಲ್ಲ ಎಂಬ ಚಿಹ್ನೆ ಇಲ್ಲದ ಹೊರತು ಕೆಂಪು ದೀಪ ಕಂಡಾಗ ನೀವು ಸಂಪೂರ್ಣ ನಿಂತ ಮೇಲೆ ಬಲಕ್ಕೆ ತಿರುಗಬಹುದು. ಹೀಗೆ ಬಲಕ್ಕೆ ತಿರುಗುವಾಗ ಪಾದಚಾರಿಗೆ ಹಾಗೂ ಇತರ ಎಲ್ಲ ವಾಹನ ಸಂಚಾರಕ್ಕೆ ರಸ್ತೆಯ ಹಕ್ಕನ್ನು ಬಿಟ್ಟುಕೊಡಬೇಕು.

ಸ್ಥಿರವಾದ ಹಳದಿ ದೀಪ :



ಇದು ದೀಪವು ಹಸಿರಿನಿಂದ ಕೆಂಪಿಗೆ ಬದಲಾಗುತ್ತದೆ ಎಂಬುದರ ಸೂಚನೆ. ಎದುರಿನಿಂದ ಬರುವ ವಾಹನಗಳು ಸುರಕ್ಷಿತವಾಗಿ ನಿಂತು ದೀಪವು ಕೆಂಪಗೆ ತಿರುಗುವ ಮೊದಲು ಕವಲು ಹಾದಿಯ ಬಳಿ ಬರುವ ವಾಹನಗಳೆಲ್ಲ ಹಾದು ಹೋಗುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂಬುದು ಇದರ ಉದ್ದೇಶ. ಸುರಕ್ಷಿತವಾಗಿ ನಿಲ್ಲಿಸಿಕೊಳ್ಳುವುದಕ್ಕಾಗದಷ್ಟು ನೀವು ತೀರ ಸಮೀಪಕ್ಕೆ ಬಂದಿದ್ದರೆ ಅಡ್ಡ ಹಾಯಿಯುವ ರಸ್ತೆಯನ್ನು ಎಚ್ಚರಿಕೆಯಿಂದ ಹಾದು ಮುಂದೆ ಸಾಗಿ.

ಸ್ಥಿರವಾದ ಹಸಿರು ದೀಪ :



ಇತರ ವಾಹನಗಳು ಅಡ್ಡ ಹಾಯಿಯುವ ರಸ್ತೆಯನ್ನು ಸಂಪೂರ್ಣವಾಗಿ ಹಾದುಹೋಗಿವೆಯೆ ಎಂಬುದನ್ನು ಮೊದಲು ಗಮನಿಸಿಕೊಂಡ ನಂತರ ಎಚ್ಚರಿಕೆಯಿಂದ ಮುಂದೆ ಸಾಗಿ. ಮುಂದೆ ಸಾಗುವುದು ಸುರಕ್ಷಿತವೆಂದು ಕಂಡುಕೊಂಡ ನಂತರ ನೀವು ಅಡ್ಡ ಹಾಯುವ ರಸ್ತೆಯನ್ನು ಪ್ರವೇಶಿಸಿ ನೇರ ಮುಂದಕ್ಕೆ ಹೋಗಬಹುದು ಅಥವಾ ನೀವು ತಿರುವು ತಿರುವು ತೆಗೆದುಕೊಳ್ಳುವುದನ್ನು ನಿಷೇಧಿಸುವಂತಹ ಚಿಹ್ನೆ ಅಥವಾ ಇನ್ನಿತರ ಸಂಕೇತಗಳು ಕಂಡುಬರದಿದ್ದರೆ ತಿರುವು ತೆಗೆದುಕೊಳ್ಳಬಹುದು. ಅಡ್ಡದಾರಿಯಲ್ಲಿ ಹಾದು ಹೋಗುತ್ತಿರುವ ಪಾದಚಾರಿಗಳಿಗೆ ಮತ್ತು ವಾಹನಗಳಿಗೆ ಅವಕಾಶ ಮಾಡಿಕೊಡಬೇಕು. ತಿರುವು ತೆಗೆದುಕೊಂಡಾಗ ಪಾದಚಾರಿಗಳ ಬಗ್ಗೆ ವಿಶೇಷ ಎಚ್ಚರಿಕೆ ವಹಿಸಬೇಕು.




ಸ್ಥಿರವಾದ ಹಸಿರು ದೀಪ

ಹಸಿರು ಬಾಣ ತೋರಿಸುವ ದಿಕ್ಕಿನತ್ತ ಎಚ್ಚರಿಕೆಯಿಂದ ಮುಂದೆ ಸಾಗಿ. ಈಗಾಗಲೇ ಅಡ್ಡ ಹಾಯುವ ರಸ್ತೆಯಲ್ಲಿ ಹಾದು ಹೋಗುತ್ತಿರುವ ಪಾದಚಾರಿಗಳಿಗೆ ಮತ್ತು ವಾಹನಗಳಿಗೆ ಅವಕಾಶ ಕೊಡಬೇಕು ಎಂಬುದನ್ನು ನೆನಪಿನಲ್ಲಿಡಿ.



ಮಿನುಗುವ ಕೆಂಪು ದೀಪ

ನೀವು ಸಂಪೂರ್ಣ ನಿಂತು ಬಿಡಬೇಕು. ಎಲ್ಲ ಪಾದಚಾರಿಗಳಿಗೂ ವಾಹನಗಳಿಗೂ ಹಾದುಹೋಗಲು ಅವಕಾಶ ಕೊಡಬೇಕು. ರಸ್ತೆ ತೆರನಾದ ನಂತರ ಮುಂದಕ್ಕೆ ಹೊರಡಬೇಕು.



ಮಿನುಗುವ ಹಳದಿ ದೀಪ

ವಾಹನದ ವೇಗವನ್ನು ನಿಧಾನಗೊಳಿಸಿ ಎಚ್ಚರಿಕೆಯಿಂದ ಮುಂದೆ ಸಾಗಬೇಕು

೩. ರಸ್ತೆ ನಿಯಂತ್ರಣದ ನಿಯಮಗಳು

ಕೇಂದ್ರ ಸರ್ಕಾರವು ಮೋಟಾರು ವಾಹನ ಕಾಯ್ದೆ ೧೯೮೮ರ ಕಲಮು ೧೧೮ರ ಪ್ರಕಾರ ರಸ್ತೆ ನಿಯಂತ್ರಣದ ನಿಯಮಗಳನ್ನು ಮಾಡಿದೆ. ಇದನ್ನು 'ರಸ್ತೆ ನಿಯಂತ್ರಣದ ನಿಯಮಗಳು ೧೯೮೯' ಎಂದು ಕರೆಯಲಾಗಿದೆ. ಈ ನಿಯಮಗಳನ್ನು ಅರಿಯುವುದೇ ರಸ್ತೆಯನ್ನು ಅರಿತಂತೆ. ಒಂದೊಂದು ನಿಯಮವೂ ಪ್ರತಿಯೊಬ್ಬ ಚಾಲಕನ ಮತ್ತು ರಸ್ತೆಯನ್ನು ಉಪಯೋಗಿಸುವ ಇತರರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ರಚಿತವಾಗಿರುವುದಾಗಿದೆ. ಇದು ವಾಹನ ಚಾಲನಾಯುಕ್ತಿಯನ್ನು ಕಲಿಸುವ ಮಾರ್ಗದರ್ಶಿ ಸೂತ್ರವಾಗಿದೆ. ಇವುಗಳಲ್ಲಿ ಕೆಲವನ್ನು ವಿವರವಾಗಿ ತಿಳಿಯೋಣ.

ಎಡಕ್ಕೆ ಚಲಿಸಿ

ವಾಹನ ಚಾಲಕನು ಸಾಧ್ಯವಾದಷ್ಟುಮಟ್ಟಿಗೆ ರಸ್ತೆಯ ಎಡಬದಿಗೆ ಹತ್ತಿರವಾಗಿ ವಾಹನವನ್ನು ನಡೆಸಬೇಕು ಮತ್ತು ಎದುರು ದಿಕ್ಕಿನಲ್ಲಿ ಬರುತ್ತಿರುವ ಎಲ್ಲ ವಾಹನಗಳಿಗೆ ಅವನ ಬಲಬದಿಯಲ್ಲಿ ಹೋಗಲು ಅವಕಾಶ ಮಾಡಿಕೊಡಬೇಕು.

ಎಡಕ್ಕೆ ಮತ್ತು ಬಲಕ್ಕೆ ತಿರುಗುವಾಗ

(ಅ) ಎಡತಿರುವು

ಎಡಕ್ಕೆ ತಿರುಗುವ ಮೊದಲು ತಿರುಗಬೇಕಾಗಿರುವ ರಸ್ತೆಯಲ್ಲಿ ಯಾವುದೇ ಅಡ್ಡಿ ಅಡಚಣೆಯಿಲ್ಲದಿರುವುದನ್ನು ಕಂಡು, ಚಾಲಕನು ತನ್ನ ಎಡಭಾಗದಲ್ಲಿ ಯಾರೂ ಬರುತ್ತಿಲ್ಲವೆಂಬುದನ್ನು ಖಚಿತ ಮಾಡಿಕೊಳ್ಳಬೇಕು. ಎಡಕ್ಕೆ ತಿರುಗುವ ಮೊದಲು, ತಿರುಗುತ್ತಿರುವುದಕ್ಕಾಗಿ ಕೈ ಸೂಚನೆ ನೀಡಬೇಕು ಅಥವಾ ದಿಕ್ಸೂಚಕವನ್ನು ಹತ್ತಿಸಬೇಕು. ತಿರುಗುವ ಮೊದಲು, ತಿರುಗುವಾಗ ಹಾಗೂ ತಿರುಗಿದ ನಂತರ ನಿಧಾನವಾಗಿ ಮತ್ತು ಸಲೀಸಾಗಿ ಮತ್ತೆ ಎಡಬದಿ ಹಿಡಿದು ಆ ರಸ್ತೆಯ ಸಂಚಾರದಲ್ಲಿ ಒಂದಾಗಬೇಕು.

(ಆ) ಬಲತಿರುವು

ಬಲಕ್ಕೆ ತಿರುಗುವ ಮೊದಲು ಚಾಲಕನು ತನ್ನ ಹಿಂದಿರುವ ವಾಹನಗಳು ಆದಷ್ಟು ಸುರಕ್ಷಿತ ಅಂತರದಲ್ಲಿರುವುದನ್ನು ಖಚಿತಪಡಿಸಿಕೊಳ್ಳಬೇಕು. ಬಲಕ್ಕೆ ತಿರುಗುವ ಕೈಸೂಚನೆಯನ್ನು ನೀಡಿ ಅಥವಾ ದಿಕ್ಸೂಚಕವನ್ನು ಹತ್ತಿಸಿ ವಾಹನದ ವೇಗವನ್ನು ಕಡಿಮೆ ಮಾಡಿ ಅನಂತರ ತಿರುಗಬೇಕು. ತಿರುಗುವಾಗ ತನ್ನ ವಾಹನದ ಎಡಗಡೆಯಿಂದ ಇತರ ವಾಹನಗಳು ಹೋಗಲು ಸಾಕಷ್ಟು ಅವಕಾಶವಿರುವಂತೆ ಸ್ಥಳಾವಕಾಶ ನೀಡಬೇಕು. ಅನಂತರ ರಸ್ತೆಯ ಮಧ್ಯಕ್ಕೆ ಬಂದು ತಾನು ಪ್ರವೇಶಿಸಬೇಕಾದ ರಸ್ತೆಯಲ್ಲಿ ತನಗೂ

ಎದುರಿನಿಂದ ಬರುವ ಇತರ ವಾಹನಕ್ಕೂ ಸುರಕ್ಷಿತ ಅಂತರವಿರುವ ಸಂದರ್ಭ ನೋಡಿ, ಚುರುಕಿನಿಂದ ಸುರಕ್ಷಿತವಾಗಿ ತಿರುಗಬೇಕು. **ತಿರುಗುವಾಗ ರಸ್ತೆ ದಾಟುವ ಪಾದಚಾರಿಗಳು ಮತ್ತು ಇದ್ದಕ್ಕಿದ್ದ ಹಾಗೆ ನುಗ್ಗುವ ಸೈಕಲ್ ಸವಾರರು ಹಾಗೂ ದ್ವಿಚಕ್ರವಾಹನ ಚಾಲಕರ ಬಗ್ಗೆ ವಿಶೇಷ ಎಚ್ಚರ ವಹಿಸಬೇಕು.**

ಮೀರಿ ಮುಂದೆ ಹೋಗುವುದು (ಓವರ್ ಟೇಕಿಂಗ್)

ಮುಂದಿರುವ ವಾಹವನ್ನು ಮೀರಿ ಹೋಗುವಾಗ ಯಾವಾಗಲೂ ಆ ವಾಹನದ **ಬಲಭಾಗದಿಂದಲೇ ಮೀರಿ ಹೋಗಬೇಕು.** ಒಂದು ವೇಳೆ ಮುಂದಿರುವ ವಾಹನ ಚಾಲಕನು ತನ್ನ ವಾಹನವನ್ನು ಬಲಗಡೆಗೆ ತಿರುಗಿಸುವ ಉದ್ದೇಶದಿಂದ ಕೈ ಸಂಕೇತ ನೀಡಿ ಮತ್ತು ಅಥವಾ ದಿಕ್ಸೂಚಕವನ್ನು ಹತ್ತಿಸಿ ರಸ್ತೆಯ ಮಧ್ಯಕ್ಕೆ ಬಂದಾಗ – ಆ ಸಂದರ್ಭದಲ್ಲಿ ಮಾತ್ರ ಆ ವಾಹನದ ಎಡಗಡೆಯಿಂದ ಮೀರಿ ಹೋಗಬಹುದು. ಮಿಕ್ಕ ಎಲ್ಲ ಸಂದರ್ಭದಲ್ಲಿ ಬಲಗಡೆಯಿಂದಲೇ ಮುಂದಿನ ವಾಹನವನ್ನು ಮೀರಿ ಹೋಗಬೇಕು.

ಈ ಮೇಲಿನ ಸಂದರ್ಭ ಹೊರತುಪಡಿಸಿ ಇನ್ನು ಯಾವುದೇ ಸಂದರ್ಭದಲ್ಲಿಯೂ ಮುಂದಿನ ವಾಹನದ ಎಡಭಾಗದಿಂದ ಮೀರಿ ಮುಂದೆ ಹೋಗಲು ಪ್ರಯತ್ನಿಸಬಾರದು.

ಮುಂದಿನ ವಾಹನವನ್ನು ಮೀರಿ ಮುಂದೆ ಹೋಗುವ ಮೊದಲು, ಮುಂದಿನ ವಾಹನ ಚಾಲಕನ ಗಮನವನ್ನು ಸೆಳೆಯಲು ಹಗಲಾದರೆ ಹಾರನ್ನು ಮಾಡಬೇಕು. ರಾತ್ರಿಯಾದರೆ ಹೆಡ್‌ಲೈಟು ಪ್ರಕಾಶ, ಮಂಕಾಗುವಂತೆ ಡಿಪ್ಪರ್ ಬಳಸಬೇಕು. ಮುಂದಿನ ವಾಹನ ಚಾಲಕ ಅದಕ್ಕೆ ಪ್ರತಿಕ್ರಿಯೆಯಾಗಿ ತನ್ನನ್ನು ಮೀರಿ ಮುಂದೆ ಹೋಗಬಹುದೆಂದು ಸೂಚನೆ ನೀಡಿದ ಅನಂತರವೇ ಆ ವಾಹನವನ್ನು ಮೀರಿ ಮುಂದೆ ಹೋಗಬೇಕು.

ಮುಂದಿನ ವಾಹನವನ್ನು ಮೀರಿ ಮುಂದೆ ಹೋಗುವ ಚಾಲಕನಲ್ಲಿರಬೇಕಾದ ಮಹಾಗುಣವೆಂದರೆ, ಸಹನೆ ಮತ್ತು ತುಸು ಸಂಶಯವಾದರೂ ಮೀರಿ ಮುಂದೆ ಹೋಗಲು ಪ್ರಯತ್ನಿಸದಿರುವ ಸಂಯಮ.

ಹೆಚ್ಚು ವಾಹನ ಹಾಗೂ ಜನಸಾಂದ್ರತೆಯಿರುವ ನಗರದಲ್ಲಿ ಆತುರದಿಂದ ಮುಂದಿನ ವಾಹನದ ಎಡಗಡೆಯಿಂದ ಆ ವಾಹನವನ್ನು ಮೀರಿ ಮುಂದೆ ಹೋಗಲು ಪ್ರಯತ್ನಿಸಿ ಅಪಘಾತಗಳಾಗುವುದು ಹೆಚ್ಚು.

ಕಿರುದಾರಿಯಲ್ಲಿ ಮೀರಿ ಮುಂದೆ ಹೋಗಲು ಪ್ರಯತ್ನಿಸಬಾರದು. ಹಾಗೆ ಪ್ರಯತ್ನಿಸಿದರೆ ಎದುರು ಬರುವ ವಾಹನಕ್ಕಾಗಲಿ ಅಥವಾ ಇನ್ನಾವುದೇ ವಾಹನಕ್ಕಾಗಲಿ ಅಪಘಾತವಾಗುವುದು ಖಚಿತ.

ಮುಂದಿನ ರಸ್ತೆ ಹಾಗೂ ವಾಹನಗಳು ಸ್ಪಷ್ಟವಾಗಿ ಕಾಣುತ್ತಿದ್ದು ತನಗೆ ಹಾಗೂ ತನ್ನ ವಾಹನಕ್ಕೆ ಮತ್ತು ಎದುರು ವಾಹನಕ್ಕೆ ಯಾವುದೇ ತೊಂದರೆಯಾಗದಂತೆ ಮುಂದಿರುವ ವಾಹವನ್ನು ಮೀರಿ ಮುಂದೆ ಹೋಗಲು ಸಾಧ್ಯವೆಂದು ಖಾತರಿಯಾದಾಗ ಮಾತ್ರ ಹಾಗೆ ಮಾಡಬೇಕು.

ಈ ಕೆಳಗೆ ಸೂಚಿಸಿರುವ ಸಂದರ್ಭಗಳಲ್ಲಿ ಮುಂದಿನ ವಾಹನವನ್ನು ಮೀರಿ ಹೋಗಲು ಪ್ರಯತ್ನಿಸಬಾರದು

೧. ಇತರ ವಾಹನಗಳಿಗೆ ಅನಾನುಕೂಲ ಹಾಗೂ ತೊಂದರೆಯಾಗುವಂತಿದ್ದರೆ.

೨. ತಿರುವು, ಕೂಡುರಸ್ತೆ, ಬೆಟ್ಟಪ್ರದೇಶ, ಇಕ್ಕಟ್ಟಿನ ಸೇತುವೆ, ರೈಲ್ವೆದಾಟುರಸ್ತೆಗಳಲ್ಲಿ ಎದುರು ಬರುವ ವಾಹನಗಳು ದೃಷ್ಟಿ ಗೋಚರವಾಗದ ಕಾರಣದಿಂದ.

೩. ತನ್ನ ಹಿಂದಿರುವ ಚಾಲಕನು ತನ್ನನ್ನು ಮೀರಿ ಮುಂದೆ ಹೋಗಲು ಪ್ರಾರಂಭಿಸಿರುವನೆಂದು ತಿಳಿದಾಗ, ತನ್ನ ಮುಂದಿನ ವಾಹನವನ್ನು ಮೀರಿ ಮುಂದೆ ಹೋಗಲು ಪ್ರಯತ್ನಿಸಬಾರದು.

೪. ಮುಂದಿರುವ ವಾಹನ ಚಾಲಕನು ಅವನ ವಾಹನವನ್ನು ಮೀರಿ ಮುಂದೆ ಹೋಗಲು ಅನುಮತಿ ನೀಡದಿದ್ದರೆ, ಅವನನ್ನು ಮೀರಿ ಮುಂದೆ ಹೋಗಬಾರದು.

೫. ನಸು ಬೆಳಕು, ಮಂಜು ಅಥವಾ ಇಬ್ಬನಿ ಬೀಳುವಾಗ ಎದುರು ವಾಹನದ ವೇಗ ಮತ್ತು ಆ ವಾಹನವಿರುವ ದೂರವನ್ನು ವಿವೇಚಿಸಲು ಸಾಧ್ಯವಾಗದ ಕಾರಣ ಮುಂದಿನ ವಾಹನವನ್ನು ಮೀರಿ ಮುಂದೆ ಹೋಗಬಾರದು.

೬. ಹಿಂದಿನ ವಾಹನವು ತನ್ನನ್ನು ಮೀರಿ ಮುಂದೆ ಹೋಗಲು ಕೈ ಸಂಕೇತ ನೀಡಿದ ನಂತರ, ಆ ವಾಹನಕ್ಕೆ ಅಡ್ಡಿಯಾಗುವ ರೀತಿಯಲ್ಲಿ ತನ್ನ ವಾಹನದ ವೇಗವನ್ನು ಹೆಚ್ಚಿಸುವುದಾಗಲಿ ಅಥವಾ ಅವನು ಮುಂದೆ ಹೋಗದಂತೆ ಯಾವುದೇ ತೊಂದರೆಯನ್ನಾಗಲಿ ಮಾಡಬಾರದು. ತನ್ನ ವಾಹನದ ವೇಗವನ್ನು ಕೊಂಚ ಕಡಿಮೆ ಮಾಡಿಕೊಂಡು, ಅವನು ಮುಂದೆ ಹೋಗಲು ಪೂರ್ಣ ಅವಕಾಶ ಮಾಡಿಕೊಡಬೇಕು.

ಕೂಡುರಸ್ತೆಯಲ್ಲಿ

ಕೂಡು ರಸ್ತೆ ಸಮೀಪಿಸುತ್ತಿದ್ದಂತೆ ವಾಹನ ಚಾಲಕನು ವಾಹನದ ವೇಗವನ್ನು ಕಡಿಮೆ ಮಾಡಿ ಕೈನಿಂದ ನಿಧಾನ ಮಾಡುವ ಸಂಕೇತ, ಅನಂತರ ನಿಲ್ಲುವ ಸಂಕೇತ ನೀಡಿ ವಾಹನವನ್ನು ನಿಲ್ಲಿಸಬೇಕು. ಕೂಡು ರಸ್ತೆಯ ಮೂಲೆಯಿಂದ, ಮೂಲೆ ತಿರುಗಿನಿಂದ ಪಾದಚಾರಿಗಳಾಗಲಿ, ಸೈಕಲ್ಲು ಸವಾರರಾಗಲಿ, ಬೇರೆ ಇತರ ವಾಹನವಾಗಲಿ ಬರುತ್ತಿರುವುದು ಉಂಟೇ ಎಂದು ಗಮನಿಸಬೇಕು. ಕೂಡು ರಸ್ತೆಯಲ್ಲಿ ನಿಂತು

ಬಲಗಡೆಯಿಂದ ಬರುವ ವಾಹನಕ್ಕೆ ಮೊದಲು ಆದ್ಯತೆ ಕೊಟ್ಟು ಅನಂತರ ಪ್ರವೇಶಿಸಬೇಕಾದ ರಸ್ತೆಗೆ ವಾಹನವನ್ನು ನಡೆಸಬೇಕು.

ಪ್ರವೇಶಿಸಬೇಕಾಗಿರುವ ಕೂಡುರಸ್ತೆ ಮುಖ್ಯರಸ್ತೆಯಾಗಿದ್ದರೆ

ಮೇಲೆ ಸೂಚಿಸಿದಂತೆ ಕೈ ಸಂಕೇತ ನೀಡಿ ವಾಹನವನ್ನು ನಿಲ್ಲಿಸಬೇಕು. ಮುಖ್ಯ ರಸ್ತೆಯಲ್ಲಿ ಚಲಿಸುವ ಎಲ್ಲ ವಾಹನಗಳಿಗೆ ಆದ್ಯತೆಯಿರುವುದರಿಂದ ಅವುಗಳಿಗೆ ಆದ್ಯತೆ ನೀಡಿ ಅನಂತರ ಚಾಲಕನು ಆ ರಸ್ತೆಗೆ ಪ್ರವೇಶಿಸಬೇಕು.

ಅಗ್ನಿಶಾಮಕದಳ ಮತ್ತು ತುರ್ತು ಚರ ಚಿಕಿತ್ಸಾವಾಹನ (ಆಂಬುಲೆನ್ಸ್) ಕ್ಕೆ ಮೊದಲ ಆದ್ಯತೆ

ಪ್ರತಿಯೊಬ್ಬ ಚಾಲಕನು ಅಗ್ನಿಶಾಮಕದಳ ಮತ್ತು ತುರ್ತು ಚರ ಚಿಕಿತ್ಸಾವಾಹನ, ಪೊಲೀಸ್ ವ್ಯಾನ್‌ಗಳನ್ನು ಕಂಡಾಗ ಅವುಗಳಿಗೆ ಚಲಿಸಲು ಆದ್ಯತೆ ನೀಡಿ, ಸಾಧ್ಯವಾದಷ್ಟು ರಸ್ತೆಯ ಎಡಪಕ್ಕದಲ್ಲಿ ನಿಂತು, ಅವುಗಳಿಗೆ ಹೋಗಲು ಅವಕಾಶ ಮಾಡಿಕೊಡಬೇಕು.

ಕಮಾನು ತಿರುವು ('U' ಟರ್ನ್)

ರಸ್ತೆಯಲ್ಲಿ ಕಮಾನಿನ ರೀತಿಯಲ್ಲಿ ವಾಹನವನ್ನು ತಿರುಗಿಸಬೇಕಾಗಿದ್ದರೂ, ಅದು ಆಂಗ್ಲ ಅಕ್ಷರ **'U'** ನ ತಿರುವುಮುರುವಾದರೂ, ಜನ ಆ ಬಗೆಯ ತಿರುವನ್ನು **'U'** ಟರ್ನ್ ಎಂದೇ ಕರೆಯುತ್ತಾರೆ. ಅದನ್ನು ಕಮಾನು ತಿರುವು ಎಂದು ಕರೆಯುವುದು ಸೂಕ್ತ.

∩ ಕಮಾನು ತಿರುವನ್ನು ನಿಷೇಧಿಸಿರುವ, ಅತಿವಾಹನ ದಟ್ಟಣೆಯಿರುವ ಸ್ಥಳಗಳಲ್ಲಿ ಕಮಾನು ತಿರುವು ತೆಗೆದುಕೊಳ್ಳಬಾರದು. ನಗರಗಳಲ್ಲಿ, ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿಯಲ್ಲಿ ಕಮಾನು ತಿರುವು ತೆಗೆದುಕೊಳ್ಳಬಹುದೆಂದು ಸೂಚಿಸಿರುವ ಕಡೆ ಮಾತ್ರ ಕಮಾನು ತಿರುವು ಮಾಡಬೇಕು. ಕಮಾನು ತಿರುವು ಮಾಡುವಾಗ ಎಚ್ಚರಿಕೆಯಿಂದಿರಬೇಕು. ಕಮಾನು ತಿರುವಿನಲ್ಲಿ ತಿರುಗುವ ಮೊದಲು, ನಿಧಾನ ಮಾಡುವ ಮತ್ತು ನಿಲ್ಲುವ ಕೈ ಸಂಕೇತ ತೋರಿಸಿ ನಿಂತು; ಎಡಗಡೆ ಮತ್ತು ಎದುರುಗಡೆಯಿಂದ ಬರುವ ವಾಹನವನ್ನು ಗಮನಿಸಬೇಕು. ರಸ್ತೆಯನ್ನು ವಿಭಾಗಿಸುವ ಸ್ಥಳದಲ್ಲಿ ಬೆಳೆಸಿರುವ ಮರ ಮತ್ತು ಕುರುಚಲುಗಿಡಗಳು ಎದುರು ಬರುವ ವಾಹನ ಕಾಣದಂತೆ ತಡೆಯೊಡ್ಡುವುದರಿಂದ ಎಚ್ಚರಿಕೆಯಿಂದ ಗಮನಿಸಬೇಕು. **'U'** ತಿರುವು ಮಾಡಬೇಕಾದ ಸ್ಥಳಕ್ಕೆ ಮೊದಲೇ ೩೦ ಮೀಟರ್ ಅಂತರದಲ್ಲಿ ವಾಹನ ಯಾವುದೂ ಬಾರದಿರುವಾಗ ಬಲಕ್ಕೆ ತಿರುಗುವ ಕೈ ಸಂಕೇತ ನೀಡಬೇಕು. ಹಿನ್ನೋಟದ ಕನ್ನಡಿಯಲ್ಲಿ ಹಿಂಬದಿಯಿಂದ ಬರುವ ವಾಹನವನ್ನು ಗಮನಿಸಬೇಕು. ಚತುರ ಶೀಘ್ರತೆಯಿಂದ ವಾಹನವನ್ನು ತಿರುಗಿಸಬೇಕು.

ಚಾಲಕನ ಕೈ ಸಂಕೇತಗಳು

ಕೈ ಸಂಕೇತವು ರಸ್ತೆಯಲ್ಲಿ ಮಾತನಾಡುವ ಭಾಷೆಯಿದ್ದಂತೆ. ಚಾಲಕನು ಸ್ಪಷ್ಟವಾಗಿ ಕೈ ಸಂಕೇತ ನೀಡಿದರೆ ಅದು ಸ್ಪಷ್ಟವಾಗಿ ಮಾತನಾಡಿದಂತಾಗಿ ಹಿಂದಿನ ವಾಹನ ಚಾಲಕರಿಗೆ ಅದು ಸಂವಹನವಾಗಿ ಅವರು ಸುರಕ್ಷಿತವಾಗಿ ಅದನ್ನನುಸರಿಸಿ ನಡೆಯುವರು. ಅದರಿಂದ ಸುರಕ್ಷಿತ ವಾಹನ ಸಂಚಾರ ಸಾಧ್ಯವಾಗುತ್ತದೆ.

ಚಾಲಕನು ತನ್ನ ವಾಹನವನ್ನು ನಿಧಾನ ಮಾಡುವುದು, ನಿಲ್ಲಿಸುವುದು, ಎಡಕ್ಕೆ ತಿರುಗುವುದು, ಬಲಕ್ಕೆ ತಿರುಗುವುದು, ಹಿಂದೆ ಬರುವ ವಾಹನದವರಿಗೆ ತನ್ನನ್ನು ಮೀರಿ ಮುಂದೆ ಸಾಗಲು ಸೂಚಿಸುವುದು, ಈ ಮೊದಲಾದುವನ್ನು ಕೈ ಸಂಕೇತವಾಗಿ ನೀಡುವ ವಿವರ ಈ ಕೆಳಗೆ ಸೂಚಿಸಿದಂತಿದೆ.

೧. ವಾಹನವನ್ನು ನಿಧಾನ ಮಾಡುವಾಗ, ಚಾಲಕ ಬಲತೋಳನ್ನು ವಾಹನದ ಹೊರಗೆ ಚಾಚಿ ಅಂಗೈ ಕೆಳಮುಖವಾಗಿರುವಂತೆ ಮಾಡಿ, ತೋಳನ್ನು ಮೇಲೆ ಕೆಳಗೆ ಹಲವಾರು ಬಾರಿ ಆಡಿಸಬೇಕು.

೨. ವಾಹನವನ್ನು ನಿಲ್ಲಿಸುವಾಗ, ಚಾಲಕನು ತನ್ನ ಬಲ ಮುಂದೋಳನ್ನು ಭುಜಕ್ಕೆ ಲಂಬಾಕಾರದಲ್ಲಿ ಅಂಗೈ ಮುಮ್ಮುಖವಾಗಿರುವಂತೆ ಎತ್ತಬೇಕು.


೩. ವಾಹನವನ್ನು ಎಡಕ್ಕೆ ತಿರುಗಿಸುವಾಗ, ಬಲತೋಳನ್ನು ಹೊರಗೆ ಬಾಚಿ ಅದನ್ನು ಅಪ್ರದಕ್ಷಿಣಾ ಪಥದಲ್ಲಿ ತಿರುಗಿಸಬೇಕು.

೪. ವಾಹನವನ್ನು ಬಲಕ್ಕೆ ತಿರುಗಿಸುವಾಗ, ಚಾಲಕ ಬಲತೋಳನ್ನು ಸಮತಲ ರೇಖೆಯಲ್ಲಿ ಅಂಗೈ ಮುಮ್ಮುಖವಾಗಿರುವಂತೆ ಚಾಚಬೇಕು.

೫. ಚಾಲಕನು ತನ್ನ ಹಿಂದೆ ಬರುವ ವಾಹನದ ಚಾಲಕನಿಗೆ, ತನ್ನನ್ನು ಮೀರಿ ಮುಂದೆ (ಓವರ್ ಟೇಕ್) ಹೋಗಬಹುದೆಂದು ಸೂಚಿಸುವಾಗ, ತನ್ನ ಬಲತೋಳನ್ನು ಮತ್ತು ಅಂಗೈಯನ್ನು ಸಮತಲವಾಗಿ ವಾಹನದ ಹೊರಕ್ಕೆ ಚಾಚಿ, ತೋಳನ್ನು ಹಿಂದಕ್ಕೆ ಮುಂದಕ್ಕೆ ಅರ್ಧವೃತ್ತಾಕಾರದಲ್ಲಿ ತಿರುಗಿಸಬೇಕು.

ಸೂಚನೆ : ಯಾವುದೇ ಸಂದರ್ಭದಲ್ಲಿಯೂ ಚಾಲಕನು ಎಡಗೈಯಿಂದ ಕೈ ಸಂಕೇತವನ್ನು ನೀಡಬಾರದು.

೧. ನಿಧಾನ ಮಾಡುವುದು





೨. ನಿಲ್ಲುವುದು



೩. ಎಡಕ್ಕೆ ತಿರುಗುವುದು

೪. ಬಲಕ್ಕೆ ತಿರುಗುವುದು



೫. ಮೀರಿ ಮುಂದೆ ಹೋಗಲು (ಓವರ್ ಟೇಕ್) ಅನುಮತಿ



ದಿಕ್ಸೂಚಕಗಳು

ಇವು ಮೋಟಾರುವಾಹನದ ಚಾಲಕನು ತನ್ನ ವಾಹನವನ್ನು ಯಾವ ದಿಕ್ಕಿಗೆ ತಿರುಗಿಸುತ್ತಾನೆಂಬುದನ್ನು ತೋರಿಸುವ ಸಾಧನಗಳು. ಎಡಕ್ಕೆ ಮತ್ತು ಬಲಕ್ಕೆ ತಿರುಗುವ ದಿಕ್ಸೂಚಕ ದೀಪಗಳನ್ನು ವಾಹನಕ್ಕೆ ಅಳವಡಿಸಿದ್ದು ಪ್ರಯಾಣಿಸುವ ಮೊದಲು ಅವು ಸರಿಯಾಗಿವೆಯೇ ಎಂದು ನೋಡಿಕೊಳ್ಳಬೇಕು. ತಿರುಗುವಾಗ ಆ ಸೂಚಕವನ್ನು ಬಳಸಿ, ತಿರುಗಿದ ತಕ್ಷಣ ಅದನ್ನು ಆರಿಸಬೇಕು.

ವಾಹನದ ನಿಲುಗಡೆ

ಚಾಲಕನು ವಾಹನವನ್ನು ಒಂದು ಕಡೆ ನಿಲುಗಡೆ ಮಾಡುವಾಗ ರಸ್ತೆ ಉಪಯೋಗಿಸುವ ಇತರರಿಗೆ ಅಪಾಯಕರವಾಗದಂತೆ, ತಡೆಯಾಗದಂತೆ, ಅಡಚಣೆಯಾಗದಂತೆ ನಿಲ್ಲಿಸಬೇಕು. ನಿಲುಗಡೆ ತಾಣ 'P' (ಪಾರ್ಕಿಂಗ್) ಎಂದು ಸೂಚನಾ ಫಲಕವಿದ್ದು, ಅದರಲ್ಲಿ ಯಾವ ವರ್ಗದ ವಾಹನ ನಿಲ್ಲಿಸಬಹುದು ಎಂದು ಸೂಚಿಸಿದೆಯೋ ಆ ವರ್ಗದ ವಾಹನವನ್ನು ಮಾತ್ರ ನಿಲುಗಡೆ ಮಾಡಬೇಕು. ಕಡಿದಾದ ಏರು ರಸ್ತೆಯಲ್ಲಿ ವಾಹನವನ್ನು ನಿಲ್ಲಿಸುವಾಗ ವಾಹನದ ಮುಂದಿನ ಚಕ್ರವನ್ನು ಪೂರ್ಣವಾಗಿ ರಸ್ತೆ ಅಂಚಿಗೆ ತಿರುಗಿಸಿ, ವಾಹನದ ಹ್ಯಾಂಡ್ ಬ್ರೇಕು ಹಾಕಿರಬೇಕು. ರಸ್ತೆ ಅಂಚಿಲ್ಲದಿದ್ದರೆ ಮುಂದಿನ ಚಕ್ರವನ್ನು ಎಡಕ್ಕೆ ತಿರುಗಿಸಬೇಕು.

ಕಡಿದಾದ ಏರು ರಸ್ತೆಯಾದರೆ ಒಂದನೇ ಗೇರ್‌ನಲ್ಲಿಯೂ, ತೀವ್ರವಾದ ಇಳುಕಲಾದರೆ ರಿವರ್ಸ್ ಗೇರ್‌ಗೂ ಹಾಕಿ ವಾಹನವನ್ನು ನಿಲ್ಲಿಸಬೇಕು.

ವಾಹನವನ್ನು ನಿಲ್ಲಿಸುವಾಗ ಕಾರು ಕಳವು ಮಾಡಲಾಗದಂತೆ ಲಾಕ್ ಮಾಡಬೇಕು. ಕಾರು ಚಲಿಸಲಾಗದಂತಹ ರಕ್ಷಕ ಉಪಕರಣಗಳನ್ನು ಬಳಸಿದರೆ ಉತ್ತಮ. ಕಳ್ಳನಿಗೆ ಪ್ರಚೋದನೆಯನ್ನುಂಟು ಮಾಡುವ ವಸ್ತುಗಳನ್ನು ಕಾರಿನಲ್ಲಿಡದೆ; ಬೆಲೆ ಬಾಳುವ ವಸ್ತುಗಳನ್ನು ಡಿಕ್ಕಿಯಲ್ಲಿ ಭದ್ರಪಡಿಸಿ, ವಾಹನ ಬಿಟ್ಟು ಹೋಗುವ ಮೊದಲು ಎಲ್ಲ ಬಾಗಿಲುಗಳ ಬೀಗ ಭದ್ರಪಡಿಸಿದ್ದರೆ ನಿಮ್ಮ ಕಾರು ಸುಭದ್ರವಾಗಿರುತ್ತದೆ.

ರಾತ್ರಿಯಲ್ಲಿ ಮುಖ್ಯರಸ್ತೆಯಲ್ಲಿ ನಿಲ್ಲಿಸುವಾಗ ನಿಲುಗಡೆ ದೀಪ (ಪಾರ್ಕಿಂಗ್ ಲೈಟು)ವನ್ನು ಹಾಕಿರಬೇಕು.

ಈ ಕೆಳಗೆ ಸೂಚಿಸಿರುವ ಸ್ಥಳಗಳಲ್ಲಿ ವಾಹನವನ್ನು ನಿಲ್ಲಿಸುವುದು ಕಾನೂನಿಗೆ ವಿರುದ್ಧವಾಗಿರುತ್ತದೆ.

೧. ಕೂಡುರಸ್ತೆ, ತಿರುವು, ಬೆಟ್ಟದ ಮೇಲೆ ಅಥವಾ ಡುಬ್ಬದಾಕಾರದ ಸೇತುವೆಯ ಸಮೀಪ.

೨. ಪಾದಚಾರಿಗಳು ದಾಟುವ ಜಾಗ – ಜೀಬ್ರಾಪಟ್ಟಿಗಳ ಮೇಲೆ.
೩. ಸಂಚಾರ ಸಂಕೇತದ ದೀಪಗಳು ಅಥವಾ ಪಾದಚಾರಿಗಳ ದಾಟುರಸ್ತೆ ಹತ್ತಿರ.
೪. ಮುಖ್ಯ ಅಥವಾ ವೇಗಸಂಚಾರವಿರುವ ರಸ್ತೆಯಲ್ಲಿ.
೫. ನಿಲುಗಡೆ ಮಾಡಿರುವ ವಾಹನದ ಎದುರು ಅಥವಾ ಅದಕ್ಕೆ ಅಡಚಣೆಯಾಗಿ.
೬. ತುಂಡರಿಸಿದ ಅಥವಾ ನಿರಂತರವಾದ ಬಿಳಿಪಟ್ಟೆಯಿರುವ ರಸ್ತೆ ಅಥವಾ ಸ್ಥಳ.
೭. ಬಸ್ ನಿಲ್ದಾಣದ ಸಮೀಪ, ಶಾಲೆ, ಆಸ್ಪತ್ರೆ ಅಥವಾ ಒಂದು ಕಟ್ಟಡದ ಪ್ರವೇಶದ್ವಾರ, ಸಂಚಾರ ಚಿಹ್ನೆ ಕಾಣದಂತೆ ಅಥವಾ ಅಗ್ನಿಶಾಮಕ ಕೊಳಾಯಿಯಿರುವ ಸ್ಥಳ.
೮. ರಸ್ತೆಯ ವಿರುದ್ಧ ದಿಕ್ಕಿನಲ್ಲಿ.
೯. ನಿಲುಗಡೆ ನಿಷೇಧಿಸಿರುವ ಸ್ಥಳದಲ್ಲಿ.
೧೦. ಕಾಲುದಾರಿಯ ಅಂಚಿನಿಂದ ಬಹುದೂರದಲ್ಲಿ.

ಮೇಲಿನ ನಿರ್ಬಂಧಗಳ ಜೊತೆಗೆ ಈ ಕೆಳಗೆ ಸೂಚಿಸಿರುವ ಪ್ರದೇಶದಲ್ಲಿ ವಾಹನವನ್ನು ನಿಲ್ಲಿಸಬಾರದೆಂದು ನಿಷೇಧವಿದೆ.

೧. ಬಸ್ ನಿಲ್ದಾಣ ಅಥವಾ ಟ್ಯಾಕ್ಸಿ ನಿಲ್ದಾಣದಿಂದ ೧೫ ಮೀಟರ್ ದೂರದವರೆಗೆ.
೨. ಚಿಹ್ನೆಯಿಂದ ಸೂಚಿಸಲಾದ ಕೂಡುರಸ್ತೆಯ ೫೦ ಮೀಟರ್ ಪ್ರದೇಶದಲ್ಲಿ.
೩. ಚಿಹ್ನೆಯಿಂದ ಸೂಚಿಸದಿರುವ ಕೂಡುರಸ್ತೆಯ ೧೦ ಮೀಟರ್ ಪ್ರದೇಶದಲ್ಲಿ.

ನಿರ್ದೇಶಿಸಿದ ಗಮನಪಥದಲ್ಲಿ ವಾಹನವನ್ನು ನಡೆಸುವುದು

ಯಾವ ರಸ್ತೆಯಲ್ಲಿ ಗಮನ ಪಥವನ್ನು ನಿರ್ದೇಶಿಸಿ ಪಟ್ಟೆಗಳನ್ನು ಗುರುತು ಮಾಡಿದೆಯೊ, ಅಂತಹ ರಸ್ತೆಯಲ್ಲಿ ಅದೇ ಪಥದಲ್ಲಿ ವಾಹನವನ್ನು ನಡೆಸಬೇಕು. ಇದನ್ನು ಪಥಶಿಸ್ತು (lane discipline) ಎಂದು ಕರೆಯುವರು. ಒಂದು ವೇಳೆ ಗಮನಪಥವನ್ನು ಬದಲಾಯಿಸಬೇಕಾದರೆ ಸೂಕ್ತ ಸಂಕೇತ ನೀಡಿ ಬದಲಾಯಿಸಬಹುದು.

ಹಾರನ್ನು

ಹಾರನ್ನಿನ ಮಹತ್ವವನ್ನು ಅರಿತು ಬಳಸುವವರು ಬಹಳ ವಿರಳ. ವಾಹನ ಚಾಲಕ ತನ್ನ ನಿರ್ಲಕ್ಷ್ಯ ಚಾಲನೆಯನ್ನು ಮುಚ್ಚಿಕೊಳ್ಳಲು ಅಥವಾ ವಾಹನ ನಡೆಸುವಾಗ ತನಗಾಗುವ ತಡೆಯಿಂದ ತಾನು ಕ್ರಮಿಸಲು ನಿಧಾನವಾಯಿತೆಂಬ ಅಸಹನೆಯಿಂದ ಹಾರನ್ನು ಮಾಡುವವರೇ ಹೆಚ್ಚು. ಚಾಲಕನ ವಾಹನ ಚಾಲನಾಪರಿಣತಿಯನ್ನು ಅವನು ಹಾರನ್ನು ಮಾಡುವ ವಿಧಾನದಿಂದಲೇ ತೀರ್ಮಾನಿಸಬಹುದು. ಉತ್ತಮ ಚಾಲಕನಾದವನು ಅವಶ್ಯ ಪರಿಸ್ಥಿತಿಯಲ್ಲಿ, ಸಾಮಾನ್ಯ ಎಚ್ಚರದಿಂದ ಇನ್ನೂ ಹೆಚ್ಚು ಎಚ್ಚರ ವಹಿಸಬೇಕಾದಾಗ ಹಾಗೂ ಇತರರನ್ನು ಎಚ್ಚರಿಸಲೇಬೇಕಾದಾಗ ಹಾರನ್ನು ಮಾಡುವನು.

ಪ್ರತಿಯೊಬ್ಬ ಚಾಲಕನು ವಿದ್ಯುತ್ ಚಾಲಿತ ಹಾರನ್ನು ಅಥವಾ ಬಲ್ಬ್‌ಹಾರನ್ನು ಬಳಸಿ ತನ್ನ ವಾಹನ ಮುಂದೆ ಸಮೀಪಿಸುತ್ತಿರುವುದರ ಬಗ್ಗೆ ಕೇಳಬಹುದಾದಷ್ಟು ಹಾಗೂ ಸಾಕಷ್ಟು ಮುನ್ಸೂಚನೆ ನೀಡುವಷ್ಟು ಮಾತ್ರ ಹಾರನ್ನು ಮಾಡಬೇಕು. ಯಾವುದೇ ವಾಹನಕ್ಕೂ ಹಲವು ಧ್ವನಿಗಳ ವಿವಿಧ ಶೃತಿಯ ಸ್ವರಮೇಳ ಹೊಂದಿದ ಅಥವಾ ಕರ್ಕಶವಾದ, ಭೋರ್ಗರೆಯುವ ಕೀರಲು ಧ್ವನಿಯ ಹಾಗೂ ಗಾಬರಿಪಡಿಸುವ ಹಾರನ್ನು ಜೋಡಿಸಬಾರದು.

ಭೋರ್ಗರೆಯುವ ಹಾರನ್ನು ಮಾಡುವ ವಿಚಾರದಲ್ಲಿ ತುರ್ತು ಚರ ಚಿಕಿತ್ಸಾ ವಾಹನ (ಆಂಬುಲೆನ್ಸ್), ಅಗ್ನಿಶಾಮಕದಳ, ಪೊಲೀಸ್ ಮತ್ತು ಮೋಟಾರು ವಾಹನಗಳ ಇಲಾಖೆಯ ವಾಹನಗಳಿಗೆ ವಿನಾಯಿತಿಯುಂಟು.


ಭೋರ್ಗರೆಯುವ ಹಾರನ್ನು ಆರೋಗ್ಯಕ್ಕೆ ಅಪಾಯಕಾರಿ. ಅದು ರಕ್ತದೊತ್ತಡವನ್ನು ಹೆಚ್ಚಿಸುತ್ತದೆ ಮತ್ತು ಹೃದಯದ ಮೇಲೆ ಕೆಟ್ಟ ಪರಿಣಾಮವನ್ನುಂಟು ಮಾಡುತ್ತದೆ. ಅದು ನಿದ್ರೆ ಮಾಡುತ್ತಿರುವ ಮಕ್ಕಳು, ರೋಗಿಗಳು ಮತ್ತು ವಯಸ್ಸಾದವರಿಗೆ ತೀವ್ರ ಕ್ಷೋಭೆಯನ್ನುಂಟು ಮಾಡುತ್ತದೆ.

ಕೋರ್ಟು, ಕಛೇರಿ, ಆಸ್ಪತ್ರೆ ಮುಂತಾದ ನಿಷೇಧಿತ ವಲಯಗಳಲ್ಲಿ ಹಾರನ್ನು ಮಾಡಬಾರದು.

ಅಂತರವನ್ನಿಡುವುದು

ಚಾಲಕನು ವಾಹನವನ್ನು ನಡೆಸುವಾಗ ಮುಂದಿರುವ ವಾಹನಕ್ಕೆ ಸಾಕಷ್ಟು ಅಂತರದಲ್ಲಿರುವಂತೆ ತನ್ನ ವಾಹನವನ್ನು ನಡೆಸಬೇಕು. ಹಾಗೆ ನಡೆಸದ ಪಕ್ಷದಲ್ಲಿ ಮುಂದಿನ ವಾಹನ ಇದ್ದಕ್ಕಿದ್ದ ಹಾಗೆ ನಿಧಾನವಾದಾಗ ಅಥವಾ ನಿಂತಾಗ ಡಿಕ್ಕಿ ಹೊಡೆಯುವ ಸಂಭವವಿರುತ್ತದೆ. ಮುಂದಿನ ವಾಹನಕ್ಕೆ ತುಂಬಾ ಹತ್ತಿರದಲ್ಲಿ ವಾಹನವನ್ನು ನಡೆಸಿದರೆ, ಮುಂದೆ ಇರುವ ರಸ್ತೆ ಹಾಗೂ ಸಂಚಾರದ ಸ್ಥಿತಿಗತಿಗಳು ಕಾಣದಾಗಿ; ಆಕಸ್ಮಾತ್ತಾಗಿ ಆಗಬಹುದಾದ ತೊಂದರೆ ನಿಭಾಯಿಸಲು ಸಾಧ್ಯವಾಗದಂತಾಗುತ್ತದೆ.

ಈ ಅಂತರವಿಡುವುದಕ್ಕೆ ಮಾರ್ಗದರ್ಶಿ ಸೂತ್ರ ಹೀಗಿದೆ : ಎಲ್ಲವೂ ಚೆನ್ನಾಗಿ ಕಾಣುವಾಗ ಒಣರಸ್ತೆಯಲ್ಲಿ ಒಂದು ಗಂಟೆಗೆ ೧೫ ಕಿ.ಮೀ. ವೇಗದಲ್ಲಿ ವಾಹನವನ್ನು ನಡೆಸುತ್ತಿರುವಾಗ ಒಂದು ಕಾರಿನ ಉದ್ದದಷ್ಟು ಅಂತರವಿಡಬೇಕು. ತೇವಾಂಶ ಹಾಗೂ ಜಾರು ರಸ್ತೆಯಲ್ಲಿ, ರಾತ್ರಿ ವೇಳೆಯಲ್ಲಿ ಅಥವಾ ಆಗಾಗ ನಿಲ್ಲುವ ವಾಹನಗಳ (ಬಸ್ಸು, ಸ್ಕೂಲ್ ಬಸ್ಸು, ಆಟೋರಿಕ್ಷಾ, ಪೋಸ್ಟ್ ಆಫೀಸ್ ವ್ಯಾನ್ ಮುಂತಾದವುಗಳು) ಹಿಂದೆ ಹೋಗುತ್ತಿರುವಾಗ ಆ ಅಂತರ – ದ್ವಿಗುಣ ಅಥವಾ ತ್ರಿಗುಣವಾಗಬೇಕು.



ಬೆಟ್ಟ ಪ್ರದೇಶದಲ್ಲಿ ವಾಹನ ಚಾಲನೆ

ಬೆಟ್ಟ ಪ್ರದೇಶದಲ್ಲಿ ಬೆಟ್ಟದಿಂದ ಇಳಿಯುತ್ತಿರುವ ವಾಹನ ಚಾಲಕನು ತನ್ನ ವಾಹನವನ್ನು ನಿಧಾನ ಮಾಡಿ ನಿಲ್ಲಿಸಿ, ಏರುತ್ತಿರುವ ವಾಹನಕ್ಕೆ ಮೊದಲು ಮೇಲೇರಲು ಅವಕಾಶ ಮಾಡಿಕೊಡಬೇಕು. ಬೆಟ್ಟ ಪ್ರದೇಶದಲ್ಲಿ ವಾಹನ ಚಾಲನೆಗೆ ತೊಡಗುವ ಮೊದಲು ವಾಹನದ ಬ್ರೇಕು, ಸ್ಟೀರಿಂಗು, ಟೈರು ಸುಸ್ಥಿತಿಯಲ್ಲಿದೆಯೇ ಎಂಬುದನ್ನು ಪರೀಕ್ಷಿಸಿ ಖಚಿತಪಡಿಸಿಕೊಳ್ಳಬೇಕು.

ಬೆಟ್ಟ ಪ್ರದೇಶದ ಬಲತಿರುವು, ಎಡತಿರುವು, ಹೇರ್‌ಪಿನ್ ತಿರುವು, ಬಲಹಿಂಗಡೆ ತಿರುವು, ಎಡಹಿಂಗಡೆ ತಿರುವು ಮುಂತಾದ ಕುರುಡು ಹಾಗೂ ಶೀಘ್ರ ತಿರುವುಗಳಲ್ಲಿ ಸಂಚಾರ ನಿಯಮಗಳನ್ನು ಪಾಲಿಸುತ್ತ, ಹಾರನ್ನು ಮಾಡುತ್ತ ಎಚ್ಚರಿಕೆಯಿಂದ ವಾಹನವನ್ನು ನಡೆಸಬೇಕು. **ತಿರುವುಗಳಲ್ಲಿ ಮತ್ತು ಬೆಟ್ಟದ ಶಿಖರದಲ್ಲಿ ಮುಂದಿನ ವಾಹನವನ್ನು ಮೀರಿ ಮುಂದೆ ಹೋಗಬಾರದು.** ರಾತ್ರಿಯ ಹೊತ್ತು ವಾಹನ ನಡೆಸುವಾಗ ತಿರುವುಗಳಲ್ಲಿ ಹೆಡ್‌ಲೈಟಿನ ಡಿಪ್ಪರನ್ನು ಬಳಸಲೇಬೇಕು. ಅದರಿಂದ ಎದುರು ವಾಹನಕ್ಕೆ ಸೂಚನೆ ನೀಡಿದಂತಾಗಿ ಸುರಕ್ಷಿತ ವಾಹನ ಚಾಲನೆ ಸಾಧ್ಯವಾಗುತ್ತದೆ. ಬೆಟ್ಟದಿಂದ ಇಳಿಯುವಾಗ ಇಂಧನ ಉಳಿತಾಯಕ್ಕಾಗಲಿ, ಎಂಜಿನ್ ತಣ್ಣಗಾಗಿಸಲಾಗಲಿ, ಎಂಜಿನ್ ಸ್ವಿಚ್ ಆಫ್ ಮಾಡಬಾರದು ಮತ್ತು ವಾಹನದ ಗೇರ್ ಅನ್ನು ನ್ಯೂಟ್ರಲ್ ಆಗಿಸಿ ನಡೆಸಬಾರದು. ಎಂಜಿನ್ ಕೆಲಸ ಮಾಡದೆ, ಗೇರ್ ನ್ಯೂಟ್ರಲ್ ಆಗಿದ್ದಾಗ ಬ್ರೇಕ್ ಮಾತ್ರದಿಂದ ವಾಹನದ ಹಿಡಿತವನ್ನು ಸಾಧಿಸಿ ನಿಲ್ಲಿಸಲಾಗುವುದಿಲ್ಲ. **ವಾಹನದ ಬ್ರೇಕಿನ ಜೊತೆಗೆ ಗೇರ್ ವಾಹನವನ್ನು**

ಸಮರ್ಥವಾಗಿ ನಿಲ್ಲಿಸಲು, ವಾಹನದ ಹಿಡಿತ ಸಾಧಿಸಲು ಅತಿ ಅವಶ್ಯವಾದ ಕಾರಣ ಎಂಜಿನನ್ನು ಚಾಲನೆಯಲ್ಲಿಟ್ಟುಕೊಂಡಿರಬೇಕು. ಆಗ ಮಾತ್ರ ವಾಹನದ ಪೂರ್ಣ ಹಿಡಿತ ಸಾಧ್ಯ. ಹಾಗಿಲ್ಲದೆ ವಾಹನವನ್ನು ನಡೆಸಿದಾಗ ವಾಹನದ ಹಿಡಿತ ತಪ್ಪಿ ಅಪಘಾತವಾಗುವ ಸಾಧ್ಯತೆಯಿರುತ್ತದೆ. ಆದಕಾರಣ ಯಾವ ಚಾಲಕನೇ ಆಗಲಿ ಈ ಕೆಟ್ಟ ಅಭ್ಯಾಸವನ್ನು ಬಿಡಬೇಕು.

ಸಾರಿಗೆ ವಾಹನ

ತೀವ್ರವಾದ ಇಳುಕಲಿನಲ್ಲಿ ತಿರುಗುವಾಗ ಬ್ರೇಕು ಹಾಕುವುದರಿಂದ ವಾಹನ ಜಾರಿ ಹೊರಳುವ (skid) ಸಾಧ್ಯತೆಯಿರುವುದರಿಂದ ಬ್ರೇಕು ಬಳಸಬಾರದು. ಟ್ಯಾಂಕರ್‌ಗಳಲ್ಲಿ ಬ್ರೇಕ್ ಹಾಕುವಾಗ ಅದರಲ್ಲಿರುವ ದ್ರವ ಮುಂಭಾಗಕ್ಕೆ ತಳ್ಳಲ್ಪಡುತ್ತದೆ. ಹಾಗೆ ತಳ್ಳಲ್ಪಟ್ಟ ಕಾರಣದಿಂದ ವಾಹನದ ಚಾಲನೆಗೆ ಇಂಬುಗೊಟ್ಟಂತಾಗುತ್ತದೆ. ಆಗವಾಹನದ ಸಮತೋಲನ ತಪ್ಪುತ್ತದೆ. ಆದ ಕಾರಣ ಟ್ಯಾಂಕರ್ ನಡೆಸುವ ಚಾಲಕ ಸಾಮಾನ್ಯ ವಾಹನವು ತಿರುವಿನಲ್ಲಿ ಸಾಗುವ ಸಾಧಾರಣ ವೇಗಕ್ಕಿಂತ ಕಡಿಮೆ ವೇಗದಲ್ಲಿ ತನ್ನ ವಾಹನವನ್ನು ಅತಿ ನಿಧಾನವಾಗಿ ನಡೆಸಬೇಕು.

ಬೆಟ್ಟ ಪ್ರದೇಶದಲ್ಲಿ ವಾಹನವನ್ನು ನಿಲ್ಲಿಸಿರುವಾಗ ಹ್ಯಾಂಡ್ ಬ್ರೇಕ್ ಹಾಕಿರುವುದರ ಜೊತೆಗೆ ಚಕ್ರದಡಿ ಮರದ ತುಂಡುಗಳನ್ನು ಅಥವಾ ಕಲ್ಲುಗಳನ್ನು ಇಡಬೇಕು. ವಾಹನವನ್ನು ಅಲ್ಲಿಂದ ತೆಗೆದ ನಂತರ ಆ ಮರದ ತುಂಡು ಅಥವಾ ಕಲ್ಲುಗಳನ್ನು ರಸ್ತೆಯಿಂದ ಪಕ್ಕಕ್ಕೆ ಎತ್ತಿಡುವುದನ್ನು ಮರೆಯಬಾರದು. ಬೇಜವಾಬ್ದಾರಿಯಿಂದ ಬಿಟ್ಟು ಹೋದ ಮರದ ತುಂಡು ಹಾಗೂ ಕಲ್ಲುಗಳು ಇತರ ವಾಹನಗಳ ಅಪಘಾತಕ್ಕೆ ಕಾರಣವಾಗಬಹುದು.

ಮಿತಿಯಾದ ವೇಗದಲ್ಲಿ ವಾಹನ ಚಾಲನೆ : ರಸ್ತೆಯಲ್ಲಿ ಸೈನ್ಯ ಅಥವಾ ಪೊಲೀಸ್ ಪಡೆ ಕವಾಯತ್ತು ಶೈಲಿಯಲ್ಲಿ ಸಾಗಿ ಹೋಗುತ್ತಿರುವುದನ್ನು ಕಂಡಾಗ ಅಥವಾ ರಸ್ತೆಯಲ್ಲಿ ಕೆಲಸಗಾರರು ರಸ್ತೆ ದುರಸ್ತಿಯಲ್ಲಿ ತೊಡಗಿರುವುದನ್ನು ಕಂಡಾಗ ವಾಹನ ಚಾಲಕನು ತನ್ನ ವಾಹನವನ್ನು ಗಂಟೆಗೆ ೨೫ ಕಿ.ಮೀ ವೇಗಕ್ಕಿಂತ ಕಡಿಮೆಯಾಗಿ ನಡೆಸಬೇಕು.

ವಾಹನವನ್ನು ಹಿಮ್ಮುಖವಾಗಿ ನಡೆಸುವುದು

ವಾಹನ ಚಾಲಕನು ವಾಹನವನ್ನು ಹಿಂದಕ್ಕೆ ನಡೆಸುವಾಗ ಯಾರಿಗೂ ಅಪಾಯವಾಗಲಿ ಅಥವಾ ವಿನಾಕಾರಣ ಅಡಚಣೆಯಾಗಲಿ ಆಗದಂತೆ, ಅವಶ್ಯವಿದ್ದಷ್ಟು ಹೊತ್ತು ಅವಶ್ಯಕ ರೀತಿಯಲ್ಲಿ ಮಾತ್ರ ಹಾಗೆ ನಡೆಸಬೇಕು. ಹಿಂದೆ ಮಕ್ಕಳಾಗಲಿ, ಪಾದಚಾರಿಗಳಾಗಲಿ, ಸೈಕಲ್ಲು ಹಾಗೂ ಇತರ ವಾಹನವಾಗಲಿ ಇಲ್ಲವೆಂದು ಖಚಿತಪಡಿಸಿಕೊಂಡ ಮೇಲೆ ವಾಹನವನ್ನು ಹಿಂದಕ್ಕೆ ನಡೆಸಬೇಕು. ಹಗಲು ಹೊತ್ತಿನಲ್ಲಿ ವಾಹನ ಹಾಗೂ ಜನರ ಗಮನ ಸೆಳೆಯುವ ಸಲುವಾಗಿ, ಮತ್ತು ರಾತ್ರಿ ಹೊತ್ತಿನಲ್ಲಿ

ಚೆನ್ನಾಗಿ ಕಾಣುವ ಉದ್ದೇಶದಿಂದ ಹಿಂಬದಿಯ ಲೈಟನ್ನು (Tail light) ಹಾಕಿ ವಾಹನವನ್ನು ಹಿಂದಕ್ಕೆ ನಡೆಸಬೇಕು.

ಸಾರಿಗೆ ವಾಹನವಾದರೆ ಚಾಲಕನು ಸಾಧ್ಯವಾದಷ್ಟು ತನ್ನ ಭಾಗದ ಕಡೆಗೆ ಹಿಂದಕ್ಕೆ ವಾಹವನ್ನು ನಡೆಸಲು ಪ್ರಯತ್ನಿಸಬೇಕು, ಕಾರಣ ಅವನಿಗೆ ಇನ್ನೊಂದು ಭಾಗ ಕಾಣುವುದಿಲ್ಲ. ಅವನು ಹಿನ್ನೋಟದ ಕನ್ನಡಿಯಲ್ಲಿ ನೋಡುತ್ತ ವಾಹನವನ್ನು ನಿಧಾನವಾಗಿ ಹಿಂದಕ್ಕೆ ನಡೆಸಬೇಕು. ಒಬ್ಬ ಸಹಾಯಕನನ್ನು ವಾಹನದಿಂದ ಇಳಿಸಿ ಅವನು ಹಿಂಭಾಗದ ಜನ ಹಾಗೂ ವಾಹನ ನೋಡಿ ಮಾರ್ಗದರ್ಶನ ನೀಡುವಂತೆ ತಿಳಿಸಿ, ಅವನ ನಿರ್ದೇಶನದಂತೆ ಎಚ್ಚರಿಕೆಯಿಂದ ನಿಧಾನವಾಗಿ ವಾಹನವನ್ನು ಹಿಂದಕ್ಕೆ ನಡೆಸಬೇಕು.

ಕಿರುರಸ್ತೆ, ಗಲ್ಲಿಗಳಿಂದ ಮುಖ್ಯರಸ್ತೆಗೆ ವಾಹನವನ್ನು ಹಿಂದಕ್ಕೆ ನಡೆಸುತ್ತ ಪ್ರವೇಶಿಸಬಾರದು. ಮುಖ್ಯರಸ್ತೆಯ ವಾಹನಗಳಿಗೆ ಚಲಿಸಲು ಆದ್ಯತೆಯಿರುವುದರಿಂದ, ಅವುಗಳು ವೇಗವಾಗಿ ಚಲಿಸುತ್ತಿರುವುದರಿಂದ, ಆ ರಸ್ತೆಗೆ ವಾಹನವನ್ನು ಹಿಂದಕ್ಕೆ ನಡೆಸುತ್ತ ಪ್ರವೇಶಿಸಿದರೆ ಅಪಘಾತವಾಗುತ್ತದೆ. ಆದಕಾರಣ ಮುಖ್ಯ ರಸ್ತೆಗೆ ಸೇರಿದಂತೆ ಗ್ಯಾರೇಜ್‌ಯಿದ್ದರೆ, ಗ್ಯಾರೇಜ್‌ನಲ್ಲಿ ನಿಲ್ಲಿಸುವಾಗಲೇ ವಾಹನವನ್ನು ಹಿಂದಕ್ಕೆ ನಡೆಸುತ್ತ ಅದರಲ್ಲಿ ನಿಲ್ಲಿಸಬೇಕು. ಆ ವಾಹವನ್ನು ಹೊರತೆಗೆಯುವಾಗ ಮುಮ್ಮುಖವಾಗಿ ಮುಖ್ಯ ರಸ್ತೆಗೆ ನಡೆಸಿಕೊಂಡು ಬರಬೇಕು.

೪. ವಾಹನ ಚಾಲಕನು ತಿಳಿದಿರಬೇಕಾದ ಕೆಲವು ಕಲಮುಗಳು

ವಾಹನ ಚಾಲಕನು ಮೋಟಾರು ವಾಹನ ಕಾಯ್ದೆ ೧೯೮೮ರ ಅಡಿಯಲ್ಲಿ ರಚಿಸಲಾಗಿರುವ ಕಲಮುಗಳನ್ನು ತನ್ನ, ಪ್ರಯಾಣಿಕರ ಮತ್ತು ರಸ್ತೆಯನ್ನು ಉಪಯೋಗಿಸುವ ಎಲ್ಲರ ಸುರಕ್ಷತೆಯ ದೃಷ್ಟಿಯಿಂದ ತಿಳಿದಿರಬೇಕಾಗಿದೆ. ಅವುಗಳಲ್ಲಿ ಕೆಲವು ಕಲಮುಗಳನ್ನು ಈ ಕೆಳಗೆ ಸೂಚಿಸಿದೆ.

ವಾಹನವನ್ನು ಅಪಾಯಕರ ಸ್ಥಿತಿಯಲ್ಲಿ ನಿಲ್ಲಿಸಿ ಹೋಗುವುದು

ಮೋಟಾರು ವಾಹನ ಚಾಲಕನು ವಾಹನವನ್ನು ಸಾರ್ವಜನಿಕ ಸ್ಥಳದಲ್ಲಿ; ರಸ್ತೆ ಉಪಯೋಗಿಸುವ ಇತರರಿಗೆ ಅಥವಾ ಪ್ರಯಾಣಿಕರಿಗೆ; ಅಪಾಯ, ಅಡೆತಡೆ ಅಥವಾ ಅನುಚಿತವಾಗುವ ಹಾಗೆ ನಿಲ್ಲಿಸಬಾರದು. (ಕಲಮು ೧೨೨)

ಮೆಟ್ಟಿಲುಗಳ ಮೇಲೆ ನಿಂತು ಪ್ರಯಾಣ ಮಾಡುವುದು

ಮೋಟಾರು ವಾಹನ ಚಾಲಕನು / ನಿರ್ವಾಹಕನು ವಾಹನದ ಮೆಟ್ಟಿಲುಗಳ ಮೇಲೆ ಪ್ರಯಾಣ ಮಾಡಲು ಯಾರನ್ನೂ ಬಿಡಬಾರದು. ಅಷ್ಟೇ ಅಲ್ಲದೆ ಚಾವಣಿಯನ್ನಾಗಲಿ, ಏಣಿಯನ್ನಾಗಲಿ ಆಶ್ರಯಿಸಿ ಪ್ರಯಾಣ ಮಾಡಲು ಬಿಡಬಾರದು. (ಕಲಮು ೧೨೩)

ಚಾಲಕನಿಗೆ ಅಡೆತಡೆಯನ್ನುಂಟು ಮಾಡುವುದು

ಮೋಟಾರು ವಾಹನ ಚಾಲಕನು ಆ ವಾಹನವನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಅಡೆತಡೆಯಾಗುವ ರೀತಿಯಲ್ಲಿ ಪ್ರಯಾಣಿಕರಿಗೆ ಆತನ ಮಗ್ಗುಲಲ್ಲಿ ಮುತ್ತಿಕೊಳ್ಳಲು ಅಥವಾ ಪದಾರ್ಥಗಳನ್ನು ಹೇರಲು ಅವಕಾಶ ಕೊಡಬಾರದು. (ಕಲಮು ೧೨೫)

ವಾಹನ ದಾಖಲೆಗಳನ್ನು ಹಾಜರುಪಡಿಸುವುದು

ಸಮವಸ್ತ್ರದಲ್ಲಿ ವಾಹನವನ್ನು ತಪಾಸಣೆ ಮಾಡಿದ ಪೊಲೀಸ್ ಅಧಿಕಾರಿ, ಮೋಟಾರು ವಾಹನಗಳ ಇನ್ಸ್‌ಪೆಕ್ಟರ್ ಅವರಿಗೆ ವಾಹನ ಚಾಲಕನು ವಾಹನ ನೋಂದಣಿ ಪುಸ್ತಕ, ವಿಮೆ, ಪರವಾನಗಿ, ಚಾಲನಾ ಲೈಸನ್ಸನ್ನು ಹಾಜರುಪಡಿಸಬೇಕು. ವಾಹನ ತಪಾಸಣೆ ಮಾಡಿದಾಗ ಯಾವುದಾದರೂ ದಾಖಲೆಯನ್ನು ಸ್ಥಳದಲ್ಲೆ ಹಾಜರುಪಡಿಸಲು ಸಾಧ್ಯವಾಗದೆ ಹೋದರೆ, ಅಂಥ ದಾಖಲೆಯನ್ನು ಪೊಲೀಸ್ ಅಧಿಕಾರಿಯಿಂದ / ಸೂಕ್ತ ಅಧಿಕಾರಿಯಿಂದ ದೃಢೀಕರಿಸಿ; ಕೇಸನ್ನು ದಾಖಲು ಮಾಡಿದ ಅಧಿಕಾರಿಗೆ ೧೫ ದಿನಗಳ ಒಳಗೆ ನೋಂದಾಯಿತ ಅಂಚೆ ಮೂಲಕ ರವಾನಿಸಬಹುದು. (ಕಲಮು ೧೩೦ ಮತ್ತು ಕೇಂ. ಮೋ. ವಾ. ನಿಯಮ ೧೯೮೯, ನಿಯಮ ೧೩೯).

ದ್ವಿಚಕ್ರವಾಹನಗಳ ಚಾಲಕರು ಮತ್ತು ಅವನ ಹಿಂದೆ ಕುಳಿತ ಪಿಲಿಯನ್ ರೈಡರ್

ದ್ವಿಚಕ್ರವಾಹನ ಚಾಲಕನು ತನ್ನ ಹಿಂದೆ ಒಬ್ಬ ವ್ಯಕ್ತಿಯನ್ನು ಮಾತ್ರ ಕುಳ್ಳಿರಿಸಿಕೊಂಡು ಪ್ರಯಾಣ ಮಾಡಬೇಕು. ಹಾಗೆ ಅವನನ್ನು ಕುಳ್ಳಿರಿಸಿಕೊಂಡು ಹೋಗುವಾಗ ಅವನು ಕುಳಿತ ಆಸನವನ್ನು ಆ ವಾಹನಕ್ಕೆ ಭದ್ರವಾಗಿ ಅಳವಡಿಸಿರಬೇಕು. ಸಾರ್ವಜನಿಕ ಸ್ಥಳದಲ್ಲಿ ವಾಹನವನ್ನು ನಡೆಸುವಾಗ ಚಾಲಕನು ಸೂಕ್ತ ಶಿರಸ್ತ್ರಾಣವನ್ನು (ಹೆಲ್ಮೆಟ್) ಧರಿಸಿರಬೇಕು. (ಕಲಮು ೧೨೮, ೧೨೯)

ಗೇಟುಗಳಿಲ್ಲದ ರೈಲ್ವೆ ದಾಟುದಾರಿಯಲ್ಲಿ ಚಾಲಕನು ವಹಿಸಬೇಕಾದ ಮುನ್ನೆಚ್ಚರಿಕೆ

ಮೋಟಾರು ವಾಹನಗಳ ಚಾಲಕನು ಗೇಟುಗಳಿಲ್ಲದ ರೈಲ್ವೆ ದಾಟು ದಾರಿಗೆ ಸಮೀಪಿಸುತ್ತಿರುವ ಹಾಗೆ ವಾಹನವನ್ನು ನಿಲ್ಲಿಸಬೇಕು. ದೂರದಿಂದ ರೈಲು ಬರುವುದು ಕಾಣಿಸುತ್ತಿಲ್ಲವೆಂದಾದರೆ ರೈಲ್ವೆದಾರಿಯ ತನಕ ಹೋಗಿ, ವಾಹನದ ಸಹಾಯಕ ಅಥವಾ ನಿರ್ವಾಹಕನನ್ನು ಇಳಿಸಿ; ರೈಲು ಬರುತ್ತಿದೆಯೇ ಎಂದು ಎರಡೂ ಬದಿಯಲ್ಲಿ ನೋಡಲು ತಿಳಿಸಿ, ಅವನು ಸೂಚನೆ ಕೊಟ್ಟನಂತರವೇ ರೈಲ್ವೆ ದಾಟು ದಾರಿಯನ್ನು ದಾಟಬೇಕು. ವಾಹನದಲ್ಲಿ ಸಹಾಯಕ, ನಿರ್ವಾಹಕ ಅಥವಾ ಯಾರೇ ಸಹಾಯಕ ಇಲ್ಲದ ಸಂದರ್ಭದಲ್ಲಿ ಚಾಲಕನೇ ಇಳಿದು ಎರಡೂ ಬದಿಯಿಂದ ಯಾವುದೇ ರೈಲು ಬರುತ್ತಿಲ್ಲ ಎಂದು ಖಾತರಿ ಮಾಡಿಕೊಂಡ ಅನಂತರ ಆ ರೈಲ್ವೆ ದಾಟು ದಾರಿಯನ್ನು ದಾಟಬೇಕು. (ಕಲಮು ೧೩೧)

ಅನಿವಾರ್ಯ ಸಂದರ್ಭಗಳಲ್ಲಿ ವಾಹನವನ್ನು ನಿಲ್ಲಿಸುವ ಕರ್ತವ್ಯ

ಮೋಟಾರು ವಾಹನದ ಚಾಲಕನು ಈ ಕೆಳ ಸೂಚಿಸಿರುವ ಕೆಲವು ಅನಿವಾರ್ಯ ಸಂದರ್ಭಗಳಲ್ಲಿ ಅವಶ್ಯವಾದಷ್ಟು ಕಾಲ ತನ್ನ ವಾಹನವನ್ನು ನಿಲ್ಲಿಸಬೇಕು.

೧. ಸಮವಸ್ತ್ರದಲ್ಲಿರುವ ಯಾರೇ ಪೊಲೀಸ್ ಅಧಿಕಾರಿಯು ಅಪೇಕ್ಷಿಸಿದರೆ.

೨. ಕುದುರೆ, ದನಕರು, ಒಂಟೆ, ಕತ್ತೆ, ಹೇಸರಗತ್ತೆ, ಕುರಿ ಅಥವಾ ಆಡು ಮುಂತಾದ ಪ್ರಾಣಿ ಪಾಲಕರು, ಆ ಪ್ರಾಣಿಯು ವಾಹನದಿಂದ ಬೆದರಿ ಅದನ್ನು ಹಿಡಿತದಲ್ಲಿಟ್ಟುಕೊಳ್ಳಲು ಸಾಧ್ಯವಾಗದಂತಾಗುತ್ತಿದೆ ಎಂದು ಕೇಳಿಕೊಂಡಾಗ.

೩. ವಾಹನವು ಅಪಘಾತಕ್ಕೊಳಗಾದಾಗ, ಮುಂದಿನ ಕಾರ್ಯಾಚರಣೆಗಾಗಿ ವಾಹನ ಚಾಲಕನು ಅಪಘಾತದಿಂದ ನಷ್ಟಕ್ಕೊಳಗಾದ ವ್ಯಕ್ತಿಗೆ ತನ್ನ ಹೆಸರು ಮತ್ತು ವಿಳಾಸವನ್ನು ನೀಡಬೇಕು. ಅಂತೆಯೇ ಸಂಕಷ್ಟಕ್ಕೊಳಗಾದ ವ್ಯಕ್ತಿಯ ಹೆಸರು ಮತ್ತು ವಿಳಾಸವನ್ನು ತಾನೂ ಪಡೆದುಕೊಳ್ಳಬೇಕು.

೪. ವಾಹನ ಚಾಲಕನು ಕಲಮು ೧೮೪ (ಅಪಾಯಕರವಾಗಿ ವಾಹನ ಚಾಲನೆ ಮಾಡುವುದು)ರ ಪ್ರಕಾರ ದಂಡನೀಯ ಅಪರಾಧವನ್ನು ಮಾಡಿರುವನೆಂದು ಒಬ್ಬ ವ್ಯಕ್ತಿಯು ಆಪಾದಿಸಿ ತನ್ನ ಹೆಸರು ಮತ್ತು ವಿಳಾಸವನ್ನು ನೀಡಿದರೆ, ಆಗ ಚಾಲಕನು ಅಂಥ ವ್ಯಕ್ತಿಗೆ ತನ್ನ ಹೆಸರು ಮತ್ತು ವಿಳಾಸವನ್ನು ನೀಡಬೇಕು. (ಕಲಮು ೧೩೨)

ಒಬ್ಬ ವ್ಯಕ್ತಿಗೆ ಅಪಘಾತ ಮತ್ತು ಬಾಧೆಯುಂಟಾದಾಗ ಚಾಲಕನ ಕರ್ತವ್ಯ

ಅಪಘಾತದ ಕಾರಣವಾಗಿ ಯಾವುದೇ ವ್ಯಕ್ತಿಗೆ ಬಾಧೆಯಾಗಲಿ ಅಥವಾ ತೃತೀಯ ವ್ಯಕ್ತಿಯ ಸ್ವತ್ತಿಗೆ ಜಖಂ ಆಗಿರಲಿ, ಆ ವಾಹನ ಚಾಲಕನು;

(ಕ) ದೊಂಬಿ, ಆಕ್ರೋಶ ಅಥವಾ ನಿಯಂತ್ರಣಕ್ಕೆ ಮೀರಿರುವ ಇತರ ಕಾರಣದಿಂದಾಗಿ ಸಾಧ್ಯವಾಗದ ಹೊರತು ಆ ಬಾಧೆಗೊಳಗಾದ ವ್ಯಕ್ತಿಗೆ ವೈದ್ಯಕೀಯ ನೆರವನ್ನು ದೊರಕಿಸಿಕೊಡಲು ಎಲ್ಲ ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಅವಶ್ಯವಾದರೆ ಆ ಬಾಧೆಗೊಳಗಾದ ವ್ಯಕ್ತಿಯನ್ನು ಆಸ್ಪತ್ರೆಗೆ ಕೊಂಡೊಯ್ಯಬೇಕು.

(ಖ) ಪೊಲೀಸ್ ಅಧಿಕಾರಿಗಳು ಕೇಳಿದಾಗ ಅವರು ಅಪೇಕ್ಷಿಸುವ ಎಲ್ಲ ಮಾಹಿತಿಯನ್ನು ನೀಡಬೇಕು. ಒಂದೊಮ್ಮೆ ಪೊಲೀಸ್ ಅಧಿಕಾರಿಯು ಅಲ್ಲಿಲ್ಲದಿದ್ದರೆ ಅಪಘಾತವಾದದ್ದು, ಆ ಸಂದರ್ಭ, ಖಂಡ (ಕ) ಪ್ರಕಾರ ಬಾಧೆಗೊಳಗಾದವನಿಗೆ ತಕ್ಷಣ ವೈದ್ಯಕೀಯ ನೆರವು ನೀಡಲಾಗದ ಕಾರಣವನ್ನು; ಅಪಘಾತವಾದ ಪರಿಸ್ಥಿತಿಯನ್ನು ಅವಲಂಬಿಸಿ ಹತ್ತಿರದ ಪೊಲೀಸ್ ಠಾಣೆಗೆ ಅಪಘಾತವಾದ ೨೪ ಗಂಟೆಯ ಒಳಗಾಗಿ ವರದಿಯನ್ನು ಸಲ್ಲಿಸಬೇಕು. (ಕಲಮು ೧೩೪)

೫. ಮೋಟಾರು ವಾಹನ ಚಾಲನಾ ಲೈಸನ್ಸು

ಯಾವುದೇ ಮೋಟಾರು ವಾಹನವನ್ನಾಗಲಿ ಸಾರ್ವಜನಿಕ ರಸ್ತೆಯಲ್ಲಿ ನಡೆಸಲು ಕಾನೂನು ಬದ್ಧವಾಗಿ ಆ ಮೋಟಾರು ವಾಹನ ಚಾಲಕನು ಚಾಲನಾ ಲೈಸನ್ಸು ಹೊಂದಿರಬೇಕು. ಚಾಲನಾ ಲೈಸನ್ಸು ನೀಡುವ ಅಧಿಕಾರ ಹೊಂದಿದ ಪ್ರಾದೇಶಿಕ ಸಾರಿಗೆ ಅಧಿಕಾರಿ (ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸರ್: ಆರ್.ಟಿ.ಓ.) ಅವರು ನೀಡಿದ ಒಂದು ಗೊತ್ತಾದ ವರ್ಗದ, ಚಾಲ್ತಿಯಲ್ಲಿರುವ ಲೈಸನ್ಸ್ ಹೊಂದಿದವನು ಮಾತ್ರ ಆ ವರ್ಗದ ವಾಹನವನ್ನು ನಡೆಸಬೇಕು. ಯಾವುದೇ ರಾಜ್ಯ ಸರ್ಕಾರದ ಆರ್.ಟಿ.ಓ. ನೀಡಿದ ಲೈಸನ್ಸು ಇಡೀ ಭಾರತದಲ್ಲಿ ಮಾನ್ಯತೆ ಹೊಂದಿರುತ್ತದೆ. (ಮೋ.ವಾ.ಕಾಯ್ದೆ ೧೯೮೮. ಕಲಮು ೩)

ಮೋಟಾರು ವಾಹನಗಳನ್ನು ನಡೆಸುವ ಬಗ್ಗೆ ವಯೋಮಿತಿ

(ಅ)	ಗೇರ್ ಇಲ್ಲದ ಮೋಟಾರ್ ಸೈಕಲ್ (೧೬ ವರ್ಷ ತುಂಬಿದ ವ್ಯಕ್ತಿಗೆ ನೀಡಲಾಗುವ ಕಲಿಕೆ ಲೈಸನ್ಸು ಪಡೆಯುವಾಗ ಆತನ ಅರ್ಜಿಯಲ್ಲಿ ಅವನ ತಂದೆ/ತಾಯಿ ಅಥವಾ ಪೋಷಕರು ಒಪ್ಪಿ ಸಹಿ ಮಾಡಬೇಕು)	೧೬ ವರ್ಷ ತುಂಬಿರಬೇಕು.
(ಆ)	ಮೋಟಾರ್ ಸೈಕಲ್ ಮತ್ತು ಕಾರ್ ಹಾಗೂ ಇತರ ಸಾರಿಗೇತರ ವಾಹನಗಳು	೧೮ ವರ್ಷ ತುಂಬಿರಬೇಕು.
(ಇ)	ಸಾರಿಗೆ ವಾಹನಗಳು (ಸರಕು ಹಾಗೂ ಪ್ರಯಾಣಿಕರ ಸಾರಿಗೆಯ ಉದ್ದೇಶದಿಂದ ಬಾಡಿಗೆಗಾಗಿ ನಡೆಸುವ ಲಾರಿ, ಬಸ್ಸು, ಟ್ಯಾಕ್ಸಿ, ಮೂರು ಚಕ್ರದ ಪ್ರಯಾಣಿಕರ ವಾಹನ (ಆಟೋರಿಕ್ಷಾ) ಮುಂತಾದವು ಹಾಗೂ ಸರಕು ಸಾಗಣೆ ವಾಹನ ಈ ವಿಭಾಗದಡಿಯಲ್ಲಿ ಬರುತ್ತವೆ (ಮೋ.ವಾ.ಕಾಯ್ದೆ ೧೯೮೮, ಕಲಮು ೪)	೨೦ ವರ್ಷ ತುಂಬಿರಬೇಕು.

ವಾಹನಗಳ ವರ್ಗ

ಕಲಿಕೆ ಲೈಸನ್ಸನ್ನು ಈ ಕೆಳಗೆ ಸೂಚಿಸಿರುವ ವರ್ಗದ ವಾಹನಗಳಿಗೆ ನೀಡಲಾಗುತ್ತದೆ.

೧. ಗೇರ್ ಇಲ್ಲದ ಮೋಟಾರು ಸೈಕಲ್ಲು.

೨. ಗೇರ್ ಇರುವ ಮೋಟಾರು ಸೈಕಲ್ಲು.

೩. ವಿಕಲ ಚೇತನರ ವಾಹನ.

೪. ಲಘು ಮೋಟಾರು ವಾಹನ.

೫. ಸಾರಿಗೆ ವಾಹನ.

೬. ರೋಡ್ ರೋಲರ್.

೭. ಕೆಲವು ವಿಶಿಷ್ಟ ಇತರೆ ಮೋಟಾರು ವಾಹನಗಳು.

ಲಘು ಮೋಟಾರು ವಾಹನ

ಎಂದರೆ ವಾಹನದ ಸಮಗ್ರ ಭಾರವು (gross weight) ೭,೫೦೦ ಕೆ.ಜಿ.ಯನ್ನು ಮೀರದ ಸಾರಿಗೆ ವಾಹನ, ಆಮ್ನಿ ಬಸ್ ಅಥವಾ ಖಾಲಿ ವಾಹನ ತೂಕ (unladen weight) ೭,೫೦೦ ಕೆ.ಜಿ. ಮೀರದ ಮೋಟಾರು ಕಾರು, ಟ್ರಾಕ್ಟರ್, ರೋಡ್‌ರೋಲರ್.

ಭಾರಿ ಸರಕು ವಾಹನ

ಎಂದರೆ ವಾಹನದ ಸಮಗ್ರ ಭಾರವು ೧೨,೦೦೦ ಕೆ.ಜಿ.ಯನ್ನು ಮೀರದ ಸಾರಿಗೆ ವಾಹನ, ಅಥವಾ ಖಾಲಿ ವಾಹನ ತೂಕ ೧೨,೦೦೦ ಕೆ.ಜಿ. ಮೀರದ ಟ್ರಾಕ್ಟರ್ ಅಥವಾ ರೋಡ್ ರೋಲರ್.

ಭಾರಿ ಪ್ರಯಾಣಿಕರ ವಾಹನ

ಎಂದರೆ ವಾಹನದ ಸಮಗ್ರ ಭಾರವು ೧೨,೦೦೦ ಕೆ.ಜಿ.ಯನ್ನು ಮೀರಿದ ಭಾರಿ ಪ್ರಯಾಣಿಕರ ವಾಹನ.

ಮಧ್ಯಮ ವರ್ಗದ ಸರಕು ವಾಹನ

ಭಾರಿ ಸರಕು ವಾಹನ ಮತ್ತು ಲಘು ಮೋಟಾರು ವಾಹನಗಳ ಹೊರತುಪಡಿಸಿ ಮಿಕ್ಕ ವಾಹನಗಳನ್ನು ಮಧ್ಯಮ ವರ್ಗದ ಸರಕು ವಾಹನಗಳೆಂದು ಕರೆಯಲಾಗುತ್ತದೆ.

ಮಧ್ಯಮ ವರ್ಗದ ಪ್ರಯಾಣಿಕರ ವಾಹನ

ಮೋಟಾರು ಸೈಕಲ್ಲು, ಅಶಕ್ತರ ವಾಹನ, ಲಘು ಮತ್ತು ಭಾರಿ ಪ್ರಯಾಣಿಕರ ವಾಹನಗಳನ್ನು ಹೊರತುಪಡಿಸಿ ಮಿಕ್ಕ ವಾಹನಗಳನ್ನು ಮಧ್ಯಮ ವರ್ಗದ ಪ್ರಯಾಣಿಕರ ವಾಹನವೆಂದು ಕರೆಯಲಾಗುತ್ತದೆ.

ಕಲಿಕೆ ಲೈಸನ್ಸು

ಮೋಟಾರು ವಾಹನವನ್ನು ನಡೆಸಲು ಇಚ್ಛಿಸುವ ಯಾವ ವ್ಯಕ್ತಿಯೇ ಆಗಲಿ ಅದನ್ನು ನಡೆಸಲು ಕಲಿಕೆ ಲೈಸನ್ಸು ಪಡೆಯಬೇಕು.

ಹಾಗೆ ಪಡೆದ ಕಲಿಕೆ ಲೈಸನ್ಸು ಆರು ತಿಂಗಳವರೆಗೆ ಚಾಲ್ತಿಯಲ್ಲಿರುತ್ತದೆ. ಒಂದು ವೇಳೆ ಆ ಆರು ತಿಂಗಳ ಅವಧಿಯಲ್ಲಿ ಖಾಯಂ ಲೈಸನ್ಸು ಪಡೆಯಲು ಅರ್ಜಿ ಸಲ್ಲಿಸಲು ಆಗದಿದ್ದ ಪಕ್ಷದಲ್ಲಿ ಹಾಗೂ ಇತರ ಯಾವುದೇ ಕಾರಣಗಳಿಗಾಗಿ ಆ ಕಲಿಕೆ ಲೈಸನ್ಸನ್ನು ಮತ್ತೆ ಆರು ತಿಂಗಳ ಅವಧಿಗೆ ನವೀಕರಿಸಿಕೊಳ್ಳಬೇಕು. ಅರ್ಜಿದಾರನು ಕಲಿಕೆ ಲೈಸನ್ಸು ಪಡೆಯಲು ಈ ಕೆಳಗೆ ಸೂಚಿಸಿರುವ ದಾಖಲೆಗಳನ್ನು ಒದಗಿಸಬೇಕು. ಅವನು ಸಾಮಾನ್ಯವಾಗಿ ವಾಸಿಸುವ ಸ್ಥಳದ ಸಮುಚಿತ ಲೈಸನ್ಸ್ ಪ್ರಾಧಿಕಾರಿಗೆ ಅರ್ಜಿ ಸಲ್ಲಿಸಿ ಖುದ್ದಾಗಿ ಹಾಜರಾಗಬೇಕು.

೧. ಅರ್ಜಿ ನಮೂನೆ ೨

೨. ಶುಲ್ಕ ರೂ. ೩೦–೦೦

೩. ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ೩ ಛಾಯಾಚಿತ್ರಗಳು

೪. ವೈದ್ಯಕೀಯ ಪ್ರಮಾಣ ಪತ್ರ

೫. ವಯಸ್ಸಿನ ದಾಖಲೆ

೬. ವಾಸಸ್ಥಾನದ ದಾಖಲೆ

೧. ವಯಸ್ಸಿನ ದಾಖಲೆ

ವಯಸ್ಸಿನ ರುಜುವಾತಿಗಾಗಿ ಅಂಗೀಕರಿಸುವ ದಾಖಲೆಗಳು ಜನ್ಮ ದಾಖಲೆ/ ಶಾಲಾ ಸರ್ಟಿಫಿಕೇಟ್ / ಪಾಸ್ ಪೋರ್ಟು.

೨. ವಾಸಸ್ಥಾನದ ದಾಖಲೆ

ವಾಸಸ್ಥಾನದ ರುಜುವಾತಿಗಾಗಿ ಅಂಗೀಕರಿಸುವ ದಾಖಲೆಗಳು

ಅ. ಚುನಾವಣಾ ಮತದಾರರ ಪಟ್ಟಿ

ಆ. ಜೀವವಿಮೆ ಪಾಲಿಸಿ

ಇ. ಪಾಸ್ ಪೋರ್ಟು

ಈ. ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಥವಾ ಸ್ಥಳೀಯ ಸಂಸ್ಥೆ ಕಛೇರಿಯವರು ನೀಡಿರುವ ಸಂಬಳ ಚೀಟಿ

ಉ. ಶಾಲಾ ಪ್ರಮಾಣ ಪತ್ರ

ಊ.ಜನ್ಮ ದಿನದ ದಾಖಲೆ

(ಕೇಂ. ಮೋ. ವಾ. ನಿಯಮ ೧೯೮೯. ನಿಯಮ ೪)

೩. ವೈದ್ಯಕೀಯ ಪ್ರಮಾಣ ಪತ್ರ

ಸಾರಿಗೆ ವಾಹನದ ಕಲಿಕೆ ಲೈಸನ್ಸು ಪಡೆಯುವಾಗ ನೋಂದಾಯಿತ ವೈದ್ಯರಿಂದ ವೈದ್ಯಕೀಯ ಪ್ರಮಾಣ ಪತ್ರ ನೀಡಬೇಕು. ಸಾರಿಗೇತರ ವಾಹನಗಳಾದ ಮೋಟಾರ್ ಸೈಕಲ್, ಲಘು ಮೋಟಾರು ವಾಹನ (Light motor vehicle) ಅಂದರೆ ಕಾರು ಮುಂತಾದವುಗಳಿಗೆ ಕಲಿಕೆ ಲೈಸನ್ಸು ಪಡೆಯುವಾಗ ಅರ್ಜಿದಾರ ೪೦ ವರ್ಷದ ಒಳಗಿನವನಾದರೆ ವೈದ್ಯಕೀಯ ಪ್ರಮಾಣ ಪತ್ರ ನೀಡಬೇಕಾಗಿಲ್ಲ. (ಮೋ.ವಾ. ಕಾಯ್ದೆ ೧೯೮೮. ಕಲಮು ೮ (೩) ಮತ್ತು ಕೇಂ. ಮೋ. ವಾ. ನಿಯಮ ೧೯೮೯. ನಿಯಮ ೫).

ಕಲಿಕೆ ಲೈಸನ್ಸ್ ಪಡೆಯಲು ಪ್ರಾರಂಭಿಕ ಪರೀಕ್ಷೆ

ಪ್ರತಿಯೊಬ್ಬ ಅರ್ಜಿದಾರನು ಖುದ್ದಾಗಿ ಪ್ರಾರಂಭಿಕ ಪರೀಕ್ಷೆಗೆ ಹಾಜರಾಗಿ ಆರ್.ಟಿ.ಓ. ಅವರಿಗೆ ತಾನು ಈ ಕೆಳಗೆ ಸೂಚಿಸಿರುವ ವಿಷಯಗಳ ಬಗ್ಗೆ ಸಾಕಷ್ಟು ಜ್ಞಾನ ಮತ್ತು ತಿಳಿವಳಿಕೆ ಹೊಂದಿರುವುದಾಗಿ ಖಾತ್ರಿ ಮಾಡಿಕೊಡಬೇಕು.

(ಅ) ಸಂಚಾರ ಚಿಹ್ನೆ, ಸಂಚಾರ ಸಂಕೇತಗಳು ಮತ್ತು ರಸ್ತೆ ನಿಯಂತ್ರಣದ ನಿಯಮಗಳು.

(ಆ) ಅಪಘಾತವಾದಾಗ ಚಾಲಕನ ಕರ್ತವ್ಯ.

(ಇ) ಗೇಟುಗಳಿಲ್ಲದ ರೈಲ್ವೆ ದಾಟುದಾರಿಯನ್ನು ದಾಟುವಾಗ ವಹಿಸಬೇಕಾದ ಎಚ್ಚರಿಕೆ.

(ಈ) ಮೋಟಾರು ವಾಹನವನ್ನು ನಡೆಸುವಾಗ ಆತ ಕೊಂಡೊಯ್ಯಬೇಕಾದ ವಾಹನ ದಾಖಲೆಗಳು.

(ಯಾವ ವ್ಯಕ್ತಿಯೇ ಆಗಲಿ ಒಂದು ವರ್ಗದ ಮೋಟಾರು ವಾಹನಕ್ಕೆ ಖಾಯಂ ಲೈಸನ್ಸು ಹೊಂದಿದ್ದು ಇನ್ನೊಂದು ವರ್ಗದ ಕಲಿಕೆ ಲೈಸನ್ಸು ಪಡೆಯಲು ಅಪೇಕ್ಷಿಸಿದರೆ ಅವನಿಗೆ ಪ್ರಾರಂಭಿಕ ಪರೀಕ್ಷೆಯಿಂದ ವಿನಾಯಿತಿ ನೀಡಲಾಗುತ್ತದೆ.)

ಕಲಿಕೆ ಲೈಸನ್ಸ್ ಹೊಂದಿದ ವ್ಯಕ್ತಿ ವಾಹನವನ್ನು ನಡೆಸುವಾಗ ಅವನ ಜೊತೆ ಖಾಯಂ ಲೈಸನ್ಸು ಹೊಂದಿದ ವ್ಯಕ್ತಿ ಇದ್ದು ವಾಹನವನ್ನು ಹಿಡಿತದಲ್ಲಿಟ್ಟುಕೊಳ್ಳುವ

ಅಥವಾ ನಿಲ್ಲಿಸುವ ಹಾಗೆ ವಾಹನದಲ್ಲಿ ಕುಳಿತಿರಬೇಕು. ಆ ವಾಹನದ ಮುಂದೆ ಮತ್ತು ಹಿಂದೆ ಒಂದು ರಟ್ಟಿನ ಮೇಲೆ ಅಥವಾ ತಗಡಿನ ಮೇಲೆ 'L' ('ಎಲ್' ಎಂಬ ಇಂಗ್ಲಿಷ್ ಅಕ್ಷರ)ವನ್ನು ಕೆಂಪು ಬಣ್ಣದಲ್ಲಿ ಬಿಳಿಯ ಹಿನ್ನೆಲೆಯ ಬಣ್ಣದ ಮೇಲೆ ಬರೆದಿರಬೇಕು. ಮೋಟಾರು ಸೈಕಲ್ಲಿನ ಕಲಿಕೆ ಲೈಸನ್ಸು ಹೊಂದಿದ ವ್ಯಕ್ತಿಯು, ಯಾರೇ ಹಿಂಬದಿಯ ಸವಾರ (pillion rider) ನನ್ನು ಕುಳ್ಳಿರಿಸಿಕೊಳ್ಳದೆ, ಆ ವಾಹನ ಚಾಲನೆಯನ್ನು ಕಲಿಸುವ ವ್ಯಕ್ತಿಯನ್ನು ಮಾತ್ರ ಕುಳ್ಳಿರಿಸಿಕೊಂಡಿರಬೇಕು.

ಸೂಚನೆ : ಸಾರಿಗೆ ವಾಹನ ಅಂದರೆ ಲಾರಿ, ಬಸ್ಸು, ಮೋಟಾರ್ ಕ್ಯಾಬ್ ಆಟೋರಿಕ್ಷಾ ಮುಂತಾದ ವಾಹನ ಚಾಲನೆಯ ಕಲಿಕೆ ಲೈಸನ್ಸು ಪಡೆಯಲು ಅರ್ಜಿದಾರನು ಲಘು ಮೋಟಾರು ವಾಹನ (ಕಾರು) ಲೈಸನ್ಸನ್ನು ಹೊಂದಿ ಒಂದು ವರ್ಷವಾಗಿರಬೇಕು ಮತ್ತು ವಯಸ್ಸು ೨೦ ವರ್ಷ ತುಂಬಿರಬೇಕು. ಅವನು ೮ನೇ ತರಗತಿಯಲ್ಲಿ ಉತ್ತೀರ್ಣನಾಗಿರಬೇಕು. ಅವನು ಚಾಲನಾತರಬೇತಿ ಶಾಲೆಯಿಂದ ಪಡೆದ ನಮೂನೆ ೫ನ್ನು ಹಾಜರುಪಡಿಸಬೇಕು. (ಕೇ.ಮೊ.ವಾ. ನಿಯಮ ೧೯೮೯ ನಿಯಮ ೮,೧೪)

ಎಸ್.ಎಸ್.ಎಲ್.ಸಿ. ಉತ್ತೀರ್ಣನಾಗದ ಮತ್ತು ಅವಿದ್ಯಾವಂತ ಅಭ್ಯರ್ಥಿಗೆ ಮೌಖಿಕ ಪರೀಕ್ಷೆ ನಡೆಸಲಾಗುತ್ತದೆ.

ಎಸ್.ಎಸ್.ಎಲ್.ಸಿ. ಉತ್ತೀರ್ಣನಾಗಿರುವ ಅಭ್ಯರ್ಥಿಗೆ ೧೫ ಅಂಕಗಳನ್ನುಳ್ಳ ಪ್ರಶ್ನೆ ಪತ್ರಿಕೆ ನೀಡಲಾಗುತ್ತದೆ. ಅದರಲ್ಲಿ ಅರ್ಧದಷ್ಟು ಸಂಚಾರ ಚಿಹ್ನೆಗಳು, ಸೂಚನೆಗಳು, ರಸ್ತೆಯ ಮೇಲಿರುವ ಪಟ್ಟೆಯ ಗುರುತುಗಳಿಗೆ ಸಂಬಂಧ ಪಟ್ಟಿರುತ್ತದೆ. ಉಳಿದ ಅರ್ಧ ಸಂಚಾರ ನಿಯಮಗಳು ಮತ್ತು ನಿಬಂಧನೆಗಳು, ಚಾಲಕನು ರೈಲ್ವೆ ಲೆವೆಲ್ ಕ್ರಾಸಿಂಗ್ನಲ್ಲಿ ಮತ್ತು ಅಪಘಾತವಾದಾಗ ನಿರ್ವಹಿಸಬೇಕಾದ ಕರ್ತವ್ಯಗಳನ್ನು ಕುರಿತು ಇರುತ್ತದೆ. ಅಭ್ಯರ್ಥಿಯು ಕನಿಷ್ಠ ೧೦ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದರೆ ಉತ್ತೀರ್ಣನಾಗುತ್ತಾನೆ.

ಕಲಿಕೆ ಲೈಸನ್ಸು ಪಡೆಯಲು ಲಿಖಿತ ಪರೀಕ್ಷೆಗೆ ಹಾಜರಾಗುವಾಗ ನೀಡುವ ಮಾದರಿ ಪ್ರಶ್ನೆ ಪತ್ರಿಕೆ ಮತ್ತು ಅದರ ಸರಿ ಉತ್ತರ.

ಪ್ರಶ್ನೆ ಪತ್ರಿಕೆ

ಪ್ರತಿ ಪ್ರಶ್ನೆಗೆ ಮೂರು ಉತ್ತರಗಳನ್ನು ಕೊಟ್ಟಿದೆ. ಸರಿಯಾದುದನ್ನು ಆಯ್ಕೆ ಮಾಡಿ.

೧. ***ರಸ್ತೆಗಳ ಕೂಡು ಸ್ಥಳದ ಬಳಿ ನಿಲ್ಲಿಸುವ ಸೂಚನೆ ಕಂಡಾಗ ವಾಹನವನ್ನು***

೧. ಸಂಚಾರ ಸಂಕೇತದ ನಿಲ್ಲುಪಟ್ಟೆಯ ಹಿಂಭಾಗದಲ್ಲಿ ನಿಲ್ಲಿಸಬೇಕು

೨. ಜನರು ರಸ್ತೆ ದಾಟಲು ಅನುಕೂಲವಾಗುವಂತೆ ಸಂಚಾರ ಸಂಕೇತದ ಹತ್ತಿರ ಎಲ್ಲಾದರೂ ನಿಲ್ಲಿಸಬಹುದು

೩. ನಿಲ್ಲು ಪಟ್ಟೆಯಿಂದ ಹತ್ತು ಅಡಿ ಹಿಂದೆ ನಿಲ್ಲಿಸಬೇಕು

೨. ಎಂ–೩೪ ಚಿಹ್ನೆಯ ಅರ್ಥ

೧. ಕಡ್ಡಾಯ ಸೈಕಲ್ ಪಥ

೨. ಕಡ್ಡಾಯ ಮೋಟಾರು ಸೈಕಲ್ ಪಥ

೩. ಸೈಕಲ್ ಪ್ರವೇಶ ನಿಷೇಧಿಸಿದೆ

೩. ಎಂ–೩ ಚಿಹ್ನೆಯ ಅರ್ಥ

೧. ಸಾರಿಗೆ ವಾಹನಗಳಿಗೆ ನಿಷೇಧ

೨. ಭಾಗಶಃ ಸಂಚಾರ ನಿಷೇಧ

೩. ನೇರ ನಿಷೇಧ ಅಥವಾ ಪ್ರವೇಶವಿಲ್ಲ

೪. ತಿರುವು ಕಂಡಾಗ, ತಿರುಗುವ ಮೊದಲು ಎಷ್ಟು ಅಡಿಗಳ ಮೊದಲೆ ಕೈ ಸಂಕೇತ ನೀಡಬೇಕೆಂದರೆ,

೧. ೫೦ ಅಡಿಗಳು

೨. ೧೦೦ ಅಡಿಗಳು

೩. ತಿರುವು ಪಡೆಯುವಾಗ

೫. ಸಿ–೧೭ ಚಿಹ್ನೆಯ ಅರ್ಥ

೧. ಶಾಲಾ ಮಕ್ಕಳು ದಾಟುವ ರಸ್ತೆ

೨. ಮುಂದೆ ಶಾಲಾ ಪ್ರದೇಶವಿದೆ. ನಿಧಾನವಾಗಿ ಎಚ್ಚರಿಕೆಯಿಂದ ಚಲಿಸಿ

೩. ಶಾಲಾ ಮಕ್ಕಳು ದಾಟುವ ರಸ್ತೆಯಲ್ಲ

೬. ಕಾವಲುಗಾರನಿಲ್ಲದ ರೈಲ್ವೆ ಲೆವೆಲ್ ಕ್ರಾಸಿಂಗ್‌ನಲ್ಲಿ ಚಾಲಕನ ಕರ್ತವ್ಯ

೧. ಅವಸರದಲ್ಲಿ ನುಗ್ಗಬೇಕು

೨. ವಾಹನವನ್ನು ನಿಲ್ಲಿಸಬೇಕು. ವಾಹನದಿಂದ ಇಳಿದು ರೈಲು ಬರುತ್ತಿದೆಯೆ ಎಂದು ಎರಡೂ ಪಕ್ಕ ದೃಷ್ಟಿಹರಿಸಿ ನೋಡಬೇಕು.

೩. ಈ ಎರಡೂ ಅಲ್ಲ

೭. **ಅಪಾಯಕಾರಿ ಸರಕು ಸಾಗಾಣಿಕೆಯ ವಾಹನವನ್ನು ಅದರ**

೧. ಆಕಾರ ಮತ್ತು ಬಣ್ಣಗಳಿಂದ ಗುರುತಿಸಬಹುದು

೨. ವಜ್ರಾಕೃತಿಯ ಎಚ್ಚರಿಕೆ ಸೂಚನೆಯಿಂದ ಗುರುತಿಸಬಹುದು

೩. ವಜ್ರಾಕೃತಿಯ ಎಚ್ಚರಿಕೆ ಸೂಚನೆ ಮತ್ತು ವಿವರಗಳ ಪಟ್ಟಿಯಿಂದ ಗುರುತಿಸಬಹುದು

೮. **ಇ-೮ ಚಿಹ್ನೆಯ ಅರ್ಥ**

೧. ವಿರಾಮ ಸ್ಥಳ

೨. ಪ್ರಥಮ ಚಿಕಿತ್ಸಾ ಪೆಟ್ಟಿಗೆ

೩. ಆಸ್ಪತ್ರೆ

೯. **ನಿಮ್ಮ ವಾಹನವು ವ್ಯಕ್ತಿಗಳಿಗೆ ಗಾಯವಾಗುವಂತಹ ಅಪಘಾತಕ್ಕೆ ಒಳಗಾಗಿದೆ. ಆಗ ನೀವು ಮಾಡಬೇಕಾದುದು**

೧. ಹತ್ತಿರದ ಪೊಲೀಸ್ ಸ್ಟೇಷನ್‌ಗೆ ವರದಿ ನೀಡಬೇಕು ಮತ್ತು ಗಾಯಗೊಂಡ ವ್ಯಕ್ತಿಗಳನ್ನು ಆಸ್ಪತ್ರೆಗೆ ಕೊಂಡೊಯ್ಯಬೇಕು

೨. ಪೊಲೀಸ್ ಸ್ಟೇಷನ್‌ಗೆ ವರದಿ ನೀಡಬೇಕಾಗಿಲ್ಲ

೩. ಪೊಲೀಸ್ ಸ್ಟೇಷನ್‌ಗೆ ವರದಿ ನೀಡಬೇಕಾಗಿಲ್ಲ ಆದರೆ ಗಾಯಾಳುವನ್ನು ಆಸ್ಪತ್ರೆಗೆ ಕೊಂಡೊಯ್ಯಬೇಕು

೧೦. **ಎಂ-೨೭ ಚಿಹ್ನೆಯ ಅರ್ಥ**

೧. ವಾಹನಗಳನ್ನು ನಿಲ್ಲಿಸುವಂತಿಲ್ಲ

೨. ನಿರ್ಬಂಧ ಕೊನೆ ಚಿಹ್ನೆ

೩. ಅಗಲ ಮಿತಿ

೧೧. **ವಾಹನ ಚಾಲನೆ ಮಾಡುವಾಗ ಸದಾ ಹೊಂದಿರಬೇಕಾದ ವಾಹನ ದಾಖಲೆಗಳು**

೧. ಚಾಲನಾ ಲೈಸನ್ಸು ಮಾತ್ರ

೨. ಚಾಲನಾ ಲೈಸನ್ಸು ಮತ್ತು ವಾಹನ ವಿಮಾ ಪತ್ರ

೩. ಚಾಲನಾ ಲೈಸನ್ಸು, ವಾಹನ ತೆರಿಗೆ ಪತ್ರ ಮತ್ತು ವಾಹನ ವಿಮಾ ಪತ್ರ

೧೨. **ವೃತ್ತ ಮತ್ತು ಕೂಡುರಸ್ತೆಯಲ್ಲಿ ನಿಂತು**

೧. ನಿಮ್ಮ ಬಲಭಾಗದ ವಾಹನಕ್ಕೆ ಆದ್ಯತೆ ಕೊಡಬೇಕು

೨. ನಿಮ್ಮ ಎಡಭಾಗದ ವಾಹನಕ್ಕೆ ಆದ್ಯತೆ ಕೊಡಬೇಕು

೩. ನಿಮ್ಮ ವಾಹನಕ್ಕಿಂತ ಭಾರಿಯಾದ ವಾಹನಕ್ಕೆ ಆದ್ಯತೆ ಕೊಡಬೇಕು

೧೩. ಚಾಲಕರಿಗೆ ಲೈಸನ್ಸು ಕೊಡುವುದು ಏತಕ್ಕೆಂದರೆ,

೧. ರಾಜ್ಯದ ಬೊಕ್ಕಸಕ್ಕೆ ಹೆಚ್ಚು ಹಣ ಸಂಗ್ರಹಿಸಲು

೨. ಪೋಲೀಸರಿಗೆ ತಮ್ಮ ಪರಿಚಯ ನೀಡಲು

೩. ಸುರಕ್ಷಿತವಲ್ಲದ ಚಾಲಕನನ್ನು ವಾಹನ ಚಾಲನೆಯಿಂದ ದೂರವಿಡಲು

೧೪. ಶಿ-೧೬ ಚಿಹ್ನೆಯ ಅರ್ಥ

೧. ಪಾದಚಾರಿಯ ದಾಟು

೨. ಮುಂದೆ ಶಾಲೆಯಿದೆ

೩. ಕಚ್ಚಾ ರಸ್ತೆ

೧೫. ಹೆಚ್ಚಿನ ಮೋಟಾರು ಸೈಕಲ್ ಅಪಘಾತಗಳು, ಮೋಟಾರ್ ಸೈಕಲ್ ಚಾಲಕರ ತಪ್ಪಿಲ್ಲದೆ ಸಂಭವಿಸುತ್ತದೆ, ಏತಕ್ಕೆಂದರೆ:

೧. ಇತರ ಮೋಟಾರುವಾಹನ ಚಾಲಕರು ಮೋಟಾರು ಸೈಕಲ್ ಚಾಲಕರನ್ನು ಕಡೆಗಣಿಸುತ್ತಾರೆ.

೨. ಇತರ ವಾಹನ ಚಾಲಕರು ಮೋಟಾರು ಸೈಕಲ್ ಚಾಲಕರಿಗೆ ಆದ್ಯತೆ ಕೊಡುವುದಿಲ್ಲ.

೩. ಮೋಟಾರು ಸೈಕಲ್‌ಗಳು ಇತರ ವಾಹನಗಳಿಗಿಂತ ಗಾತ್ರದಲ್ಲಿ ಸಣ್ಣದಾಗಿರುವುದರಿಂದ, ಚಲಿಸುವಾಗ ಕಾಣಿಸುವುದಿಲ್ಲ.

ಸರಿ ಉತ್ತರ

ಪ್ರಶ್ನೆಗಳು	೧	೨	೩	೪	೫	೬	೭	೮	೯	೧೦	೧೧	೧೨	೧೩	೧೪	೧೫
ಉತ್ತರಗಳು	೧	೧	೩	೨	೨	೨	೩	೩	೧	೨	೩	೧	೩	೧	೩

ಸ್ಮಾರ್ಟ್ ಕಾರ್ಡ್ : ಇದು ಪ್ಲಾಸ್ಟಿಕ್ ಕಾರ್ಡ್ ಮೇಲೆ ನೆಲೆಗೊಳಿಸಿರುವ ಮೈಕ್ರೊಪ್ರಾಸಸರ್ ಚಿಪ್ ಎಂಬ ಸಾಧನ. ಇದು ನಿರ್ದಿಷ್ಟ ದತ್ತಾಂಶಗಳನ್ನು (ಡಾಟ) ಶೇಖರಿಸಿಕೊಂಡಿರುತ್ತದೆ. ಆಜ್ಞಾಪನೆಗೊಳಿಸಿದಾಗ ಕ್ರಿಯಾಶೀಲವಾಗುತ್ತದೆ.

ನಮೂನೆ ೭ರಲ್ಲಿರುವ ಈ ಚಾಲನಾ ಲೈಸನ್ಸ್ ಪಾಕೆಟ್‌ಸೈಜ್‌ನಲ್ಲಿದ್ದು ಅನುಕೂಲಕರವಾಗಿರುವ ದಾಖಲೆ.

ಮೈಕ್ರೊಚಿಪ್‌ನಲ್ಲಿ ತುಂಬ ಮೌಲಿಕವಾದ ಲೈಸನ್ಸ್‌ನ ವಿವರ, ಭಾವಚಿತ್ರ, ಬೆರಳಿನ ಗುರುತಿನ ಜೀವಸಂಗತಿಯ ವೈಯಕ್ತಿಕ ವಿವರಗಳು ಇರುತ್ತವೆ. ಇದರಲ್ಲಿ ಚಾಲನಾ ದೋಷಕ್ಕೆ ದಂಡಪಾವತಿಸಿದ್ದು, ದಂಡ ಪಾವತಿ ಮಾಡಬೇಕಾಗಿರುವ ವಿವರಗಳು ಇರುತ್ತವೆ. ಇದು ಹೆಚ್ಚಿನ ಸುರಕ್ಷತೆ, ವಿಶ್ವಾಸಾರ್ಹತೆ ಮತ್ತು ಅನುಕೂಲವನ್ನು ಹೊಂದಿದೆ. ಇದು ನಕಲು ಮಾಡಲಾಗದ ರೀತಿಯ ಭದ್ರವಾಗಿ ನಾಟಿಕೊಂಡಿರುವ ರಾಜ್ಯದ ಚಿಹ್ನೆ (hologram) ಹೊಂದಿದೆ.

ಖಾಯಂ ಲೈಸನ್ಸು

ಅರ್ಜಿದಾರನು ನಿರ್ದಿಷ್ಟವಾದ ವಾಹನ ನಡೆಸುವ ಸಾಮರ್ಥ್ಯ ಪರೀಕ್ಷೆಯಲ್ಲಿ ಆರ್.ಟಿ.ಓ. (ಲೈಸನ್ಸು ಪ್ರಾಧಿಕಾರಿ) ಅವರಿಗೆ ಮನವರಿಕೆಯಾಗುವಂತೆ ವಾಹನವನ್ನು ನಡೆಸಿ ಉತ್ತೀರ್ಣನಾದಾಗ ಖಾಯಂ ಲೈಸನ್ಸನ್ನು ನೀಡಲಾಗುವುದು.

(ಅ) ಅರ್ಜಿದಾರನು ಖಾಯಂ ಲೈಸನ್ಸು ಪಡೆಯಲು ಈ ಕೆಳಗೆ ಸೂಚಿಸಿರುವ ದಾಖಲೆಗಳ ಜೊತೆಗೆ ಖುದ್ದಾಗಿ ಪರೀಕ್ಷೆಗೆ ಹಾಜರಾಗಬೇಕು.

೧. ಅರ್ಜಿ ನಮೂನೆ ಸಂಖ್ಯೆ – ೪

೨. ಚಾಲನಾ ಲೈಸನ್ಸು ಶುಲ್ಕ ರೂ. ೪೦–೦೦

೩. ಪುಸ್ತಕರೂಪದಲ್ಲಿ ಚಾಲನಾ ಪರೀಕ್ಷೆ ಶುಲ್ಕ ರೂ. ೫೦–೦೦

೪. ಇತ್ತೀಚಿನ ಪಾಸ್ ಪೋರ್ಟ್ ಅಳತೆಯ ೩ ಛಾಯಾಚಿತ್ರಗಳು

೫. ಚಾಲ್ತಿಯಲ್ಲಿರುವ ಕಲಿಕೆ ಲೈಸನ್ಸು (ಕಲಿಕೆ ಲೈಸನ್ಸು ಪಡೆದು ೩೦ ದಿನಗಳು ಕಳೆದಿರಬೇಕು)

೬. ಅಭ್ಯರ್ಥಿಯು ಚಾಲನಾ ತರಬೇತಿ ಶಾಲೆಯಿಂದ ಹಾಜರಾಗುತ್ತಿದ್ದರೆ, ಆ ತರಬೇತಿ ಶಾಲೆ ನಮೂನೆ ೫ ರಲ್ಲಿ ನೀಡಿರುವ ಪ್ರಮಾಣ ಪತ್ರವನ್ನು ಹಾಜರುಪಡಿಸಬೇಕು.

೭. ಸ್ಮಾರ್ಟ್ ಕಾರ್ಡ್ ರೂ. ೨೦೦–೦೦

ಅರ್ಜಿದಾರನು ಯಾವ ವರ್ಗದ ವಾಹನಕ್ಕೆ ಅರ್ಜಿ ಸಲ್ಲಿಸಿರುವನೋ ಆ ವರ್ಗದ ವಾಹನದಲ್ಲಿಯೇ ಅವನ ಪರೀಕ್ಷೆಯನ್ನು ತೆಗೆದುಕೊಳ್ಳಲಾಗುವುದು.

(ಆ) ಅಸ್ತಿತ್ವದಲ್ಲಿರುವ ಲೈಸನ್ಸ್‌ಗೆ ಇನ್ನೊಂದು ವರ್ಗದ ವಾಹನ ಸೇರಿಸುವುದರ ಬಗ್ಗೆ (ಎಂಡಾರ್ಸ್‌ಮೆಂಟ್)

ಅರ್ಜಿದಾರನು ಈ ಕೆಳಗೆ ಸೂಚಿಸಿರುವ ದಾಖಲೆಗಳ ಜೊತೆಗೆ ಖುದ್ದಾಗಿ ಪರೀಕ್ಷೆಗೆ ಹಾಜರಾಗಬೇಕು.

೧. ಅರ್ಜಿ ನಮೂನೆ ಸಂಖ್ಯೆ-೮

೨. ಹಿಂಬರಹ (endorsement) ಶುಲ್ಕ ರೂ. ೩೦-೦೦

೩. ಪುಸ್ತಕರೂಪದಲ್ಲಿ ಚಾಲನಾ ಪರೀಕ್ಷೆ ಶುಲ್ಕ ರೂ. ೫೦-೦೦

೪. ಸೇರ್ಪಡೆಯಾಗಬೇಕಾದ ವಾಹನ ವರ್ಗದ ಚಾಲ್ತಿಯಲ್ಲಿರುವ ಕಲಿಕೆ ಲೈಸನ್ಸು

೫. ಸಾರಿಗೆ ವಾಹನವನ್ನು ಸೇರಿಸಬೇಕಾದರೆ, ಚಾಲನಾ ತರಬೇತಿ ಶಾಲೆಯಿಂದ ಪಡೆದ ನಮೂನೆ ಸಂಖ್ಯೆ ೫ ರಲ್ಲಿರುವ ಪ್ರಮಾಣ ಪತ್ರ

೬. ಸ್ಮಾರ್ಟ್ ಕಾರ್ಡ್ ರೂ. ೨೦೦-೦೦

ಈ ಮೇಲಿನ ಎರಡೂ ಸಂದರ್ಭಗಳಲ್ಲಿ ವಾಹನ ಪರೀಕ್ಷಾ ಸಮಯದಲ್ಲಿ ಆಯಾ ವರ್ಗದ ವಾಹನವನ್ನು ಅದರ ದಾಖಲಾತಿಗಳಾದ ನೋಂದಣಿ ಪುಸ್ತಕ, ವಾಹನ ತೆರಿಗೆ ಕಾರ್ಡು, ವಿಮಾ ಪತ್ರವನ್ನು, ಸಾರಿಗೆ ವಾಹನವಾದರೆ ಆ ವಾಹನದ ಅರ್ಹತಾ ಪತ್ರ (fitness certificate)ವನ್ನು, ಪರವಾನಗಿ (Permit) ಯನ್ನು ಹಾಜರುಪಡಿಸಬೇಕು.

ಲೈಸನ್ಸ್‌ನ ಚಾಲ್ತಿ

೧) ಸಾರಿಗೆ ವಾಹನಗಳು – ೩ ವರ್ಷದ ಅವಧಿ

೨) ಅಪಾಯಕರವಾದ (Hazardous goods) ಸರಕು ಸಾಗಿಸುವ ವಾಹನ – ೧ ವರ್ಷದ ಅವಧಿ

೩) ಸಾರಿಗೇತರ ವಾಹನಗಳು (ಮೋಟಾರ್ ಸೈಕಲ್ಲು, ಲಘು ಮೋಟಾರುವಾಹನ (ಕಾರು) ಮೊದಲಾದುವು) –

(ಅ) ಅರ್ಜಿದಾರನು ೫೦ ವರ್ಷ ಪೂರ್ಣವಾಗಿಲ್ಲದವನಾದರೆ ಆ ಲೈಸನ್ಸನ್ನು ನೀಡಿದ ಅಥವಾ ನವೀಕರಿಸಿದ ದಿನದಿಂದ ಇಪ್ಪತ್ತು ವರ್ಷದ ಅವಧಿಗೆ, ಅಥವಾ ಆ ವ್ಯಕ್ತಿಗೆ ಐವತ್ತು ವರ್ಷ ಆಗುವವರೆಗೆ – ಈ ಎರಡರಲ್ಲಿ ಯಾವುದು ಮುಂಚಿತವೋ ಹಾಗೆ ಚಾಲ್ತಿಯಲ್ಲಿರುವಂತೆ ನೀಡಲಾಗುವುದು ಅಥವಾ ನವೀಕರಿಸಲಾಗುವುದು.

(ಆ) ಅರ್ಜಿದಾರನಿಗೆ ೫೦ ವರ್ಷವಾದ ನಂತರ ಲೈಸನ್ಸು ನೀಡಿಕೆಯಾಗಲಿ, ನವೀಕರಣವಾಗಲಿ ಐದು ವರ್ಷದವರೆಗೆ ಚಾಲ್ತಿಯಲ್ಲಿರುವಂತೆ ನೀಡಲಾಗುವುದು.

(ಮೋ.ವಾ. ಕಾಯ್ದೆ ೧೯೮೮, ಕಲಮು ೧೪)

ಕ್ಲುಪ್ತಕಾಲ ಮೀರಿದ ಮೇಲೂ ಅರ್ಜಿ ಸಲ್ಲಿಸಲು ನೀಡುವ ರಿಯಾಯಿತಿ (Grace Period)

ಈ ಮೇಲೆ ಸೂಚಿಸಿರುವ ಪ್ರತಿಯೊಂದು ವರ್ಗದ ಲೈಸನ್ಸಿನ ಅವಧಿ, ಅವಧಿ ಮುಗಿದ ೩೦ ದಿನಗಳವರೆಗೆ ಚಾಲ್ತಿಯಲ್ಲಿರುವ ರಿಯಾಯಿತಿ ಹೊಂದಿರುತ್ತದೆ.

ಸೂಚನೆ : ಅಪಾಯಕರವಾದ ಸರಕು ಸಾಗಿಸುವ ವಾಹನ ಚಾಲಕನ ಲೈಸನ್ಸನ್ನು ಒಂದು ವರ್ಷದ ಅವಧಿಯವರೆಗೆ ನೀಡಲಾಗುವುದು. ಅನಂತರ ಆ ಚಾಲಕ, ಗೊತ್ತು ಮಾಡಿದ ಒಂದು ದಿನದ ಅವಧಿಯ ಪುನಶ್ಚೇತನ (Refresh course) ತರಗತಿಗೆ ಹಾಜರಾದ ನಂತರ ಮತ್ತೆ ಒಂದು ವರ್ಷಕ್ಕೆ ಅವನ ಲೈಸನ್ಸನ್ನು ನವೀಕರಿಸಲಾಗುವುದು.

ಖಾಯಂ ಲೈಸನ್ಸು ಪಡೆಯಲು ಅರ್ಜಿದಾರನು ಕಲಿಕೆ ಲೈಸನ್ಸು ಪಡೆದು ೩೦ ದಿನಗಳಾದ ನಂತರ ಪರೀಕ್ಷೆಗೆ ಹಾಜರಾಗಬಹುದು. ಅನುತ್ತೀರ್ಣನಾದ ಸಂದರ್ಭದಲ್ಲಿ, ಅನುತ್ತೀರ್ಣನಾದ ಏಳು ದಿನಗಳ ನಂತರ ಮರು ಪರೀಕ್ಷೆಗೆ ಹಾಜರಾಗಬಹುದು. ಹೀಗೆ ಮೂರು ಸಲ ಅನುತ್ತೀರ್ಣನಾದ ದಿನದಿಂದ ೬೦ ದಿನಗಳ ನಂತರ ಮಾತ್ರ ಮರು ಪರೀಕ್ಷೆಗೆ ಹಾಜರಾಗಬಹುದು.

(ಮೋ.ವಾ. ಕಾಯ್ದೆ ೧೯೮೮, ಕಲಮು ೯ (೫) ಮತ್ತು ಕೇಂ. ಮೋ. ವಾಹನ ನಿಯಮ ೧೯೮೯. ನಿಯಮ ೧೫ (೧))

ಅಪಾಯಕರ ಸರಕು ಸಾಗಿಸುವ ವಾಹನ ಚಾಲನಾ ಲೈಸನ್ಸು ಪಡೆಯಲು ಇಚ್ಛಿಸುವವನು ಈ ಕೆಳಗೆ ಸೂಚಿಸಿರುವ ಅಗತ್ಯಗಳನ್ನು ಪೂರೈಸಬೇಕು.

೧. ಸಾರಿಗೆ ವಾಹನ ಲೈಸನ್ಸು ಹೊಂದಿರಬೇಕು.

೨. ಇಂಗ್ಲಿಷ್ ಭಾಷೆಯನ್ನು ಓದಲು ಮತ್ತು ಬರೆಯಲು ತಿಳಿದಿರಬೇಕು.

೩. ಯಾವುದಾದರೂ ಒಂದು ಭಾರತೀಯ ಭಾಷೆಯನ್ನು ಓದಲು ಮತ್ತು ಬರೆಯಲು ತಿಳಿದಿರಬೇಕು.

೪. ಸ್ಫೋಟಕ ಮತ್ತು ಅಪಾಯಕಾರಿ ಸರಕು ಸಾಗಣೆ ವಾಹನ ನಡೆಸಲು ನೀಡುವ ತರಬೇತಿ ಸಂಸ್ಥೆಯಲ್ಲಿ ಉತ್ತೀರ್ಣನಾದ ಬಗ್ಗೆ ಅರ್ಹತಾ ಪತ್ರ ಹೊಂದಿರಬೇಕು.

ಪ್ರಯಾಣಿಕರನ್ನು ಸಾಗಿಸುವ ವಾಹನ ನಡೆಸುವ ಚಾಲಕನು ಆ ಬಗೆಯ ವಾಹನ ನಡೆಸಲು ಪಿ.ಎಸ್.ವಿ. (public service vehicle) ಅಂದರೆ ಸಾರ್ವಜನಿಕ ಸೇವಾ ವಾಹನದ ಬ್ಯಾಡ್ಜ್ ಹೊಂದಿರಬೇಕು.

ಅಂಗವಿಕಲ ಅಥವಾ ಅಶಕ್ತ ವ್ಯಕ್ತಿಯು ಆ ಉದ್ದೇಶಕ್ಕಾಗಿ ವಿಶೇಷವಾಗಿ ತಯಾರಿಸಿದ, ವಿಶೇಷವಾದ ವಿಕಲ ಚೇತನರ ವಾಹನ (Invalid carriage) ವನ್ನು ನಡೆಸಲು ಲೈಸನ್ಸು ಪಡೆಯಬಹುದು.

ಒಬ್ಬ ಅಂಗವಿಕಲ ವ್ಯಕ್ತಿಯು ಅವನ ಬಳಕೆಗಾಗಿ ವಿದೇಶದಿಂದ ವಿಶೇಷವಾಗಿ ವಿನ್ಯಾಸಗೊಳಿಸಿ ತಯಾರಿಸಿದ ವಾಹನವನ್ನು, ಸೀಮಾ ಸುಂಕ ಮತ್ತು ಅಬಕಾರಿ ಸುಂಕ ವಿನಾಯಿತಿಯಿಂದ ತನ್ನ ಉಪಯೋಗಕ್ಕೆ ಪಡೆಯಬಹುದಾದ ಅನುಕೂಲವನ್ನು ಸರ್ಕಾರ ಒದಗಿಸಿದೆ. ಅಂತಹ ವಾಹನವನ್ನು ಅಪೇಕ್ಷಿಸುವ ಅರ್ಜಿದಾರನು ಆ ವಾಹನ ನಡೆಸುವ ಸಾಮರ್ಥ್ಯ ಪರೀಕ್ಷೆಯಲ್ಲಿ ಆರ್.ಟಿ.ಓ. ಅವರಿಗೆ ಮನವರಿಕೆಯಾಗುವಂತೆ ವಾಹನವನ್ನು ನಡೆಸಿ ಉತ್ತೀರ್ಣನಾದಾಗ, ಅವನಿಗೆ ವಿಕಲಚೇತನರ ವಾಹನ ಲೈಸನ್ಸು ನೀಡಲಾಗುವುದು.

ನಿಗದಿಗೊಂಡ ವಿಶೇಷ ಬಗೆಯ ವಿಕಲಚೇತನರ ವಾಹನದ ಮೇಲೆ ಚಾಲನಾ ಪರೀಕ್ಷೆ ತೆಗೆದುಕೊಂಡ ಮೇಲೆ, ಅದೇ ವಾಹನಕ್ಕೆ ಮಾತ್ರ ಆರ್.ಟಿ.ಓ. ಲೈಸನ್ಸು ಚಾಲ್ತಿಯಲ್ಲಿರುತ್ತದೆ.

ಕಿವುಡು ವ್ಯಕ್ತಿಯು ಮೋಟಾರು ವಾಹನ ಚಾಲನಾ ಲೈಸನ್ಸು ಹೊಂದಲು ಅರ್ಹನಾಗಿರುವುದಿಲ್ಲ. ಅಂತಹ ವ್ಯಕ್ತಿ ಕಿವುಡು ನಿವಾರಕ ಸಾಧನವನ್ನು ಅಳವಡಿಸಿಕೊಂಡು ಒಂದು ಗೊತ್ತಾದ ಪ್ರಮಾಣದಲ್ಲಿ ಕೇಳಲು ಅರ್ಹನಾಗಿದ್ದಾಗ ಮಾತ್ರ ಅಂತಹವನು ಲೈಸನ್ಸು ಹೊಂದಬಹುದು.

ಖಾಯಂ ಲೈಸನ್ಸುಗಳ ನವೀಕರಣ

ಖಾಯಂ ಚಾಲನಾ ಲೈಸನ್ಸನ್ನು ನವೀಕರಿಸಲು ಅರ್ಜಿದಾರನು ಈ ಕೆಳಗೆ ಸೂಚಿಸಿರುವ ದಾಖಲೆಗಳನ್ನು ಹಾಜರುಪಡಿಸಬೇಕು.

೧. ಅರ್ಜಿ ನಮೂನೆ ಸಂಖ್ಯೆ–೯

೨. ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ೩ ಛಾಯಾಚಿತ್ರಗಳು

೩. ಪುಸ್ತಕ ರೂಪದ ಲೈಸನ್ಸ್‌ನ ನವೀಕರಣ ಶುಲ್ಕ ರೂ. ೫೦–೦೦

೪. ನವೀಕರಿಸಬೇಕಾಗಿರುವ ಲೈಸನ್ಸು

೫. ಸ್ಮಾರ್ಟ್ ಕಾರ್ಡ್ ರೂ. ೨೦೦–೦೦

ಕಂಪ್ಯೂಟರ್ ಚಿಪ್‌ನ ವೆಚ್ಚವನ್ನು ಒಳಗೊಂಡಂತೆ ಶುಲ್ಕ ರೂ. ೨೦೦/–. ಅವಧಿಮುಗಿದ ನಂತರ ಒಂದು ವರ್ಷಕ್ಕೆ ಅಥವಾ ಅದರ ಉಳಿದ ಭಾಗಕ್ಕೆ ರೂ. ೫೦ ರಂತೆ ಹೆಚ್ಚು ಶುಲ್ಕವನ್ನು ಪಾವತಿಸತಕ್ಕದ್ದು.

(ಅ) ಯಾವುದೇ ಲೈಸನ್ಸು ಪ್ರಾಧಿಕಾರವು ತನಗೆ ನೀಡಿದ ಅರ್ಜಿಯ ಮೇರೆಗೆ ಆ ಲೈಸನ್ಸನ್ನು ಅದರ ಮುಕ್ತಾಯದ ದಿನಾಂಕದಿಂದ ಚಾಲ್ತಿಯಾಗುವಂತೆ, ದಂಡವಿಲ್ಲದೆ ನವೀಕರಿಸಬಹುದು.

(ಆ) ಲೈಸನ್ಸಿನ ಮುಕ್ತಾಯದ ದಿನಾಂಕದ ೩೦ ದಿನಗಳ ಅನಂತರ ಅದರ ನವೀಕರಣಕ್ಕಾಗಿ ಅರ್ಜಿ ಸಲ್ಲಿಸಿದರೆ, ಅದರ ನವೀಕರಣಕ್ಕೆ ಅರ್ಜಿ ಸಲ್ಲಿಸಿದ ದಿನಾಂಕದಿಂದ ಚಾಲ್ತಿಯಾಗುವಂತೆ ನವೀಕರಿಸಲಾಗುವುದು.

(ಇ) ಲೈಸನ್ಸು ಚಾಲ್ತಿಯಲ್ಲಿರುವುದು ಮುಗಿದು ಐದು ವರ್ಷವಾದ ನಂತರ ಅರ್ಜಿಯನ್ನು ಸಲ್ಲಿಸಿದರೆ; ವಾಹನ ನಡೆಸುವ ಸಾಮರ್ಥ್ಯ ಪರೀಕ್ಷೆಗೆ ಹಾಜರಾಗಿ, ಚಾಲನಾ ಪರೀಕ್ಷೆಯಲ್ಲಿ ಉತ್ತೀರ್ಣನಾದ ಹೊರತು ಲೈಸನ್ಸ್ ಪ್ರಾಧಿಕಾರಿಯು ಲೈಸನ್ಸನ್ನು ನವೀಕರಿಸಲು ನಿರಾಕರಿಸಬಹುದು.

(ಈ) ಲೈಸನ್ಸನ್ನು ನವೀಕರಿಸುವ ಹೊತ್ತಿನಲ್ಲಿ ಮೂಲದಲ್ಲಿ ಅದನ್ನು ನೀಡಿದ ಆರ್.ಟಿ.ಓ. ಅವರನ್ನೇ ಕರೆಯಬೇಕಾಗಿಲ್ಲ. ದೇಶದ ಯಾವುದೇ ರಾಜ್ಯದ ಸಂಬಂಧಪಟ್ಟ ಆರ್.ಟಿ.ಓ. ಆ ಕಾರ್ಯವನ್ನು ನಿರ್ವಹಿಸಬಹುದು. ಚಾಲಕನು ತನ್ನ ವಾಸಸ್ಥಾನವನ್ನು ಬದಲಾಯಿಸಿದ್ದರೆ ಆ ಹೊಸ ವಿಳಾಸವನ್ನು ಲೈಸನ್ಸ್‌ನಲ್ಲಿ ದಾಖಲಿಸಲು ಅರ್ಜಿ ನೀಡಬೇಕು.

ಲೈಸನ್ಸ್‌ನ ನಕಲು (ಡ್ಯೂಪ್ಲಿಕೇಟ್)

ಒಂದು ವೇಳೆ ಚಾಲನಾ ಲೈಸನ್ಸು ಕಳೆದು ಹೋದರೆ ಅಥವಾ ವಿರೂಪಗೊಂಡರೆ ಒಂದು ನಕಲು (ಡೂಪ್ಲಿಕೇಟ್) ಪ್ರತಿಯನ್ನು ಪಡೆಯಲು ಅರ್ಜಿದಾರನು ಅರ್ಜಿಯ ಜೊತೆ ಆ ಲೈಸನ್ಸಿನ ವಿವರವನ್ನು ಮೂಲ ಚಾಲನಾ ಲೈಸನ್ಸು ನೀಡಿದ ಆರ್.ಟಿ.ಓ. ಅವರಿಗೆ ನೀಡಬೇಕು.

೧. ಚಾಲನಾ ಲೈಸನ್ಸ್‌ನ ಸಂಖ್ಯೆ

೨. ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ೩ ಛಾಯಾಚಿತ್ರಗಳು

೩. ಶುಲ್ಕ ರೂ. ೧೫-೦೦ (ಪುಸ್ತಕ ರೂಪ)

೪. ಸ್ಮಾರ್ಟ್ ಕಾರ್ಡ್ ರೂ. ೨೦೦-೦೦

(ಕೇಂ. ಮೋ.ವಾ. ನಿಯಮ ೧೯೮೯, ನಿಯಮ ೨೬)

ಅಂತಾರಾಷ್ಟ್ರೀಯ ಲೈಸನ್ಸು (ಐ.ಡಿ.ಪಿ.)

ಇದನ್ನು ಅಂತಾರಾಷ್ಟ್ರೀಯ ಚಾಲನ ಪರವಾನಗಿ (International Driving permit) ಎಂದು ಕರೆಯುತ್ತಾರೆ. ಇದರ ಚಾಲ್ತಿಯ ಅವಧಿ ಒಂದು ವರ್ಷ ಅಥವಾ

ಭಾರತೀಯ ಮೂಲ ಲೈಸನ್ಸ್‌ನ ವಾಯಿದೆಯವರೆಗೆ, ಈ ಲೈಸನ್ಸನ್ನು ಪಡೆಯಲು ಅರ್ಜಿ ಜೊತೆ ನೀಡಬೇಕಾದ ದಾಖಲೆಗಳು ಈ ಕೆಳಕಂಡಂತಿವೆ.

೧. ಲೈಸನ್ಸ್ ನಮ್ಮ ದೇಶದ್ದಾಗಿದ್ದು, ಅದು ಒಂದು ವರ್ಷದಷ್ಟಾದರೂ ಮುಂದಕ್ಕೆ ಚಾಲ್ತಿಯಲ್ಲಿರುವಂತಿರಬೇಕು.

೨. ಚಾಲ್ತಿಯಲ್ಲಿರುವ ಪಾಸ್‌ಪೋರ್ಟು, ವೀಸಾ, ನಮೂನೆ ೪ಎ

೩. ಇತ್ತೀಚಿನ ಪಾಸ್‌ಪೋರ್ಟು ಅಳತೆಯ ೩ ಛಾಯಾಚಿತ್ರಗಳು

೪. ಭಾರತೀಯ ಸಂಜಾತ ಎಂಬುದಕ್ಕೆ ಅಧಿಕೃತ ದಾಖಲೆ

೫. ಶುಲ್ಕ ರೂ. ೫೦೦/-

ಭಾರತ ದೇಶದಲ್ಲಿ ಅಂತರರಾಷ್ಟ್ರೀಯ ಲೈಸನ್ಸನ್ನು ಎನ್.ಆರ್.ಐ. ಮತ್ತು ಪಾಶ್ಚಾತ್ಯರಿಗೆ ನೀಡುವುದಿಲ್ಲ.

(ಕೇಂ. ಮೋ.ವಾ. ನಿಯಮ ೧೯೮೯, ನಿಯಮ ೧೪(೨))

ಚಾಲನಾ ಲೈಸನ್ಸನ್ನು ಅನರ್ಹಗೊಳಿಸುವ / ತಾತ್ಕಾಲಿಕವಾಗಿ ರದ್ದು ಮಾಡುವ ಅಧಿಕಾರ

ಚಾಲನಾ ಲೈಸನ್ಸು ಹೊಂದಿರುವವನು ಈ ಕೆಳಗೆ ಸೂಚಿಸಿರುವ ಕ್ರಿಯೆಯಲ್ಲಿ ತೊಡಗುವುದು ಸಾರ್ವಜನಿಕರಿಗೆ ಉಪದ್ರವಕಾರಿ ಮತ್ತು ಅಪಾಯಕಾರಿ ಆಗಿರುವುದರಿಂದ ಅವನ ಲೈಸನ್ಸನ್ನು ಆರ್.ಟಿ.ಓ., ಕೋರ್ಟ್ ಅಥವಾ ವಿಧಿವತ್ತಾದ ಪ್ರಾಧಿಕಾರವು ಅನರ್ಹಗೊಳಿಸಬಹುದು ಅಥವಾ ತಾತ್ಕಾಲಿಕವಾಗಿ ರದ್ದು ಮಾಡಬಹುದು.

೧. ಬಿಡಿಸಿಕೊಳ್ಳಲಾಗದ ಕುಡಿತದ ಚಟಉಳ್ಳವ, ಮಾದಕ ದ್ರವ್ಯ ಸೇವಕ ಅಥವಾ ಇನ್ನಿತರ ಬಗೆಯ ಅಪರಾಧಿಯಾಗಿದ್ದರೆ.

೨. ಅಪರಾಧವನ್ನು ಮಾಡುವುದಕ್ಕಾಗಿ ಮೋಟಾರುವಾಹನವನ್ನು ಉಪಯೋಗಿಸಿದ್ದರೆ.

೩. ದುಡುಕಿನಿಂದ ಬೇಜವಾಬ್ದಾರಿತನದಿಂದ ವಾಹನವನ್ನು ಚಲಾಯಿಸಿದ್ದರೆ.

೪. ಅಪಘಾತವಾದುದನ್ನು ಪೊಲೀಸಿನವರಿಗೆ ವರದಿ ಮಾಡದಿರುವುದಾಗಲಿ ಅಥವಾ ಅಪಘಾತದಿಂದ ಗಾಯಾಳುಗಳಾದವರಿಗೆ ವೈದ್ಯಕೀಯ ಶುಶ್ರೂಷೆ ನೀಡದಿರುವುದಾಗಲಿ ಅಥವಾ ಪೊಲೀಸ್ ಅಧಿಕಾರಿಯು ಆದೇಶಿಸಿದಾಗ, ವಾಹನವನ್ನು ನಿಲ್ಲಿಸದಿರುವುದಾಗಲಿ ಅಪರಾಧವೆಂದು ನಿರ್ಣಯಿತವಾಗಿದ್ದರೆ.

೫. ರೋಗ ಅಥವಾ ಅಶಕ್ತತೆಯ ಆಧಾರದ ಮೇಲೆ.

೬. ಸಾರ್ವಜನಿಕರಿಗೆ ಉಪದ್ರವಕಾರಿಯೂ ಅಥವಾ ಅಪಾಯಕಾರಿಯೂ ಆಗಬಹುದಾದ ಯಾವುದೇ ಕ್ರಿಯೆಯಲ್ಲಿ ತೊಡಗಿದಾಗ, (ಉದಾ: ನಿರ್ದಿಷ್ಟಗೊಳಿಸಿದ ವೇಗವನ್ನು ಮೀರಿ ಅತಿ ವೇಗದಲ್ಲಿ ವಾಹನವನ್ನು ನಡೆಸುವುದು, ಮಿತಿ ಮೀರಿದ ಭಾರದ ಸರಕು ಸಾಗಿಸುವುದು, ಸರಕು ಸಾಗಣೆ ವಾಹನದಲ್ಲಿ ಪ್ರಯಾಣಿಕರನ್ನು ಸಾಗಿಸುವುದು, ಪ್ರಯಾಣಿಕರ ಮೇಲೆ ದೌರ್ಜನ್ಯ ನಡೆಸುವುದು, ವಾಹನದಲ್ಲಿ ತೆಗೆದುಕೊಂಡು ಹೋದ ಸರಕನ್ನು ಕಳವು ಮಾಡುವುದು, ಸಾರ್ವಜನಿಕ ಸ್ಥಳದಲ್ಲಿ ವಾಹನವನ್ನು ಸ್ವೇಚ್ಛೆಯಾಗಿ ಬಿಟ್ಟು ಹೋಗುವುದು ಅಥವಾ ಮುಷ್ಕರದಲ್ಲಿ ಭಾಗವಹಿಸುವುದು ಮುಂತಾದವುಗಳು.)

(ಮೋ.ವಾ.ಕಾಯ್ದೆ ೧೯೮೮. ಕಲಮು ೧೯, ೨೦)

ಲೈಸನ್ಸನ್ನು ಅನರ್ಹಗೊಳಿಸುವ ಅಥವಾ ತಾತ್ಕಾಲಿಕವಾಗಿ ರದ್ದು ಮಾಡುವ ಆದೇಶದಿಂದ ಬಾಧಿತನಾದ ವ್ಯಕ್ತಿಯು ಅಂಥ ಆದೇಶದ ಸುದ್ದಿಯು ತಲುಪಿದ ಮೂವತ್ತು ದಿನಗಳೊಳಗಾಗಿ, ನಿಯಮಿಸಲಾದ ಪ್ರಾಧಿಕಾರಿಯ ಆದೇಶದ ವಿರುದ್ಧ ಅಪೀಲು ಮಾಡಬಹುದು.

ವಾಹನ ನಡೆಸುವ ಸಾಮರ್ಥ್ಯ ಪರೀಕ್ಷೆ

ಅಭ್ಯರ್ಥಿಯು ಕಲಿಕೆ ಲೈಸನ್ಸನ್ನು ಪಡೆದು ೩೦ ದಿನಗಳು ಪೂರ್ತಿಯಾದ ನಂತರ ಖಾಯಂ ಲೈಸನ್ಸು ಪಡೆಯಲು ಪರೀಕ್ಷೆಗೆ ಹಾಜರಾಗುವಾಗ ತಾನು ಡ್ರೈವಿಂಗ್ ಕಲಿತ ವರ್ಗದ ಮೋಟಾರು ವಾಹನವನ್ನು ಪರೀಕ್ಷೆಗೆ ತರಬೇಕು. ವಾಹನದ ನೋಂದಣಿ ಪುಸ್ತಕ, ವಾಹನ ತೆರಿಗೆ ಕಾರ್ಡು, ವಿಮಾ ಪತ್ರ ಇಷ್ಟನ್ನೂ ಜೊತೆಗೆ ತರಬೇಕು. ಆ ವಾಹನವು ಸಾರಿಗೆ ವಾಹನವಾಗಿದ್ದರೆ ಮೇಲೆ ಕಾಣಿಸಿದ ಎಲ್ಲ ದಾಖಲೆಗಳೊಂದಿಗೆ ವಾಹನದ ಅರ್ಹತಾಪತ್ರ (ಜನ ಬಳಕೆಯಲ್ಲಿ ಎಫ್.ಸಿ. ಎಂದು ಕರೆಯುವ ಸರ್ಟಿಫಿಕೇಟ್ ಆಫ್ ಪಿಟ್‌ನೆಸ್) ಮತ್ತು ಪರವಾನಗಿ (ಪರ್ಮಿಟ್)ಯನ್ನು ಹಾಜರುಪಡಿಸಬೇಕು.

ಅಭ್ಯರ್ಥಿಯು ತಾನು ವಾಹನ ಚಾಲನಾ ಪರಿಣತಿಯಲ್ಲಿ ಸಮರ್ಥನೆಂದು ಆರ್.ಟಿ.ಓ. ಅವರಿಗೆ ಮನವರಿಕೆಯಾಗುವಂತೆ, ಈ ಕೆಳಗೆ ಸೂಚಿಸಿರುವ ರೀತಿಯಲ್ಲಿ ವಾಹನವನ್ನು ನಡೆಸಬೇಕು.

ಅಭ್ಯರ್ಥಿಯು ಮೋಟಾರು ವಾಹನದ ಚಾಲಕನ ಸ್ಥಾನದಲ್ಲಿ ಕುಳಿತ ನಂತರ ಹಿನ್ನೋಟದ ಕನ್ನಡಿಯನ್ನು ಸರಿ ಹೊಂದಿಸಿಕೊಂಡು, ಫುಟ್ ಬ್ರೇಕ್ ಒತ್ತಿ ಹಿಡಿದು ಹ್ಯಾಂಡ್ ಬ್ರೇಕ್ ಬಿಟ್ಟು, ಕ್ಲಚ್ ಅದುಮಿ ಗೇರನ್ನು ನ್ಯೂಟ್ರಲ್ ಮಾಡಿ ಎಂಜಿನ್ ಚಾಲನೆ ಮಾಡುವ ಎಚ್ಚರ ವಹಿಸಬೇಕು.

ಸುರಕ್ಷಿತವಾಗಿ ಮತ್ತು ಸಲೀಸಾಗಿ ನೇರ ಚಾಲನೆ ಮತ್ತು ತಿರುವುಗಳಲ್ಲಿ ವಾಹನ ಚಾಲನೆ ಮಾಡುತ್ತ, ಅದೇ ವೇಳೆಗೆ ಎಲ್ಲ ಗೇರ್‌ಗಳನ್ನು ಹಾಕಿ ಮೇಲಿನ ಗೇರ್ (ಟಾಪ್ ಗೇರ್) ತಲುಪಿ, ಸಂಚಾರ ಸ್ಥಿತಿಗಳಿಂದಾಗಿ ಬದಲಾವಣೆ ಅಗತ್ಯವಾದರೆ ಮೇಲಿನ ಗೇರ್‌ನಿಂದ ಕೆಳಗಿನ ಗೇರ್ (ಲೋಯರ್ ಗೇರ್)ಗೆ ಕೂಡಲೆ ಬದಲಾಯಿಸುವ ಪರಿಣತಿ ಹೊಂದಿರಬೇಕು.

ಇಳುಕಲಿನಲ್ಲಿ ವಾಹನವನ್ನು ನಡೆಸುವಾಗ ಕೆಳಗಿನ ಗೇರ್‌ಗೆ ಕೂಡಲೆ ಬದಲಾಯಿಸುವುದು ಮತ್ತು ಕಡಿದಾದ ಏರುರಸ್ತೆಯಲ್ಲಿ ವಾಹನವನ್ನು ನಿಲ್ಲಿಸಿ ಮತ್ತೆ ಚಾಲನೆಗೊಳಿಸುವಾಗ ಅದು ಹಿಂದಕ್ಕೆ ಬಾರದಂತೆ, ಕ್ಲಚ್ ಬಿಡುತ್ತ ಇದ್ದ ಹಾಗೆ ಆಕ್ಸಿಲರೇಟರ್ ಒತ್ತುತ್ತ ಅದೇ ಕ್ಷಣದಲ್ಲಿ ಫುಟ್ ಬ್ರೇಕ್‌ನಿಂದ ಕಾಲ್ತೆಗೆಯುವ ಚತುರವಾಹನ ಚಾಲನೆ ಮಾಡಬೇಕು.

ಬಲ ಮತ್ತು ಎಡ ತಿರುವುಗಳಲ್ಲಿ, ತಿರುವು ಸಾಕಷ್ಟು ದೂರವಿರುವಾಗಲೇ ಹಿನ್ನೋಟದ ಕನ್ನಡಿಯಿಂದ ಹಿಂದೆ ಬರುವ ವಾಹನವನ್ನು ಗಮನಿಸಿ ಆದಷ್ಟು ಮೊದಲೇ ಸ್ಪಷ್ಟವಾಗಿ ಕೈನಿಂದಾಗಲಿ, ವಿದ್ಯುತ್ ದಿಕ್ಸೂಚಕದಿಂದಾಗಲಿ ಸಂಕೇತ ನೀಡಿ ವೇಗವನ್ನು ಮಿತಿಗೊಳಿಸಿಕೊಂಡು ಎಚ್ಚರಿಕೆಯಿಂದ ತಿರುಗಬೇಕು.

ಮುಂದಿನ ವಾಹನವನ್ನು ಮೀರಿ ಮುಂದೆ ಹೋಗಬೇಕಾದ (ಓವರ್ ಟೇಕಿಂಗ್) ಸಂದರ್ಭದಲ್ಲಿ ಹಾರನ್ ಮಾಡುವ ಮೂಲಕ ಮುಂದಿನ ವಾಹನ ಚಾಲಕನಿಗೆ ಸೂಚನೆ ನೀಡಬೇಕು. ಆ ಸೂಚನೆಯನ್ನನುಸರಿಸಿ ಅವನು ತನ್ನ ಬಲ ಭಾಗದಲ್ಲಿ ಹಾದು ಹೋಗಲು ಅವಕಾಶ ಕೊಟ್ಟು, ಜೊತೆಯಲ್ಲೇ ತನ್ನನ್ನು ಮೀರಿ ಹೋಗಬಹುದೆಂಬ ಸೂಚನೆಯನ್ನು ನೀಡಬೇಕು. ಆತ ಹಾಗೆ ಸೂಚನೆ ನೀಡಿದ ನಂತರ ಚತುರ ಚಾಲನೆಯಿಂದ ಎದುರು ವಾಹನವನ್ನು ಹೆಡ್‌ಲೈಟ್‌ನಿಂದ ಅಡ್ಡಗಟ್ಟಿ, ಎಚ್ಚರಿಕೆಯಿಂದ ಮೀರಿ ಮುಂದೆ ಹೋಗಬೇಕು. ತನ್ನನ್ನು ಮೀರಿ ಹೋಗಲು ತನ್ನ ಹಿಂದಿನ ಚಾಲಕ ಅವಕಾಶ ಕೇಳಿದಾಗ ತನ್ನನ್ನು ಮೀರಿ ಮುಂದೆ ಹೋಗಲು ಅವನಿಗೆ ಯಾವುದೇ ಅಡಚಣೆಯಿಲ್ಲವೆಂದು ತಿಳಿದಾಗ – ಅವನು ಹೋಗಲು ಅವಕಾಶ ನೀಡಿ – ತಾನು ತನ್ನ ವೇಗವನ್ನು ಕಡಿಮೆ ಮಾಡಿಕೊಂಡು ಇನ್ನೂ ಸ್ವಲ್ಪ ಎಡಕ್ಕೆ ತನ್ನ ವಾಹನವನ್ನು ನಡೆಸಬೇಕು.

ವಾಹನ ಪರೀಕ್ಷೆಯು – ಹಿಂದಕ್ಕೂ ಚಲಿಸುವ ಗೇರ್ ಹೊಂದಿರುವ ವಾಹನವಾಗಿರುವ ಸಂದರ್ಭದಲ್ಲಿ – ಆ ವಾಹನವನ್ನು ಹಿಂದಕ್ಕೆ ನಡೆಸುವುದು. ಹಾಗೆ ನಡೆಸುವಾಗ ಎಡಕ್ಕೆ ಅಥವಾ ಬಲಕ್ಕಿರುವ ಮಿತಿಯಾದ ಅವಕಾಶದಲ್ಲಿ ವಾಹನದ ಹಿಡಿತ ಸಾಧಿಸಿ ವಾಹನವನ್ನು ಸರಿಯಾಗಿ ಹಿಂದಕ್ಕೆ ನಿಲ್ಲಿಸಬೇಕು.

ಸಂಚಾರ ಸಂಕೇತಗಳಿಂದ, ಸಂಚಾರ ನಿಯಂತ್ರಕ ಪೋಲೀಸರಿಂದ ಅಥವಾ ಸಂಚಾರ ನಿಯಂತ್ರಕರಿಂದ ಕೊಡಲಾಗುವ ಎಲ್ಲ ಸಂಕೇತಗಳನ್ನು ಸರಿಯಾಗಿ ಮತ್ತು ತ್ವರೆಯಾಗಿ ಅನುಸರಿಸಬೇಕು. ರಸ್ತೆಯನ್ನು ಬಳಸುವ ಇತರರು ಸೂಚಿಸುವ ಸಂಕೇತಗಳಿಗೆ ಸೂಕ್ತ ಗಮನವನ್ನು ಕೊಡಬೇಕು. ರಸ್ತೆಯಲ್ಲಿ ಪ್ರದರ್ಶಿಸಿರುವ ರಸ್ತೆ ಚಿಹ್ನೆಗಳನ್ನು ಗಮನಿಸಿ ಅವುಗಳ ಆದೇಶದಂತೆ ವಾಹನ ಚಾಲನೆ ಮಾಡಬೇಕು.

ಕ್ಲಚ್, ಗೇರ್, ಆಕ್ಸಿಲರೇಟರ್, ಬ್ರೇಕು (ಹ್ಯಾಂಡ್ ಬ್ರೇಕು ಮತ್ತು ಫುಟ್ ಬ್ರೇಕು) ಸ್ಟೀರಿಂಗ್ ಮತ್ತು ಹಾರನ್ನುಗಳನ್ನು ಸರಿಯಾದ ರೀತಿಯಲ್ಲಿ ಬಳಸಬೇಕು. ವಾಹನವನ್ನು ನಡೆಸುವಾಗ ಅಭ್ಯರ್ಥಿಯು ರಸ್ತೆಯ ಇತರ ಆಕರ್ಷಣೆಗೆ ಮನಸ್ಸು ಕೊಡದಂತೆ ಏಕಾಗ್ರತೆ ಸಾಧಿಸಿ ಶಾಂತ ಮತ್ತು ಚಿತ್ತ ಸ್ಥೈರ್ಯದಿಂದಿರಬೇಕು. ರಸ್ತೆ ಉಪಯೋಗಿಸುವ ಪಾದಚಾರಿಗಳು ಬೇರೆ ವಾಹನಗಳ ಚಾಲಕರು, ಸೈಕಲ್ ಸವಾರರು ಮುಂತಾದವರ ಸುರಕ್ಷತೆಯ ಕಡೆ ಗಮನಹರಿಸಿ, ವಿನಯ ಸೌಜನ್ಯಗಳನ್ನು ಪ್ರದರ್ಶಿಸಬೇಕು.

೬. ಮೋಟಾರು ವಾಹನಗಳ ನೋಂದಣಿ

ಮೋಟಾರು ವಾಹನದ ಪ್ರತಿಯೊಬ್ಬ ಮಾಲೀಕನೂ ಅವನು ವಾಸಿಸುವ ಸ್ಥಳ ಅಥವಾ ವ್ಯಾಪಾರ ವಹಿವಾಟಿಗಾಗಿ ವಾಹನವನ್ನು ಇಟ್ಟುಕೊಂಡಿರುವ ಸ್ಥಳದ ಅಧಿಕಾರ ವ್ಯಾಪ್ತಿಯ ಆರ್.ಟಿ.ಓ. ಕಛೇರಿಯಲ್ಲಿ ನೋಂದಣಿ ಮಾಡಿಸಬೇಕು.

ನೋಂದಣಿಯನ್ನು ಮಾಡುವ ಕ್ರಮ

ಹೊಸ ಮೋಟಾರು ವಾಹನವು ಮಾರಾಟವಾಗಿ ವಿತರಣೆಯಾದ ೭ ದಿನಗಳ ಒಳಗಾಗಿ ನೋಂದಣಿಗಾಗಿ ಅರ್ಜಿ ನಮೂನೆ ಸಂಖ್ಯೆ ೨೦ ಸಲ್ಲಿಸಬೇಕು. ನೋಂದಣಿ ಅರ್ಜಿಯ ಜೊತೆಗೆ ಈ ಕೆಳಗೆ ಸೂಚಿಸಿರುವ ದಾಖಲೆಗಳನ್ನು ಒದಗಿಸಬೇಕು.

೧. ಮಾರಾಟ ಪತ್ರ – ನಮೂನೆ ಸಂಖ್ಯೆ ೨೧

೨. ಚಾಲ್ತಿಯಲ್ಲಿರುವ ವಿಮೆ

೩. ವಿಳಾಸದ ದಾಖಲೆ

೪. ವಾಹನ ಆಮದಾಗಿದ್ದರೆ ಸುಂಕದಕಟ್ಟೆ ಅಧಿಕಾರಿಗಳಿಂದ ಪಡೆದ ತೀರಿಕೆ ಪತ್ರ

೫. ವಾಹನ ತಯಾರಕರು ನೀಡಿರುವ ರಸ್ತೆ ಯೋಗ್ಯ ಅರ್ಹತಾ ಪತ್ರ ನಮೂನೆ ಸಂಖ್ಯೆ ೨೨ರಲ್ಲಿ

೬. ತಾತ್ಕಾಲಿಕ ನೋಂದಣಿ ಪತ್ರ ಅಥವಾ ವಾಹನವು ಟ್ರೇಡ್ ಪ್ರಮಾಣ ಪತ್ರಗಳಿಂದ ಆವೃತ್ತವಾಗಿದ್ದರೆ, ನಮೂನೆ ಸಂಖ್ಯೆ ೧೯ರ ಪ್ರತಿ (ವಾಹನವನ್ನು ತಾತ್ಕಾಲಿಕ ನೋಂದಣಿ ಮಾಡಿದ್ದಲ್ಲಿ, ತಾತ್ಕಾಲಿಕ ನೋಂದಣಿ ಅವಧಿ ಮುಗಿಯುವುದರೊಳಗಾಗಿ ನೋಂದಣಿ ಮಾಡಿಸಬೇಕು.)

೭. ಟ್ರೈಲರ್ ಅಥವಾ ಸೆಮಿಟ್ರೈಲರ್ ಆಗಿದ್ದ ಪಕ್ಷದಲ್ಲಿ ಅದರ ವಿನ್ಯಾಸವನ್ನು ರಾಜ್ಯ ಸಾರಿಗೆ ಪ್ರಾಧಿಕಾರ ಅನುಮೋದಿಸಿರುವ ಬಗೆಗಿನ ನಡಾವಳಿಯ ಪ್ರತಿ.

೮. ಆಯಾ ರಾಜ್ಯ ಸರ್ಕಾರ ಸೂಚಿಸಬಹುದಾದ ಇತರ ದಾಖಲೆಗಳು (ಪ್ರವೇಶ ಶುಲ್ಕ, ಆಕ್ಟ್ರಾಯಿ ಮುಂತಾದವುಗಳು)

೯. ಕರ್ನಾಟಕ ಮೋಟಾರು ವಾಹನ ತೆರಿಗೆ ಕಾಯ್ದೆ ೧೯೫೭ರ ಅನುಬಂಧ ಭಾಗ 'ಎ' ಯಲ್ಲಿ ನಮೂದಿಸಿದಂತೆ ಇರುವ ತೆರಿಗೆಯನ್ನು ಪಾವತಿ ಮಾಡಿದ ರಸೀತಿ.

೧೦. ವಾಹನವು ಆಧಾರದ ಒಪ್ಪಂದಕ್ಕೆ ಅಂದರೆ ಎಚ್.ಪಿ.ಎ. (Hire Purchase agreement) ಲಾವಣಿ ಪತ್ರ ಅಂದರೆ ಲೀಸ್ ಒಪ್ಪಂದ, ಕಂತು

ಖರೀದಿಗಳನ್ನು ಹೊಂದಿದ್ದರೆ, ಸಂಬಂಧಪಟ್ಟ ಹಣಕಾಸು ಒದಗಿಸಿದ ಸಂಸ್ಥೆ / ಹಣಕಾಸು ಒದಗಿಸಿದವನಿಂದ ನಮೂನೆ ಸಂಖ್ಯೆ ೩೪ರಲ್ಲಿ ಸಹಿ ಪಡೆದು, ಆ ಒಪ್ಪಂದವನ್ನು ನಮೂದು ಮಾಡಲು ರೂ. ೧೦೦/- ಹೆಚ್ಚುವರಿ ಶುಲ್ಕ ಪಾವತಿ ಮಾಡಿದ ರಸೀತಿ

೧೧. **ನೋಂದಣಿ ಶುಲ್ಕ :** ವಿವಿಧ ವರ್ಗದ ಮೋಟಾರು ವಾಹನದ ನೋಂದಣಿಗೆ ಅವಶ್ಯವಿರುವ ಶುಲ್ಕಗಳು ಈ ಕೆಳಗೆ ಸೂಚಿಸಿರುವಂತೆ ಇವೆ.

(ಎ)	ವಿಕಲಚೇತನರ ವಾಹನ (Invalid Carriage)	ರೂ. ೨೦
(ಬಿ)	ಮೋಟಾರ್ ಸೈಕಲ್ಲು	ರೂ. ೬೦
(ಸಿ)	ಲಘು ಮೋಟಾರು ವಾಹನ (ಕಾರು)	ರೂ. ೨೦೦
(ಡಿ)	ಲಘು ಮೋಟಾರು ವಾಹನ ಸರಕು / ಪ್ರಯಾಣಿಕರ ಸಾರಿಗೆ ವಾಹನ	ರೂ. ೩೦೦
(ಇ)	ಮಧ್ಯಮ ಸರಕು, ಪ್ರಯಾಣಿಕರ ಸಾಗಣೆ ವಾಹನ	ರೂ. ೪೦೦
(ಎಫ್)	ಭಾರಿ ಸರಕು, ಪ್ರಯಾಣಿಕರ ಸಾಗಣೆ ವಾಹನ	ರೂ. ೬೦೦
(ಜಿ)	ಆಮದು ಮಾಡಲ್ಪಟ್ಟ ವಾಹನಗಳು	ರೂ. ೮೦೦
(ಎಚ್)	ಆಮದು ಮಾಡಲ್ಪಟ್ಟ ಮೋಟಾರು ಸೈಕಲ್ಲುಗಳು	ರೂ. ೨೦೦

(ಕೇಂ.ಮೋ.ವಾ. ನಿಯಮಗಳು ೧೯೮೯, ನಿಯಮ ೪೭ ಮತ್ತು ನಿಯಮ ೮೧)

ಸಾರಿಗೆ ವಾಹನಗಳು

(ಅ) ತಾತ್ಕಾಲಿಕ ನೋಂದಣಿ

೧. ವಾಹನ ತಯಾರಕನು ಅಡಿಗಟ್ಟು (ಚಾಸಿ) ಮಾತ್ರ ನೀಡಿದ್ದ ಪಕ್ಷದಲ್ಲಿ, ವಾಹನದ ಬಾಡಿ ಕಟ್ಟಲು ಒಂದು ತಿಂಗಳ ಅವಧಿಯ ತಾತ್ಕಾಲಿಕ ನೋಂದಣಿ ನೀಡಲಾಗುತ್ತದೆ.

೨. ಆ ಕೆಲಸದ ಪೂರ್ಣತೆಗಾಗಿ ವಾಹನವು ವರ್ಕ್‌ಷಾಪ್‌ನಲ್ಲಿಯೇ ಉಳಿಯಬೇಕಾದರೆ, ಅದಕ್ಕೆ ತಕ್ಕಂತೆ ತಾತ್ಕಾಲಿಕ ನೋಂದಣಿಯನ್ನು ಮುಂದಿನ ಅವಶ್ಯಕ ಅವಧಿಗೆ ವಿಸ್ತರಿಸಲಾಗುತ್ತದೆ.

೩. ಬಾಡಿ ಕಟ್ಟಿದ ನಂತರ, ವಾಹನವನ್ನು ಪರೀಕ್ಷೆಗಾಗಿ ಆರ್.ಟಿ.ಓ. ಅವರ ಮುಂದೆ ಮೇಲೆ ಸೂಚಿಸಿರುವ ದಾಖಲೆಗಳ ಸಮೇತ ಹಾಜರುಪಡಿಸಬೇಕು. (ಮೋ.ವಾ.ಕಾ. ೧೯೮೮ ಕಲಮು ೪೩)

(ಆ) ಅರ್ಹತಾ ಪತ್ರ

ಪ್ರತಿಯೊಂದು ಸಾರಿಗೆ ವಾಹನವನ್ನು ಮೋಟಾರು ವಾಹನಗಳ ನಿರೀಕ್ಷಕರು ಪರೀಕ್ಷಿಸಿ ಅವು ಸಂಚಾರ ಯೋಗ್ಯವಾಗಿರುವುದಕ್ಕೆ ಅರ್ಹತಾ ಪತ್ರವನ್ನು (ಸರ್ಟಿಫಿಕೇಟ್ ಆಫ್ ಪಿಟ್‌ನೆಸ್: ಇದನ್ನು ಜನ ಎಫ್.ಸಿ. ಅನ್ನುವರು) ನೀಡುತ್ತಾರೆ. ಹೀಗೆ ನೀಡಿದ ಅರ್ಹತಾ ಪತ್ರವು ಚಾಲ್ತಿಯಲ್ಲಿಲ್ಲದಿದ್ದರೆ (ಅಂದರೆ ಚಾಲ್ತಿ ಅವಧಿ ಮುಗಿದಿದ್ದರೆ) ಅಂತಹ ವಾಹನವನ್ನು ರಸ್ತೆಯ ಮೇಲೆ ನಡೆಸಬಾರದು. **ಆಕಸ್ಮಾತ್ತಾಗಿ ಅರ್ಹತಾ ಪತ್ರವಿಲ್ಲದೆ ವಾಹನವನ್ನು ನಡೆಸುತ್ತ ವಾಹನ ಅಪಘಾತವಾದರೆ ವಿಮಾ ಕಂಪನಿಯವರು ಯಾವ ಕ್ಲೇಮನ್ನೂ ನೀಡುವುದಿಲ್ಲ.**

೧. ಸಾರಿಗೆ ವಾಹನದ ನೋಂದಣಿ ಪತ್ರ ಮಾನ್ಯವಾಗಿರುವುದು ಅದರ ಅರ್ಹತಾ ಪತ್ರ ಮಾನ್ಯವಾಗಿರುವವರೆಗೆ ಮಾತ್ರ.

೨. ಹೊಸ ವಾಹನಗಳಿಗೆ ನೀಡಿದ ಅರ್ಹತಾ ಪತ್ರವು ಎರಡು ವರ್ಷದ ಅವಧಿಯವರೆಗೆ ಚಾಲ್ತಿಯಲ್ಲಿರುತ್ತದೆ. ಅನಂತರ ಒಂದು ವರ್ಷದ ಅವಧಿಯವರೆಗೆ ಚಾಲ್ತಿಯಲ್ಲಿರುವಂತೆ ನವೀಕರಿಸಲಾಗುತ್ತದೆ.

೩. ಸಾರಿಗೆ ವಾಹನವು ಪರಿಶೀಲನಾ ಅವಧಿಯಲ್ಲಿ ಯಾಂತ್ರಿಕವಾಗಿ ದೋಷ ಪೂರಿತವೆಂದು, ರಸ್ತೆ ಯೋಗ್ಯವಲ್ಲವೆಂದು, ಸಾರ್ವಜನಿಕ ಸುರಕ್ಷತೆಯ ದೃಷ್ಟಿಯಿಂದ ಅಪಾಯಕಾರಿಯೆಂದು ಕಂಡುಬಂದಾಗ ಮೋಟಾರು ವಾಹನಗಳ ನಿರೀಕ್ಷಕರು ಅದರ ಅರ್ಹತಾ ಪತ್ರವನ್ನು (ಅದು ಚಾಲ್ತಿಯಲ್ಲಿದ್ದರೂ) ಯಾವ ಸಮಯದಲ್ಲಾದರೂ ರದ್ದು ಮಾಡಬಹುದು.

(ಮೋ.ವಾ. ಕಾಯ್ದೆ ೧೯೮೮, ಕಲಮು ೫೬ ಮತ್ತು ಕೇಂ.ಮೋ.ವಾ. ನಿಯಮ ೧೯೮೯ ನಿಯಮ ೬೨)

ಸಾರಿಗೆ ವಾಹನಗಳ ಅರ್ಹತಾ ಪತ್ರ ನೀಡಿಕೆ / ನವೀಕರಣಕ್ಕೆ ಈ ಕೆಳಗೆ ಸೂಚಿಸಿರುವ ಶುಲ್ಕವನ್ನು ಪಾವತಿ ಮಾಡಬೇಕು.

೧. ದ್ವಿಚಕ್ರ ಅಥವಾ ತ್ರಿಚಕ್ರ ಸಾರಿಗೆ ವಾಹನ ಶುಲ್ಕ ರೂ. ೨೦೦/-

೨. ಲಘು ಸರಕು/ಪ್ರಯಾಣಿಕರ ಸಾರಿಗೆ ವಾಹನ ಶುಲ್ಕ ರೂ. ೩೦೦/-

೩. ಮಧ್ಯಮ ಸರಕು/ಪ್ರಯಾಣಿಕರ ಸಾರಿಗೆ ವಾಹನ ಶುಲ್ಕ ರೂ. ೪೦೦/-

೪. ಭಾರಿ ಸರಕು/ಪ್ರಯಾಣಿಕರ ಸಾರಿಗೆ ವಾಹನ ಶುಲ್ಕ ರೂ. ೫೦೦/-

ಎಲ್ಲಾ ಸಾರಿಗೆ ವಾಹನಗಳನ್ನು ನೋಂದಣಿ ಮಾಡಿದ ೭ ವರ್ಷಗಳ ನಂತರ ಪ್ರತಿವರ್ಷದ ಅರ್ಹತಾಪತ್ರದ ನವೀಕರಣಕ್ಕೆ, ಮೇಲಿನ ಶುಲ್ಕಗಳ ಜೊತೆಗೆ ಹಸಿರು ತೆರಿಗೆ ರೂ. ೨೦೦/- ಪಾವತಿಸಿತಕ್ಕದ್ದು.

ತಡವಾದ ಪ್ರತಿತಿಂಗಳ ಅವಧಿಗೆ ದಂಡ - ರೂ. ೨೦/-, ಮೂರು ತಿಂಗಳ ನಂತರ ದಂಡ- ರೂ. ೧೦೦/-.

ಮೋ.ಸೆಕೈಲ್ ಹಸಿರು ತೆರಿಗೆ - ರೂ. ೨೫೦/-

ಕಾರ್ ಹಸಿರು ತೆರಿಗೆ - ರೂ. ೫೦೦/-.

[ಕರ್ನಾಟಕ ಮೋ.ವಾ. ತೆರಿಗೆ ಕಾಯ್ದೆ ೧೯೫೭ ಕಲಮು ೩ (ಬಿ)]

ಸಾರಿಗೇತರ ವಾಹನಗಳ ಅರ್ಹತಾ ಪತ್ರ

ಸಾರಿಗೇತರ ವಾಹನಗಳಿಗೆ ಅವುಗಳ ಹೊಸದರಲ್ಲಿ ನೀಡಿದ ನೋದಣಿ ಪತ್ರವು ಆ ದಿನಾಂಕದಿಂದ ಹದಿನೈದು ವರ್ಷಗಳ ಅವಧಿಯವರೆಗೆ ಚಾಲ್ತಿಯಲ್ಲಿರುತ್ತದೆ. ಅನಂತರ ಆ ವಾಹನವು ಸಂಚಾರ ಯೋಗ್ಯವಾಗಿದೆಯೆ ಎಂದು ನೋಂದಣಿ ಪ್ರಾಧಿಕಾರವು (ಆರ್.ಟಿ.ಓ) ಪರೀಕ್ಷಿಸಿ, ನೋಂದಣಿ ಪತ್ರವನ್ನು ಮುಂದಿನ ಐದು ವರ್ಷದ ಅವಧಿಗೆ ನವೀಕರಿಸಲಾಗುತ್ತದೆ. ನೋಂದಣಿ ಸಮಯದಲ್ಲಿ ಎಲ್ಲ ವರ್ಗದ ವಾಹನಗಳನ್ನು ಪರೀಕ್ಷೆಗಾಗಿ ಆರ್.ಟಿ.ಓ. ಅವರ ಮುಂದೆ ಹಾಜರುಪಡಿಸಬೇಕು. (ಕೇಂ. ಮೋ.ವಾ.ಕಾ. ೧೯೮೮ ಕಲಮು ೪೧) ನಮೂನೆ-೨೫.

ಮಾಲೀಕತ್ವದ ವರ್ಗಾವಣೆ

ಸಾರಿಗೇತರ ವಾಹನಗಳ (ದ್ವಿಚಕ್ರ ವಾಹನಗಳು, ಕಾರು) ಮಾಲೀಕತ್ವ ವರ್ಗಾವಣೆಗೆ ವಾಹನವನ್ನು ಪರೀಕ್ಷೆಗೆ ಹಾಜರುಪಡಿಸಬೇಕಾಗಿಲ್ಲ.

ಸಾರಿಗೆ ವಾಹನಗಳ ಮಾಲೀಕತ್ವ ವರ್ಗಾವಣೆ ಒಂದೇ ರಾಜ್ಯದಲ್ಲಿಯೇ ಆಗಿದ್ದರೆ, ಆ ವಾಹನವನ್ನು ಪರೀಕ್ಷೆಗೆ ಹಾಜರುಪಡಿಸಬೇಕಾಗಿಲ್ಲ. ಆದರೆ ಒಂದು ರಾಜ್ಯದ ಒಬ್ಬ ವ್ಯಕ್ತಿಯಿಂದ ಇನ್ನೊಂದು ರಾಜ್ಯದ ಇನ್ನೊಬ್ಬ ವ್ಯಕ್ತಿಗೆ ವಾಹನ ಮಾರಾಟವಾಗಿದ್ದರೆ, ಆಗ ಆ ವಾಹನವನ್ನು ಪರೀಕ್ಷೆಗೆ ಹಾಜರುಪಡಿಸಬೇಕು. ಹಾಗೂ ಈ ಕೆಳಗೆ ಸೂಚಿಸಿರುವ ನಿಯಮಗಳಂತೆ ನಡೆದುಕೊಳ್ಳಬೇಕು.

೧. ವಾಹನ ಮಾಲೀಕತ್ವ ಬದಲಾದಾಗ, ಮೂಲ ಮಾಲೀಕ (ವರ್ಗಾವಣೆದಾರ)ನು ಆ ಸಂಗತಿಯನ್ನು ಆ ವಾಹನ ನೋಂದಣಿಯಾಗಿರುವ ಆರ್.ಟಿ.ಓ. ಅವರಿಗೆ ೧೪ ದಿನಗಳ ಒಳಗಾಗಿ ತಿಳಿಸಬೇಕು.

೨. ವಾಹನವನ್ನು ಕೊಂಡ ಹೊಸಮಾಲೀಕನು (ವರ್ಗಾವಣೆ ಪಡೆದವನು) ವಾಸಿಸುವ ಆಥವಾ ವ್ಯಾಪಾರ ವಹಿವಾಟು ನಡೆಸುವ ಸ್ಥಳವು ಬೇರೆ ಆರ್.ಟಿ.ಓ. ಅವರ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿದ್ದರೆ, ಆ ಆರ್.ಟಿ.ಓ. ಅವರಿಗೆ ಈ ಸಂಗತಿಯನ್ನು ಮೂಲ ಮಾಲೀಕನು ತಿಳಿಸಬೇಕು

೩. ಒಂದು ವೇಳೆ ವರ್ಗಾವಣೆಯ ವ್ಯಾಪ್ತಿಯ ಆರ್.ಟಿ.ಓ. ಬೇರೆ ರಾಜ್ಯದಲ್ಲಿದ್ದು ಆ ರಾಜ್ಯಕ್ಕೆ ಮಾಲೀಕತ್ವ ವರ್ಗಾವಣೆಯಾಗಬೇಕಾದರೆ, ಆಗ ವರ್ಗಾವಣೆದಾರನು ಆ ವಾಹನವನ್ನು ವರ್ಗಾಯಿಸಲು ಯಾವ ಆಕ್ಷೇಪಣೆಯೂ ಇಲ್ಲವೆಂಬ ಪ್ರಮಾಣಪತ್ರ (ಆಕ್ಷೇಪಣಾ ರಹಿತ ಪ್ರಮಾಣ ಪತ್ರ : No Objection Certificate) ವನ್ನು ತನ್ನ ವಾಹನ ಈಗಾಗಲೇ ನೋಂದಿತವಾಗಿರುವ ಆರ್.ಟಿ.ಓ. ಅವರಿಂದ ಪಡೆಯಬೇಕು. ಆ ಆಕ್ಷೇಪಣಾ ರಹಿತ ಪತ್ರವನ್ನು ವಾಹನಕೊಂಡವನು ವಾಸಿಸುವ ಸ್ಥಳದ ಅಧಿಕಾರ ವ್ಯಾಪ್ತಿ ಹೊಂದಿದ ಆರ್.ಟಿ.ಓ. ಅವರಿಗೆ ಕಳುಹಿಸಬೇಕು.

ಆಕ್ಷೇಪಣಾ ರಹಿತ ಪ್ರಮಾಣಪತ್ರವನ್ನು ಪಡೆಯಲು ಅರ್ಜಿಯ ಜೊತೆಗೆ ಈ ಕೆಳಗೆ ಸೂಚಿಸಿರುವ ದಾಖಲೆಗಳನ್ನು ನೀಡಬೇಕು.

(ಎ) ನೋಂದಣಿ ಪ್ರಮಾಣಪತ್ರದ ಪ್ರಮಾಣೀಕೃತ ಪ್ರತಿ

(ಬಿ) ವಿಮಾ ಪ್ರಮಾಣಪತ್ರದ ಪ್ರಮಾಣೀಕೃತ ಪ್ರತಿ

(ಸಿ) ಆ ದಿನದವರೆಗೂ ತೆರಿಗೆಯನ್ನೆಲ್ಲಾ ಪಾವತಿ ಮಾಡಿರುವುದಕ್ಕೆ ಪುರಾವೆ

೪. ವಾಹನ ಕೊಂಡವನು (ವರ್ಗಾವಣೆ ಪಡೆದವನು) ಅವನ ಹೆಸರಿಗೆ ಮಾಲೀಕತ್ವ ಬದಲಾವಣೆಯನ್ನು ದಾಖಲು ಮಾಡಿಸಿಕೊಳ್ಳಲು, ನೋಂದಣಿ ಪ್ರಮಾಣಪತ್ರವನ್ನು ತನ್ನ ಪ್ರದೇಶದ ಆರ್.ಟಿ.ಓ. ಅವರಿಗೆ ೩೦ ದಿನಗಳ ಒಳಗೆ ನೀಡಬೇಕು.

೫. ಆ ನೋಂದಣಿ ಪ್ರಮಾಣ ಪತ್ರದ ಜೊತೆಗೆ ಚಾಲ್ತಿಯಲ್ಲಿರುವ ವಿಮೆ, ತೆರಿಗೆ ಪಾವತಿ ಮಾಡಿರುವುದಕ್ಕೆ ಪುರಾವೆ, ವಿಳಾಸದ ರುಜುವಾತು ನೀಡಬೇಕು ಮತ್ತು ಅವಶ್ಯಕವಾಗಿದ್ದರೆ ಆಕ್ಷೇಪಣಾರಹಿತ ಪತ್ರವನ್ನು ನೀಡಬೇಕು. ಜೊತೆಗೆ ನೋಂದಣಿ ಶುಲ್ಕದ ಎರಡರಷ್ಟು ಶುಲ್ಕವನ್ನು ಪಾವತಿ ಮಾಡಬೇಕು.

ಆಕ್ಷೇಪಣಾ ರಹಿತ ಪತ್ರವನ್ನು ನೀಡುವ ಮೊದಲು ಆರ್.ಟಿ.ಓ. ಅವರು, ಆ ವಾಹನ ಕಳ್ಳತನವಾಗಿಲ್ಲದಿರುವ ಬಗ್ಗೆ, ಅದು ಯಾವುದೇ ಸಂಚಾರ ಅಪರಾಧ, ಪಾತಕ

ಅಥವಾ ಅಪಘಾತ ಮುಂತಾದುವಲ್ಲಿ ಸಿಕ್ಕಿಹಾಕಿಕೊಂಡಿಲ್ಲದಿರುವ ಬಗ್ಗೆ ಕೇಸ್ ಬಾಕಿ ಇಲ್ಲದಿರುವುದನ್ನು ಖಾತ್ರಿ ಮಾಡಿಕೊಳ್ಳುತ್ತಾರೆ. (ಮೋ.ವಾ.ಕಾಯ್ದೆ ೧೯೮೮ ಕಲಮು ೫೦ ಮತ್ತು ಕೇಂ. ಮೋ.ವಾ. ನಿಯಮ ೧೯೮೯, ನಿಯಮ ೫೫).

ವಿಶೇಷ ಗಮನಿಕೆ

೧. ನೋಂದಾಯಿಸುವಾಗ ಮತ್ತು ವರ್ಗಾವಣೆ ಮಾಡುವಾಗ ಆರ್.ಟಿ.ಓ. ಅವರ ಮುಂದೆ ಸಂಬಂಧಪಟ್ಟ ವಾಹನವನ್ನು ಹಾಜರುಪಡಿಸಬೇಕು.

೨. ಯಾವುದೇ ಸಾರಿಗೆ ವಾಹನಕ್ಕೂ ಅದರ ಅರ್ಹತಾ ಪತ್ರವು ಚಾಲ್ತಿಯಲ್ಲಿರದಿದ್ದರೆ ವರ್ಗಾವಣೆ ಫಲಿಸುವುದಿಲ್ಲ.

೩. ವರ್ಗಾವಣೆದಾರನು ತನ್ನ ವಿಮಾಪಾಲಿಸಿಯನ್ನು ಇಟ್ಟುಕೊಳ್ಳಲು ಇಚ್ಛಿಸದಿದ್ದಲ್ಲಿ, ಅತನ ವಿಮಾ ಪಾಲಿಸಿಯು ಹೊಸ ಮಾಲೀಕನ (ವರ್ಗಾವಣೆ ಪಡೆದವನ) ಹೆಸರಿಗೆ ವರ್ಗಾವಣೆಯಾಗಿದೆ ಎಂದು ಪರಿಗಣಿಸಲಾಗುತ್ತದೆ. ಆದರೂ ಸಹ ಹೊಸ ಮಾಲೀಕನು ವಿಮಾ ಸಂಸ್ಥೆಗೆ ೧೪ ದಿನಗಳ ಒಳಗೆ ವರ್ಗಾವಣೆಯ ವಿಷಯ ತಿಳಿಸಿ ತನ್ನ ಹೆಸರಿಗೆ ವಿಮಾ ಪಾಲಿಸಿಯನ್ನು ವರ್ಗಾಯಿಸಿಕೊಳ್ಳಬೇಕು.

೪. **ವರ್ಗಾವಣೆದಾರನ ಹಿತದೃಷ್ಟಿಯಿಂದ ವಾಹನ ವರ್ಗಾವಣೆ ವಿಷಯವನ್ನು ಸಂಬಂಧಪಟ್ಟ ಆರ್.ಟಿ.ಓ. ಅವರಿಗೆ ಸಾಧ್ಯವಾದಷ್ಟು ಬೇಗ ಸಾಕ್ಷ್ಯವನ್ನಿಟ್ಟುಕೊಳ್ಳುವ ರೀತಿ ತಿಳಿಸಬೇಕು. (ತಲುಪೊಪ್ಪಿಗೆ ಸಮೇತ ನೋಂದಾಯಿತ ಅಂಚೆ ರಸೀದಿ ಅಥವಾ ವೈಯಕ್ತಿಕವಾಗಿ ನೀಡಿದ್ದಕ್ಕೆ ತಲುಪೊಪ್ಪಿಗೆ ರಸೀದಿ ಪಡೆಯಬೇಕು) ಹಾಗೆ ವಿಷಯವನ್ನು ತಿಳಿಸದೆ ಇದ್ದು ಒಂದು ವೇಳೆ ವಾಹನವು ಅಪಘಾತಕ್ಕೆ ಒಳಗಾದರೆ, ಸಂಚಾರ ನಿಯಮ ಉಲ್ಲಂಘಿಸಿದರೆ ಅಥವಾ ಯಾವುದೇ ಅಪರಾಧದಲ್ಲಿ ಸಿಕ್ಕಿಕೊಂಡರೆ, ಸಂಬಂಧಪಟ್ಟ ಅಧಿಕಾರಿಗಳು ಮೂಲ ಮಾಲೀಕನನ್ನೇ ಹೊಣೆಗಾರನನ್ನಾಗಿ ಮಾಡುತ್ತಾರೆ.**

ಕಳೆದುಹೋದ ಅಥವಾ ನಾಶವಾದ ನೋಂದಣಿಪತ್ರ

ಒಂದು ವೇಳೆ ನೋಂದಣಿ ಪ್ರಮಾಣಪತ್ರ ಕಳೆದುಹೋದರೆ ಅಥವಾ ನಾಶವಾದರೆ, ಆ ಮಾಲೀಕನು ನಿಜ ಸ್ಥಿತಿಯನ್ನು, ಅದು ಕಳೆದುಹೋದ ಅಥವಾ ನಾಶವಾದ ಸ್ಥಳದ ಅಧಿಕಾರಿ ವ್ಯಾಪ್ತಿಯ ಪೊಲೀಸ್ ಸ್ಟೇಷನ್‌ಗೆ ವರದಿ ಮಾಡಬೇಕು. ಅವನು ವಾಹನ ನೋಂದಾಯಿಸಿರುವ ಆರ್.ಟಿ.ಓ. ಅವರಿಗೂ ತಿಳಿಸಬೇಕು. ಕಳೆದುಹೋದದ್ದನ್ನು ತಿಳಿಸಿದ ನಂತರ ನಕಲು ನೋಂದಣಿ ಪತ್ರವನ್ನು, ನೋಂದಣಿ ಶುಲ್ಕದ ಎರಡರಷ್ಟು ಶುಲ್ಕ ಪಾವತಿಯೊಂದಿಗೆ ನೋಂದಣಿ ಮಾಡಿದ ಆರ್.ಟಿ.ಓ. (ನೋಂದಣಿ ಪ್ರಾಧಿಕಾರ) ಅವರಿಗೆ

ಅರ್ಜಿ ನಮೂನೆ ಸಂಖ್ಯೆ ೨೬ ಸಲ್ಲಿಸಿ ಪಡೆಯಬಹುದು. (ಕೇಂ.ಮೋ.ವಾ. ನಿಯಮ ೧೯೮೯ ನಿಯಮ ೫೩).

ವಾಸದ ಅಥವಾ ವ್ಯಾಪಾರ ವಹಿವಾಟಿನ ಸ್ಥಳದ ಬದಲಾವಣೆ

೧. ಒಂದು ವೇಳೆ ವಾಹನದ ಮಾಲೀಕನು ತನ್ನ ವಾಸಸ್ಥಾನವನ್ನು ಅಥವಾ ವ್ಯಾಪಾರ ವಹಿವಾಟು ನಡೆಸುವ ಸ್ಥಳವನ್ನು ಬದಲಾಯಿಸಿದ್ದರೆ, ಆ ಹೊಸ ವಿಳಾಸವನ್ನು, ವಿಳಾಸ ಬದಲಾವಣೆಯಾದ ೩೦ ದಿನಗಳೊಳಗಾಗಿ ಹೊಸ ವಿಳಾಸದ ವ್ಯಾಪ್ತಿಗೆ ಬರುವ ಆರ್.ಟಿ.ಓ. ಅವರಿಗೆ ತಿಳಿಸಬೇಕು. ಜೊತೆಗೆ ವಿಳಾಸ ಬದಲಾವಣೆ ಶುಲ್ಕ ರೂ. ೨೦-೦೦ ಪಾವತಿ ಮಾಡಬೇಕು.

೨. ಒಂದು ವೇಳೆ ಹೊಸ ವಿಳಾಸವು ಒಂದೇ ರಾಜ್ಯದಲ್ಲಿ ವಿಭಿನ್ನ ಆರ್.ಟಿ.ಓ. ಅವರ ವ್ಯಾಪ್ತಿಗೆ ಬಂದರೆ ಆಗ ಮೂಲ ಮತ್ತು ಹೊಸ ವಿಳಾಸದ ವ್ಯಾಪ್ತಿಯ ಇಬ್ಬರೂ ಆರ್.ಟಿ.ಓ. ಅವರಿಗೆ ತಿಳಿಸಬೇಕು.

೩. ಒಂದು ವೇಳೆ ಬೇರೆ ರಾಜ್ಯದಲ್ಲಿ ಉಳಿಯುವ ಅವಧಿ ಒಂದು ವರ್ಷಕ್ಕಿಂತ ಕಡಿಮೆಯಿದ್ದು; ಆದರೆ ಮೂರು ತಿಂಗಳಿಗಿಂತ ಹೆಚ್ಚಿನದಾಗಿದ್ದರೆ, ಯಾವ ಆರ್.ಟಿ.ಓ. ಅವರ ಅಧಿಕಾರ ವ್ಯಾಪ್ತಿಯಲ್ಲಿ ವಾಹನವನ್ನು ಬಳಸಲಾಗುತ್ತಿದೆಯೋ ಅವರಿಗೆ ವಾಹನವನ್ನು ಅಲ್ಲಿ ಬಳಸುತ್ತಿರುವ ಬಗ್ಗೆ ಒಂದು ತಿಂಗಳ ಅವಧಿಯ ಒಳಗೆ ತಿಳಿಸಬೇಕು.

೪. ಒಂದು ವೇಳೆ ವಿಳಾಸ ಬದಲಾವಣೆಯಾಗಿ ಬೇರೆ ರಾಜ್ಯದಲ್ಲಿ ವಾಹನವನ್ನು ಒಂದು ವರ್ಷಕ್ಕಿಂತ ಹೆಚ್ಚು ಅವಧಿಯವರೆಗೆ ಅಲ್ಲಿಯೇ ಇಟ್ಟುಕೊಳ್ಳುವುದಾದರೆ, ಆಗ ಆ ವಾಹನಕ್ಕೆ ಆ ರಾಜ್ಯದ ನೋಂದಣಿ ಸಂಖ್ಯೆಯನ್ನು ಪಡೆಯಬೇಕು.
(ಮೋ.ವಾ.ಕಾಯ್ದೆ ೧೯೮೮, ಕಲಮು ೪೯ ಮತ್ತು ಕೇಂ.ಮೋ.ವಾ. ನಿಯಮ ೧೯೮೯ ನಿಯಮ ೫೪).

ವಿಶೇಷ ಗಮನಿಕೆ

ಒಂದು ವೇಳೆ ವಾಹನವು ಕಂತು ಖರೀದಿ / ಬಾಡಿಗೆ / ಆಧಾರದ ಒಪ್ಪಂದಕ್ಕೆ (Hire purchase agreement) ಒಳಪಟ್ಟಿದ್ದರೆ, ಸಂಬಂಧಿಸಿದ ಹಣಕಾಸು ಒದಗಿಸಿದ ಸಂಸ್ಥೆ / ಹಣಕಾಸು ಒದಗಿಸಿದವನಿಂದ ಆಕ್ಷೇಪಣಾರಹಿತ ಪತ್ರವನ್ನು ವಿಳಾಸ ಬದಲಾವಣೆಗೆ, ರಸ್ತೆ ಪರವಾನಗಿ ನವೀಕರಣಕ್ಕೆ ಅಥವಾ ನಕಲು ನೋಂದಣಿ ಪತ್ರ ಪಡೆಯಲು ಅವಶ್ಯವಾಗಿ ನೀಡಲೇಬೇಕು.

ನೋಂದಣಿ ಸಂಖ್ಯೆ

ನೋಂದಣಿ ಗುರುತನ್ನು ನೋಂದಣಿ ಸಂಖ್ಯೆಯೆಂದು ಕರೆಯುವರು. ನೋಂದಣಿ ಗುರುತನ್ನು ಇಂಗ್ಲಿಷ್ ಅಕ್ಷರಗಳಲ್ಲಿ ಮತ್ತು ಅರಾಬಿಕ್ ಸಂಖ್ಯೆಯಲ್ಲಿಯೇ ಬರೆಸಬೇಕು. ಅದನ್ನು ನಿರ್ದಿಷ್ಟವಾಗಿ ಈ ಕೆಳಗೆ ಸೂಚಿಸಿರುವ ರೀತಿಯಲ್ಲಿ ಬರೆಸಬೇಕು. ಆ ಗುರುತನ್ನು ಎರಡು ಸಾಲುಗಳಲ್ಲಿ ಪ್ರದರ್ಶಿಸಬೇಕು. ರಾಜ್ಯದ ಸಂಕೇತ ಮತ್ತು ಆರ್.ಟಿ.ಓ. ಸಂಕೇತವನ್ನು ಮೊದಲ ಸಾಲಿನಲ್ಲಿಯೂ ಹಾಗೂ ಉಳಿದುದನ್ನು ಎರಡನೇ ಸಾಲಿನಲ್ಲಿಯೂ ನಮೂದಿಸಬೇಕು.

ಸಾರಿಗೇತರ ವಾಹನಗಳ ನೋಂದಣಿ ಗುರುತು

ಮೋಟಾರ್ ಸೈಕಲ್ಲು, ವಿಕಲ ಚೇತನರ ವಾಹನ ಮತ್ತು ಲಘು ಮೋಟಾರು ವಾಹನ (ಕಾರು)ಗಳು ಸಾರಿಗೆ ರಹಿತವಾಹನಗಳಾಗಿದ್ದು, ಅವುಗಳ ನೋಂದಣಿ ಗುರುತನ್ನು ಕಪ್ಪು ಬಣ್ಣದಲ್ಲಿ ಬಿಳಿಯ ಹಿನ್ನೆಲೆಯ ಮೇಲೆ ಬರೆಸಬೇಕು. ನೋಂದಣಿ ಗುರುತಿನ ಫಲಕವನ್ನು ವಾಹನದ ಮುಂಭಾಗದಲ್ಲಿ ಹಾಗೂ ಹಿಂಭಾಗದಲ್ಲಿ ಪ್ರದರ್ಶಿಸಬೇಕು.

ಸಾರಿಗೆ ವಾಹನಗಳ ನೋಂದಣಿ ಗುರುತು

ಸಾರಿಗೆ ವಾಹನದ ನೋಂದಣಿ ಗುರುತನ್ನು ಕಪ್ಪು ಬಣ್ಣದಲ್ಲಿ, ಹಳದಿ ಹಿನ್ನೆಲೆಯ ಮೇಲೆ ಬರೆಸಬೇಕು. ನೋಂದಣಿ ಗುರುತನ್ನು ವಾಹನದ ಮುಂಭಾಗ ಹಾಗೂ ಹಿಂಭಾಗದಲ್ಲಿ ಪ್ರದರ್ಶಿಸುವುದರ ಜೊತೆಗೆ ವಾಹನದ ಬಲಭಾಗ ಮತ್ತು ಎಡಭಾಗದಲ್ಲಿಯೂ ಪ್ರದರ್ಶಿಸಬೇಕು. ಪ್ರಯಾಣಿಕರನ್ನು ಕೊಂಡೊಯ್ಯುವ ಬಸ್‌ಗಳಲ್ಲಿ ನೋಂದಣಿ ಗುರುತನ್ನು ಚಾಲಕನಿಗೂ ಪ್ರಯಾಣಿಕರಿಗೂ ಮಧ್ಯೆ ಇರುವ ವಿಭಾಗ ತಡಿಕೆಯ ಮೇಲೆ ಪ್ರಯಾಣಿಕರಿಗೆ ಕಾಣಿಸುವಂತೆಯೂ, ಆ ತಡಿಕೆಯಿಲ್ಲದೆ ಕಡೆ ವಾಹನದ ಒಳ ಮುಂಭಾಗದ ಡ್ಯಾಷ್ ಬೋರ್ಡ್ ಮೇಲೆ ಎತ್ತರದಲ್ಲಿ, ಪ್ರಯಾಣಿಕರಿಗೆ ಕಾಣಿಸುವಂತೆ ನಮೂದಿಸಬೇಕು.

ಕ್ಯಾಬ್ ಬಾಡಿಗೆಗೆ ಪಡೆಯುವ (Rent a Cab) ನೋಂದಣಿ ಗುರುತು

ಒಂದು ಮೋಟಾರ್ ಕ್ಯಾಬನ್ನು ಬಾಡಿಗೆಗೆ ಪಡೆದು ತಾನೇ ಚಾಲಕನಾಗಿ ಸುತ್ತಾಡುವ ವ್ಯವಸ್ಥೆಯ ಮೋಟಾರು ವಾಹನವನ್ನು 'ರೆಂಟ್ ಎ ಕ್ಯಾಬ್' ಎಂದು ಕರೆಯುವರು. ಈ ಬಗೆಯ ವಾಹನದ ಸಂಖ್ಯೆಯನ್ನು ಹಳದಿ ಬಣ್ಣದಲ್ಲಿ, ಕಪ್ಪು ಹಿನ್ನೆಲೆಯ ಮೇಲೆ ಬರೆಸಬೇಕು.

ತಾತ್ಕಾಲಿಕ ನೋಂದಣಿ ಗುರುತು

ಈ ಸಂಖ್ಯೆಯನ್ನು ಕೆಂಪು ಬಣ್ಣದಲ್ಲಿ, ಹಳದಿ ಹಿನ್ನೆಲೆಯ ಮೇಲೆ ಬರೆಸಬೇಕು.

ಕನ್ನಡ ನೋಂದಣಿ ಫಲಕ

ಕರ್ನಾಟಕ ರಾಜ್ಯದಲ್ಲಿ ನೋಂದಾಯಿಸಲ್ಪಟ್ಟ ವಾಹನಗಳಿಗೆ, ಆ ವಾಹನ ಮಾಲೀಕರು ಇಷ್ಟಪಟ್ಟಲ್ಲಿ ಕನ್ನಡ ಭಾಷೆಯಲ್ಲಿ ಅಕ್ಷರ ಮತ್ತು ಸಂಖ್ಯೆಯನ್ನು ಹೊಂದಿದ ನೋಂದಣಿ ಗುರುತನ್ನು ಪ್ರದರ್ಶಿಸಬಹುದು ಎಂಬ ಅಧಿಸೂಚನೆಯನ್ನು ಕರ್ನಾಟಕ ಸರ್ಕಾರ ಹೊರಡಿಸಿದೆ. ಕನ್ನಡ ನೋಂದಣಿ ಫಲಕವನ್ನು ಈ ಕೆಳಸೂಚಿಸಿರುವ ರೀತಿಯಲ್ಲಿ ಪ್ರದರ್ಶಿಸಬಹುದು.

ಅ) ಮೋಟಾರ್ ಸೈಕಲ್	ಮುಂಭಾಗದ ಎಡಗಡೆ	ಆಂಗ್ಲಭಾಷೆಯಲ್ಲಿ
	ಮುಂಭಾಗದ ಬಲಗಡೆ	ಕನ್ನಡಭಾಷೆಯಲ್ಲಿ
	ಹಿಂಭಾಗ	ಆಂಗ್ಲಭಾಷೆಯಲ್ಲಿ
ಆ) ಮೋಟಾರ್ ಸೈಕಲ್ ಹೊರತುಪಡಿಸಿ ಮಿಕ್ಕ ಎಲ್ಲ ವಾಹನಗಳು	ಮುಂಭಾಗದ ಎಡಗಡೆ	ಆಂಗ್ಲಭಾಷೆಯಲ್ಲಿ
	ಮುಂಭಾಗದ ಬಲಗಡೆ	ಕನ್ನಡಭಾಷೆಯಲ್ಲಿ
	ಹಿಂಭಾಗದ ಕೇಂದ್ರ ಭಾಗದಲ್ಲಿ ಅಥವಾ ಎಡಗಡೆ	ಆಂಗ್ಲಭಾಷೆಯಲ್ಲಿ
	ಹಿಂಭಾಗದ ಬಲಗಡೆ	ಕನ್ನಡಭಾಷೆಯಲ್ಲಿ

(ಕರ್ನಾಟಕ ಸರ್ಕಾರದ ಅಧಿಸೂಚನೆ ಸಂ. ಎಚ್.ಟಿ.ಡಿ. ೫೯ ಟಿ.ಎಂ.ಎ. ೯೩, ತಾರೀಖು ೧೨.೯.೧೯೯೫)

ವಿಶೇಷ ಗಮನಿಕೆ

೧. ಅಲಂಕಾರಿಕವಾದ ಅಕ್ಷರಗಳು, ಉಬ್ಬಿದ ಅಥವಾ ಹೊಳೆಯುವ ಲೋಹದ ಸಂಖ್ಯೆಗಳನ್ನು ಬರೆಸಬಾರದು.

೨. ನೋಂದಣಿ ಸಂಖ್ಯೆಯನ್ನು ಹೊರತುಪಡಿಸಿ ಮಿಕ್ಕ ಏನನ್ನೂ ಸಂಖ್ಯಾಫಲಕದ ಮೇಲೆ ಬರೆಯಬಾರದು. ಆ ಫಲಕದ ಮೇಲೆ ಯಾವುದೇ ಗೆರೆ ಅಥವಾ ಬಣ್ಣ ಅಥವಾ ಯಾವುದೇ ಬಗೆಯ ಗುರುತುಗಳಿರಬಾರದು.

೩. ಸಂಖ್ಯಾ ಫಲಕವು ಶುದ್ಧವಾಗಿದ್ದು ಚೆನ್ನಾಗಿ ಕಾಣುವಂತಿರಬೇಕು. ಕೊಳೆ ಅಥವಾ ಧೂಳಿನಿಂದ ಅದು ಕಾಣದಂತೆ ಇರಬಾರದು.

೪. ರಾಷ್ಟ್ರಪತಿಗಳ, ಉಪರಾಷ್ಟ್ರಪತಿಗಳ ಮತ್ತು ರಾಜ್ಯಪಾಲರುಗಳ ವಾಹನಗಳಿಗೆ ಸಂಖ್ಯಾಫಲಕದ ಅಗತ್ಯವಿಲ್ಲ. ಅದು ಅವರ ಗೌರವಾರ್ಥವಾಗಿ ಇರುವ ಸೌಲಭ್ಯ.

೭. ಮೋಟಾರು ವಾಹನಗಳ ವಿಮೆ

ಪ್ರತಿಯೊಂದು ಮೋಟಾರು ವಾಹನಕ್ಕೂ ಕನಿಷ್ಠವೆಂದರೂ ಮೂರನೇ ಪುರುಷನಿಗೆ ಸಂಭವಿಸುವ ನಷ್ಟದ ಸಲುವಾಗಿ (Third party risk) ವಿಮೆಯನ್ನು ಮಾಡಿಸಲೇಬೇಕು. ಥರ್ಡ್ ಪಾರ್ಟಿ ರಿಸ್ಕ್ ಅಂದರೆ ವಿಮೆ ಮಾಡಿಸಿದ ವಾಹನ, ಆ ವಾಹನದ ಮಾಲೀಕ, ಆ ವಾಹನದ ಚಾಲಕರನ್ನು ಹೊರತುಪಡಿಸಿ, ಅಪಘಾತಕ್ಕೀಡಾಗಿ ಜಖಂ ಅದ ವಾಹನ, ಬಾಧೆಗೀಡಾದ ಚಾಲಕ, ಅದರಲ್ಲಿ ಪ್ರಯಾಣಿಸುವವರು ಅಥವಾ ಪಾದಚಾರಿ ಅಥವಾ ಇನ್ನಿತರರನ್ನು ಒಳಗೊಳ್ಳುವಂತೆ ಮಾಡಿಸಿದ ವಿಮೆಯಾಗಿರುತ್ತದೆ.

ಹೀಗೆ ಮೂರನೇ ಪುರುಷನಿಗೆ ಸಂಭವಿಸುವ ಅಪಾಯದ ವಿಮೆಯ ಜೊತೆಗೆ ಮೋಟಾರು ವಾಹನ ಕಳುವಿನ, ಬೆಂಕಿ, ಅಪಘಾತದಿಂದ ಸಂಭವಿಸುವ ಹಾನಿಗಳ ಸಲುವಾಗಿಯೂ ಹೆಚ್ಚು ಹಣ ಪಾವತಿ ಮಾಡಿ ವಿಮೆ ಮಾಡಿಸಬಹುದು. ಅಂತಹ ಸಂದರ್ಭದಲ್ಲಿ ವಾಹನ ಮಾಲೀಕನಿಗೆ ಕಳವು, ಬೆಂಕಿ, ಅಪಘಾತದಿಂದಾದ ನಷ್ಟಕ್ಕೆ ಪರಿಹಾರ ಸಿಗುತ್ತದೆ.

ವಾಹನ ಅಪಘಾತವಾದ ೨೪ ಗಂಟೆಯು ಒಳಗಾಗಿ ಆ ವಾಹನದ ಮಾಲೀಕನಾಗಲಿ/ಚಾಲಕನಾಗಲಿ ಹತ್ತಿರದ ಪೊಲೀಸ್ ಸ್ಟೇಷನ್‌ಗೆ ಮತ್ತು ಅವನ ವಿಮಾ ಕಂಪನಿಗೆ ವರದಿ ಮಾಡಬೇಕು.

ವ್ಯಾಪಕ ಸರ್ವಗ್ರಾಹಿ ವಿಮೆ (Comprehensive Insurance)

ಈ ಬಗೆಯ ವಿಮೆಯು ನಷ್ಟಕ್ಕೊಳಗಾದ ಮೂರನೇ ಪುರುಷನನ್ನೂ (Third party risk) ಒಳಗೊಂಡು, ಅಪಘಾತ, ಬೆಂಕಿ ಅಥವಾ ಕಳುವಿನಿಂದ ವಾಹನಕ್ಕಾಗುವ ನಷ್ಟ/ಜಖಂ ಅನ್ನುಒಳಗ್ಗೊಳ್ಳುತ್ತದೆ. ಅದು ಪ್ರವಾಹ, ಭೂಕಂಪ, ದೊಂಬಿ ಮತ್ತು ಮುಷ್ಕರಗಳಿಂದ ಸಂಭವಿಸುವ ಹಾನಿಯನ್ನೂ ಒಳಗೊಳ್ಳುತ್ತದೆ. ಮಾಲೀಕನು ಅಪೇಕ್ಷೆಪಟ್ಟರೆ ಹೆಚ್ಚುವರಿ ಜೋಡಣೆಗಳಾದ ಏರ್‌ಕಂಡೀಷನರ್ ರೇಡಿಯೋ, ಟೇಪ್ ರೆಕಾರ್ಡರ್ ಮುಂತಾದವುಗಳನ್ನು ಪ್ರತ್ಯೇಕವಾಗಿ ಪಟ್ಟಿ ಮಾಡಿ, ಹೆಚ್ಚು ಹಣ ಪಾವತಿ ಮಾಡಿ ಅವು ವಿಮೆಯಲ್ಲಿ ಒಳಗೊಳ್ಳುವಂತೆ ಮಾಡಬಹುದು.

ವಿಮಾ ಕಂತು ಹಣವನ್ನು ವಿಮಾ ಕಂಪನಿಯವರು ಪಡೆದ ತಕ್ಷಣದಿಂದ ವಿಮಾ ಪಾಲಿಸಿ ಜಾರಿಗೆ ಬರುತ್ತದೆ. ಅಂದಿನಿಂದ ಸರಿಯಾಗಿ ಒಂದು ವರ್ಷದ ಮಧ್ಯರಾತ್ರಿಗೆ ಅದು ಕೊನೆಗೊಳ್ಳುತ್ತದೆ. ಅದಕ್ಕೆ ಯಾವುದೇ ರೀತಿಯ ರಿಯಾಯಿತಿ ಅವಧಿ ಇಲ್ಲ.

ವಿಮೆಯ ನವೀಕರಣಕ್ಕೆ ಸಂಬಂಧಿಸಿದಂತೆ, ಪ್ರೀಮಿಯಂ ಹಣದ ಚೆಕ್ಕನ್ನು / ಡಿ.ಡಿ.ಯನ್ನು ಅಂಚೆಯಲ್ಲಿ ಕಳುಹಿಸಿದ ದಿನದಿಂದ ವಿಮೆ ನವೀಕರಣವಾಯಿತೆಂದು ಭಾವಿಸಲಾಗುತ್ತದೆ. ಆದ ಕಾರಣ ಕಳುಹಿಸಿದ್ದಕ್ಕೆ ಅಂಚೆ ಕಛೇರಿಯ ರಸೀದಿ ಪಡೆಯುವುದು ಸೂಕ್ತ.

ವ್ಯಾಪಕ ಸರ್ವಗ್ರಾಹಿ ವಿಮೆಯ ಕ್ಲೇಮು

ಅಪಘಾತದ ಬಗ್ಗೆ ಪೊಲೀಸ್ ಸ್ಟೇಷನ್ ಮತ್ತು ವಿಮಾ ಕಂಪನಿಗೆ ವರದಿ ಮಾಡಿದ ನಂತರ, ವಿಮಾ ಕಂಪನಿಯವರು ಒಬ್ಬ ಸಮೀಕ್ಷಕ (ಸರ್ವೇಯರ್)ನನ್ನು ನೇಮಿಸುತ್ತಾರೆ. ಆತ ಆ ವಾಹನದ ರಿಪೇರಿಗೆ ತಗಲುವ ವೆಚ್ಚ, ಬದಲಾಯಿಸಬೇಕಾದ ಬಿಡಿಭಾಗಗಳನ್ನು ಆಧರಿಸಿ ನಷ್ಟ ವ್ಯಾಪ್ತಿಯನ್ನು ಲೆಕ್ಕ ಹಾಕುತ್ತಾನೆ.

ವಾಹನವನ್ನು ಖರೀದಿ ಮಾಡಿದವನು, ಖರೀದಿ ಮಾಡಿದ ೧೪ ದಿನಗಳ ಒಳಗಾಗಿ ವಿಮೆಯನ್ನು ತನ್ನ ಹೆಸರಿಗೆ ವರ್ಗಾಯಿಸಿಕೊಡಲು ವಿಮಾ ಕಂಪನಿಗೆ ತಿಳಿಸಬೇಕು.

ವಿಮೆ ಪರಿಹಾರ

ವ್ಯಕ್ತಿಗೆ ರಸ್ತೆ ಅಪಘಾತದಲ್ಲಿ ಸಾವು, ಗಾಯ ಅಥವಾ ಅಂಗ ಊನವಾಗಿದ್ದಲ್ಲಿ; ವಾಹನ ಮಾಲೀಕ, ಚಾಲಕ ಮತ್ತು ವಿಮಾ ಕಂಪನಿಗಳನ್ನು ಪ್ರತಿವಾದಿಯರನ್ನಾಗಿ ಮಾಡಿ ದಾವೆ ಹೂಡಬೇಕಾಗುತ್ತದೆ. ಅದಕ್ಕಾಗಿ ವೈದ್ಯಕೀಯ ವರದಿಗಳ ಪ್ರತಿಗಳು, ವಾಹನ ಮಾಲೀಕನ ಹೆಸರು ಮತ್ತು ವಿಳಾಸ, ವಾಹನದ ವಿವರ, ವಿಮೆ ವಿವರಗಳನ್ನು ನಮೂದಿಸಿ ಸಂಬಂಧಿತ ಪೊಲೀಸ್ ಸ್ಟೇಷನ್‌ನಿಂದ ಅರ್ಜಿ ಸಲ್ಲಿಸಿ ಪಡೆಯಬಹುದು. ಅಪಘಾತ ಸಂಭವಿಸಿದ ೬ ತಿಂಗಳ ಒಳಗೆ ದಾವೆಯನ್ನು ಕೋರ್ಟ್‌ನಲ್ಲಿ ಹೂಡಬೇಕು. ತಡವಾದಲ್ಲಿ, ಸಮಂಜಸವಾದ ಕಾರಣಗಳಿದ್ದಲ್ಲಿ ಮುಂದಿನ ೬ ತಿಂಗಳೊಳಗೆ ದಾವೆಯನ್ನು ದಾಖಲು ಮಾಡಲು ನ್ಯಾಯಾಧೀಶರು ಅನುಮತಿ ನೀಡಬಹುದು. ಅಪಘಾತ ಸಂಭವಿಸಿದ ಒಂದು ವರ್ಷದ ಬಳಿಕ ದಾವೆ ಹೂಡಲು ಅವಕಾಶವಿಲ್ಲ.

ಅಪಘಾತ ನಡೆದು ಅಪರಾಧಿ ಯಾರೆಂದು ತಿಳಿಯದೆ, ತಪ್ಪಿಸಿಕೊಂಡಿರುವ ಸಂದರ್ಭದಲ್ಲಿ (ಹಿಟ್ ಅಂಡ್ ರನ್ ಕೇಸ್) ಕೇಂದ್ರ ಸರ್ಕಾರ ಸಾಂತ್ವನ ಪರಿಹಾರವಾಗಿ ಅಪಘಾತದಲ್ಲಿ ಸಾವನ್ನಪ್ಪಿದವರ ಕುಟುಂಬಕ್ಕೆ ರೂ. ೨೫,೦೦೦ವನ್ನು, ವಿಪರೀತ ಗಾಯವಾಗಿದ್ದಲ್ಲಿ ರೂ. ೧೨,೫೦೦ಗಳನ್ನು ನೀಡುತ್ತದೆ.

ಅಪಘಾತಕ್ಕೊಳಗಾದವನಿಗೆ ಪ್ರಥಮ ಚಿಕಿತ್ಸೆ ನೀಡುವುದು

ಸುಪ್ರಿಂಕೋರ್ಟಿನ ಒಂದು ತೀರ್ಪಿನ ಪ್ರಕಾರ ಅಪಘಾತ ಸ್ಥಳದ ಸಮೀಪದಲ್ಲಿರುವ ಯಾವುದೇ ಆಸ್ಪತ್ರೆ, ಕ್ಲಿನಿಕ್, ನರ್ಸಿಂಗ್ ಹೋಮ್ ಅಥವಾ ಡಾಕ್ಟರನು ಅಪಘಾತಕ್ಕೊಳಗಾದ ವ್ಯಕ್ತಿಗೆ ಪ್ರಥಮ ಚಿಕಿತ್ಸೆ ನೀಡಲೇಬೇಕು. ಹಾಗೆ ನೀಡಲು ಒಪ್ಪದಿರುವುದು ಶಿಕ್ಷಾರ್ಹ ಅಪರಾಧವಾಗುತ್ತದೆ.

ಪ್ರಥಮ ಚಿಕಿತ್ಸೆಯ ಬಳಿಕ ಅಪಘಾತಕ್ಕೊಳಗಾದ ವ್ಯಕ್ತಿಯನ್ನು ಸರಕಾರಿ ಆಸ್ಪತ್ರೆಗೆ ಸೇರಿಸಬೇಕು. ಕಾನೂನು ಅಥವಾ ಪೊಲೀಸರ ಭಯದಿಂದ ಅಪಘಾತಕ್ಕೊಳಗಾದ ವ್ಯಕ್ತಿಗೆ ಸಹಾಯ ಮಾಡದೆ ಇರುವುದು ಅಮಾನವೀಯ ಹಾಗೂ ಅನಾಗರಿಕ ಲಕ್ಷಣ.

೮. ರಸ್ತೆಯ ಪಟ್ಟೆ ಗುರುತುಗಳು (Road Marking)

ರಸ್ತೆಯಲ್ಲಿರುವ ಪಟ್ಟೆ ಗುರುತುಗಳು ವಾಹನ ಚಾಲಕರಿಗೆ ಮೌನ ಮಾರ್ಗದರ್ಶಿಗಳಾಗಿವೆ. ಪ್ರತಿ ಪಟ್ಟೆ ತನ್ನದೇ ಆದ ನಿರ್ದೇಶನವನ್ನು ಚಾಲಕನಿಗೆ ನೀಡಿ ಅವನ ಹಾಗೂ ಇತರ ವಾಹನ ಚಾಲಕರ ಸುರಕ್ಷತೆಯನ್ನು ಕಾಯುತ್ತದೆ. ವಾಹನ ಚಾಲನೆ ಮಾಡಬೇಕಾದ ಗಮನ ಪಥ (Channelised road)ವಾಗಿ, ಎಲ್ಲಿ ಮುಂದಿನ ವಾಹನವನ್ನು ಮೀರಿ ಹೋಗಬಹುದು, ಎಲ್ಲಿ ಮುಂದಿನ ವಾಹನವನ್ನು ಮೀರಿ ಹೋಗಬಾರದು, ಎಲ್ಲಿ ವಾಹನವನ್ನು ನಿಲ್ಲಿಸಬೇಕು, ಎಲ್ಲಿ ಜೀಬ್ರಾ ಪಟ್ಟೆಗಳಿದ್ದು ಪಾದಚಾರಿಗಳು ನಡೆಯುವರು ಎಂಬುದನ್ನೆಲ್ಲ ತಿಳಿಸುತ್ತದೆ.


ರಸ್ತೆಯ ಮೇಲಿರುವ ಅಡ್ಡಪಟ್ಟೆಗಳು



೧. ಈ ತುಂಡರಿಸಿದ ಸಮಾನಾಂತರ ಪಟ್ಟೆಗಳು ತನ್ನನ್ನು ಸಮೀಪಿಸುವ ವಾಹನ ಚಾಲಕರಿಗೆ, ಮುಖ್ಯ ರಸ್ತೆಯಿಂದ ಬರುವ ವಾಹನಗಳಿಗೆ ಆದ್ಯತೆ ನೀಡಬೇಕೆಂದು ಸೂಚಿಸುತ್ತವೆ.




೨. ಈ ಒಂದು ಅಥವಾ ಎರಡು ಸಮಾನಾಂತರ ಪಟ್ಟೆಗಳು – ನಿಲ್ಲಲ್ಲು ಸೂಚಿಸುವ ಪಟ್ಟೆಗಳು. ಸಂಚಾರವು ನಿಲ್ಲಬೇಕಾದಾಗ ಇಲ್ಲಿ ನಿಲ್ಲಲೇಬೇಕು. ಈ ಪಟ್ಟೆಯನ್ನು ದಾಟಬಾರದು.




೩. ನೇರವಾಗಿ ಅಥವಾ ಬಾಗಿದಂತಿರುವ ಈ ಪಟ್ಟೆಗಳು ಜೀಬ್ರಾಪಟ್ಟೆಗಳು. ಇದನ್ನು ಜೀಬ್ರಾಕ್ರಾಸಿಂಗ್ ಎಂದು ಕರೆಯುವರು. ಇದು ಪಾದಚಾರಿಗಳು ದಾಟಲು ನಿಗದಿಗೊಳಿಸಿದ ಸ್ಥಳ. ಈ ಗುರುತಿನ ಹಿಂದೆ ವಾಹನವನ್ನು ನಿಲ್ಲಿಸಬೇಕು. ಪಾದಚಾರಿಗಳು ಹೋಗಲು ಅವಕಾಶ ಮಾಡಿಕೊಡಬೇಕು.


ರಸ್ತೆಯ ಮೇಲಿರುವ ಉದ್ದ ಪಟ್ಟೆಗಳು

೧. ಈ ಬಿಳಿಪಟ್ಟೆಗಳು ಪಥಗಳ ಮಧ್ಯದ ರೇಖೆಗಳು







೨. ತುಂಡರಿಸಿದ ಈ ಬಿಳಿಪಟ್ಟೆಗಳು ದ್ವಿಮುಖ ರಸ್ತೆಯ ಮಧ್ಯದ ಪಟ್ಟೆಗಳು.



೩. ನಿರಂತರವಾಗಿರುವ ಈ ಬಿಳಿಪಟ್ಟೆ ದ್ವಿಮುಖ ರಸ್ತೆಯ ಮಧ್ಯದ ಪಟ್ಟೆ, ಇದು ಮುಂದಿನ ವಾಹನವನ್ನು ಮೀರಿ ಮುಂದೆ ಹೋಗಲು ಅನುಮತಿ ನೀಡಿದರೂ, ಪ್ರೋತ್ಸಾಹಿಸುವುದಿಲ್ಲ.





೪. ನಿರಂತವಾಗಿ ಸಮಾನಾಂತರವಾಗಿರುವ ಈ ಪಟ್ಟೆಗಳು ದ್ವಿಮುಖ ರಸ್ತೆಯ ಮಧ್ಯದ ಪಟ್ಟೆಗಳು. ಇವು ಮುಂದಿನ ವಾಹನವನ್ನು ಮೀರಿ ಮುಂದೆ ಹೋಗಬಾರದೆಂದು ಸೂಚಿಸುತ್ತವೆ.



೫. ಜೊತೆಯಲ್ಲಿರುವ ನಿರಂತರವಾಗಿರುವ ಈ ಪಟ್ಟೆ ಮತ್ತು ತುಂಡರಿಸಿದ ಪಟ್ಟೆಗಳಲ್ಲಿ ನಿರಂತರವಾಗಿರುವ ಪಟ್ಟೆಯ ಕಡೆಗಿರುವ ವಾಹನ ತನ್ನ ಮುಂದಿನ ವಾಹನವನ್ನು ಮೀರಿ ಮುಂದೆ ಹೋಗಬಾರದು ಎಂದು ಸೂಚಿಸುತ್ತದೆ. ತುಂಡರಿಸಿದ ಪಟ್ಟೆಯ ಕಡೆಗಿರುವ ವಾಹನ ತನ್ನ ಮುಂದಿನ ವಾಹನವನ್ನು ಮೀರಿ ಹೋಗಬಹುದು.


೬. ತುಂಡಾದ ಈ ಬಿಳಿಗೆರೆ ನಿರಂತರ ಬಿಳಿಗೆರೆಯಾಗುವುದು–ಪಥವನ್ನು ಆ ಬಿಳಿಗೆರೆ ಮತ್ತೆ ತುಂಡಾಗುವ ತನಕ–ಬದಲಾಯಿಸಬಾರದೆಂದು ಸೂಚಿಸುತ್ತದೆ.





೭. ರಸ್ತೆ ಅಂಚಿಗೆ ಸಮಾನಾಂತರವಾಗಿ ನಿರಂತರವಾಗಿರುವ ಈ ಹಳದಿ ಪಟ್ಟೆ – ಆ ರಸ್ತೆಯ ಬದಿಗೆ ಯಾವ ವೇಳೆಯಲ್ಲಿಯೂ ವಾಹನ ನಿಲುಗಡೆಮಾಡುವ ಹಾಗಿಲ್ಲವೆಂದು ಸೂಚಿಸುತ್ತದೆ.

೮. ರಸ್ತೆ ಅಂಚಿಗೆ ಸಮಾನಾಂತರವಾಗಿ ನಿರಂತರವಾಗಿರುವ ಈ ಎರಡು ಹಳದಿ ಪಟ್ಟೆಗಳು – ಆ ರಸ್ತೆಯ ಬದಿಗೆ ಯಾವ ವೇಳೆಯಲ್ಲೂ, ನಿಲುಗಡೆಯಾಗಲಿ, ತಾತ್ಕಾಲಿಕ ನಿಲುಗಡೆಯಾಗಲಿ ಮಾಡುವ ಹಾಗಿಲ್ಲವೆಂದು ಸೂಚಿಸುತ್ತದೆ.






೯. ನಿರಂತರವಾಗಿರುವ ಈ ಹಳದಿ ಪಟ್ಟೆಯು ದ್ವಿಮುಖ ರಸ್ತೆಯ ಮಧ್ಯದಲ್ಲಿದ್ದು ಆಯಾ ಪಥದ ಕೊನೆಯನ್ನು ಸೂಚಿಸುತ್ತದೆ. ತಮ್ಮ ಪಥದಲ್ಲಿ ಮುಂದಿನ ವಾಹನವನ್ನು ಮೀರಿ ಮುಂದೆ ಹೋಗುವವರು ಈ ಪಟ್ಟೆಯನ್ನು ದಾಟಬಾರದೆಂದು ನಿಷೇಧಿಸಿದೆ.

ಹಳದಿ ಪೆಟ್ಟಿಗೆಯ ಕೂಡುರಸ್ತೆ

ಹಳದಿಯ ಬಣ್ಣದಲ್ಲಿ ಪಾರ್ಶ್ವಕೋನಗಳನ್ನು ಸೇರಿಸಿ ರಚಿಸಿದ ಸಮಾನಾಂತರ ಚತುರ್ಭುಜದ ಪೆಟ್ಟಿಗೆ ಇದಾಗಿದೆ. ಈ ಗುರುತನ್ನು ಕಂಡಾಗ ನಿಂತು, ಮುಂದೆ ಸುರಕ್ಷಿತ ಅವಕಾಶವನ್ನು ಹೊಂದಿದೆ ಎಂದು ದೃಢಪಡಿಸಿಕೊಂಡಾಗ ಮಾತ್ರ ದಾಟಬೇಕು. ಈ ಗುರುತಿನ ಸ್ಥಳದ ಮೇಲೆ ಸ್ವಲ್ಪವೇ ಸಮಯಕ್ಕಾಗಲಿ ವಾಹನವನ್ನು ನಿಲ್ಲಿಸುವಂತಿಲ್ಲ.



೯. ವಾಹನವನ್ನು ನಿಲ್ಲಿಸುವುದು

ವಾಹನವನ್ನು ಎಲ್ಲರೂ ನಡೆಸಬಹುದು. ಆದರೆ ಅದನ್ನು ನಿಲ್ಲಿಸುವ ಚಾಲನಾಯುಕ್ತಿಯನ್ನು ಸರಿಯಾಗಿ ತಿಳಿದವರು ಕಡಿಮೆ. ವಾಹನವನ್ನು ಸೂಕ್ತ ರೀತಿಯಲ್ಲಿ ನಿಲ್ಲಿಸಿಲ್ಲ ಎಂದು ವಾಹನ ಚಾಲನಾ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಅನುತ್ತೀರ್ಣರಾಗುತ್ತಾರೆ. ಆದಕಾರಣ ವಾಹನವನ್ನು ಸರಿಯಾದ ರೀತಿಯಲ್ಲಿ ನಿಲ್ಲಿಸುವ ವಿಧಾನವನ್ನು ತಿಳಿಯಬೇಕು.

ವಾಹನವನ್ನು ನಿಲ್ಲಿಸುವ ಮೊದಲು ನಿಧಾನ ಮಾಡುವ ಮತ್ತು ನಿಲ್ಲುವ ಕೈ ಸಂಕೇತ ನೀಡಬೇಕು. ಎಷ್ಟು ಸಾಧ್ಯವೋ ಅಷ್ಟು ರಸ್ತೆಯ ಎಡ ಅಂಚಿಗೆ ವಾಹನವನ್ನು ನಡೆಸಬೇಕು. ಎಂಜಿನ್ ಸ್ವಿಚ್ ಆಫ್ ಮಾಡಿ ಗೇರ್‌ಗೆ ಹಾಕಿ ಹ್ಯಾಂಡ್ ಬ್ರೇಕ್ ಹಾಕಬೇಕು. ಅನಂತರ ಬಾಗಿಲನ್ನು ತೆಗೆಯುವ ಮೊದಲು ಪಕ್ಕದಲ್ಲಿ ಮತ್ತು ಹಿಂಭಾಗದಲ್ಲಿ ಜನ ಅಥವಾ ವಾಹನ ಸಂಚಾರವಿದೆಯೇ ಎಂಬುದನ್ನು ಗಮನಿಸಬೇಕು. ವಾಹನದ ಪ್ರಯಾಣಿಕರು ಸಾಧ್ಯವಿದ್ದಷ್ಟು ವಾಹನದ ಎಡಗಡೆಯಿಂದಲೇ ಇಳಿಯಬೇಕು.

೧೦. ನಿಲ್ಲುವ ದೂರ

ಸುರಕ್ಷಿತ ವಾಹನ ಚಾಲನಾ ವೇಗವನ್ನು ಆಯ್ಕೆ ಮಾಡಿಕೊಳ್ಳಲು, ವಾಹನವನ್ನು ನಿಲ್ಲಿಸಲು ಪ್ರಯತ್ನಿಸುವಾಗ ಅದು ಎಷ್ಟು ದೂರದಲ್ಲಿ ನಿಲ್ಲುತ್ತದೆ ಎಂದು ತಿಳಿದಿರುವುದು ತುಂಬಾ ಅವಶ್ಯಕವಾಗಿದೆ. ಇದಕ್ಕಾಗಿ ಇರುವ ಒಂದು ಮಾರ್ಗದರ್ಶಿ ಸೂತ್ರವನ್ನು ಇಲ್ಲಿ ನೀಡಿರುವ ಚಿತ್ರದ ಸಹಾಯದಿಂದ ತಿಳಿಯುವುದು ಅಗತ್ಯ.

೧. ಚಾಲಕನ ಗ್ರಹಿಕೆಯ ಸಮಯ : ಇದು ಅಪಾಯಕರ ಸಂದರ್ಭವಿದೆಯೆಂದು ನೋಡಲು ಮತ್ತು ಗಮನಕ್ಕೆ ತೆಗೆದುಕೊಳ್ಳಲು ಹಿಡಿಯುವ ಸಮಯ.

೨. ಚಾಲಕನ ಪ್ರತಿಕ್ರಿಯಾ ಸಮಯ : ಅಪಾಯವನ್ನು ಗ್ರಹಿಸಿದ ನಂತರ ಬ್ರೇಕು ಹಾಕಲು ಬೇಕಾಗುವ ³/₄ ಸೆಕೆಂಡು.

ವಾಸ್ತವವಾಗಿ ವಾಹನ ನಿಲ್ಲುವ ದೂರ ಈ ಕೆಳಗೆ ಸೂಚಿಸಿರುವ ಅಂಶಗಳನ್ನು ಅವಲಂಬಿಸಿರುತ್ತದೆ.

೧. ಚಾಲಕ ಕಾರನ್ನು ನಡೆಸುತ್ತಿರುವ ವೇಗ.

೨. ರಸ್ತೆಯ ಸ್ವರೂಪ ಮತ್ತು ಸ್ಥಿತಿ.

೩. ಚಲಿಸುತ್ತಿರುವುದು– ಸಮತಲನದ ರಸ್ತೆಯೇ, ಕಡಿದಾದ ಏರು ರಸ್ತೆಯೇ ಅಥವಾ ಇಳುಕಲು ರಸ್ತೆಯೇ ಎಂಬುದು.

೪. ಕಾರಿನ ವಿನ್ಯಾಸ ಮತ್ತು ಷಾಕ್‌ಅಬ್ಸಾರ್‌ಬರ್‌ಗಳ ಸ್ಥಿತಿ.

೫. ಕಾರಿನ ಬ್ರೇಕು ಮತ್ತು ಟೈರುಗಳ ಸ್ಥಿತಿ.


೬. ಚಾಲಕನ ಸಾಮರ್ಥ್ಯ.

ಚಾಲಕನು ಅಪಾಯವೆಂದು ತಿಳಿದ ನಂತರ ಬ್ರೇಕು ಒತ್ತಲು ಸಾಮಾನ್ಯವಾಗಿ ತೆಗೆದುಕೊಳ್ಳುವ ಸಮಯ ³/₄ ಸೆಕೆಂಡು. ಅದನ್ನು ಅಂದಾಜು ಪ್ರತಿಕ್ರಿಯಾ ಸಮಯ ಎಂದು ಹೇಳಬಹುದೆಂದು ಮೇಲೆ ತಿಳಿಸಿದೆ. ಒಂದು ಉತ್ತಮ ಸ್ಥಿತಿಯಲ್ಲಿರುವ ಕಾರು ಗಂಟೆಗೆ ೬೦ ಕಿ.ಮೀ. ವೇಗದಲ್ಲಿ ಚಲಿಸುತ್ತಿರುವಾಗ ಗ್ರಹಿಕೆಯ ಸಮಯದಲ್ಲಿ ಆಗಲೇ ೧೨ ಮೀ. ದೂರ ಕ್ರಮಿಸಿರುತ್ತದೆ. ಅದು ಆಲೋಚನ ಅಂತರ (Thinking distance). ಅದೇ ವೇಗದಲ್ಲಿ ಬ್ರೇಕನ್ನು ಒತ್ತಿದಾಗ ವಾಹನ ನಿಲ್ಲಲು ಮತ್ತೆ ಪ್ರತಿಕ್ರಿಯಾ ಸಮಯವೆಂದು ಬ್ರೇಕಿಂಗ್ ದೂರವಾಗಿ ೩೦ ಮೀ. ದೂರ ಕ್ರಮಿಸುತ್ತದೆ. ಅದು ನಿಲ್ಲಬೇಕಾದ ಅಂತರ (Breaking distance). ಹೀಗೆ ಕಾರು ಪೂರ್ಣವಾಗಿ ನಿಲ್ಲಲು ಸಾಮಾನ್ಯವಾಗಿ ತೆಗೆದುಕೊಳ್ಳುವ ದೂರ ೪೨ ಮೀ. (ಗ್ರಹಿಕೆಯ ದೂರ + ಬ್ರೇಕಿಂಗ್ ದೂರ). ಆದಕಾರಣ

ವಾಹನವು ಬ್ರೇಕ್ ಒತ್ತಿದ ತತ್‌ಕ್ಷಣವೇ ನಿಲ್ಲುವುದು ಸಾಧ್ಯವಿಲ್ಲ ಎಂಬುದನ್ನು ಎಲ್ಲರೂ ಮನವರಿಕೆ ಮಾಡಿಕೊಳ್ಳಬೇಕು.

ಸಮತಟ್ಟಾದ ಒಣರಸ್ತೆಯಲ್ಲಿ ಕಾರು ನಿಲ್ಲಲು ತೆಗೆದುಕೊಳ್ಳುವ ಅಂದಾಜು ದೂರ.

ತೇವರಹಿತ ಸಮತಟ್ಟಾದ ರಸ್ತೆಯಲ್ಲಿ
ಕಾರುಗಳ ಸರಾಸರಿ ನಿಲುಗಡೆ ಅಂತರ



ಪ್ರತಿಕ್ರಿಯಾ ಅವಧಿ 3/4 ಸೆಕೆಂಡುಗಳು ಆಧರಿಸಿ ಚಾಲಕರ ಪ್ರತಿಕ್ರಿಯೆ ಲೆಕ್ಕ ಹಾಕಿದೆ.

೧೧. ಸುರಕ್ಷಿತ ಅಂತರ ಸಾಧಿಸಲು ಎರಡು ಸೆಕೆಂಡ್ ನಿಯಮ

ವಾಹನ ಚಾಲಕರು ತಮ್ಮ ವಾಹನಕ್ಕೂ ತಮ್ಮ ಮುಂದಿರುವ ವಾಹನಕ್ಕೂ ಸುರಕ್ಷಿತ ಅಂತರ ಕಾಪಾಡಲು, ಏನಿಲ್ಲವೆಂದರೂ ಎರಡು ಸೆಕೆಂಡ್ ಅಂತರವನ್ನಿಟ್ಟುಕೊಂಡಿರುವಂತೆ ತಮ್ಮ ವಾಹನದ ವೇಗವನ್ನು ಕಾಪಾಡಿಕೊಂಡಿರಬೇಕು. ಆಗ ಮಾತ್ರ ಮುಂದಿನ ವಾಹನದ ಚಾಲಕ ಇದ್ದಕ್ಕಿದ್ದಂತೆ ಬ್ರೇಕ್ ಹಾಕಿದಾಗ ಅವನನ್ನು ಗುದ್ದದಂತಿರಲು ಸಾಧ್ಯ. ಅದಕ್ಕಾಗಿ ರಸ್ತೆಯ ಎಡಬದಿಯಲ್ಲಿರುವ ಒಂದು ಗೊತ್ತಾದ ಟೆಲಿಫೋನ್ ಕಂಬ, ಸಂಚಾರ ಚಿಹ್ನೆಯ ಫಲಕ ಅಥವಾ ಮರವನ್ನು ಮುಂದಿನ ವಾಹನ ದಾಟುವಾಗ–ಹಿಂದಿನ ವಾಹನ ಚಾಲಕನು 'ಒನ್ ಥೌಸಂಡ್ ಅಂಡ್ ಒನ್, ಒನ್ ಥೌಸಂಡ್ ಅಂಡ್ ಟೂ' ಎಂದು ಎಣಿಸಿದರೆ ಅದೇ ಎರಡು ಸೆಕೆಂಡ್. ಅಷ್ಟು ಹೊತ್ತಿಗೆ ಹಿಂದಿನ ವಾಹನ ಆ ಗುರುತನ್ನು ದಾಟಿರದಿದ್ದರೆ ವಾಹನ ಸುರಕ್ಷಿತ ಅಂತರದಲ್ಲಿದೆಯೆಂದು ತಿಳಿಯಬೇಕು. ಹಾಗಿಲ್ಲದೆ ಎರಡು ಸೆಕೆಂಡ್ ಎಣಿಸುವಷ್ಟರಲ್ಲಿ ಹಿಂದಿನ ವಾಹನ ಆ ಗುರುತನ್ನು ದಾಟಿದರೆ, ಹಿಂದಿನ ವಾಹನವು ಮುಂದಿನ ವಾಹನಕ್ಕೆ ತುಂಬಾ ಒತ್ತಿಕೊಂಡಂತೆ ಸಾಗುತ್ತಿದೆ ಎಂದು ತಿಳಿಯಬೇಕು. ಆಗ ಹಿಂದಿನ ವಾಹನದ ಚಾಲಕ ವೇಗವನ್ನು ಕಡಿಮೆ ಮಾಡಿಕೊಳ್ಳಬೇಕು. ಹೀಗೆ ಮಾಡಿದಾಗ ಮಾತ್ರ ಎರಡು ವಾಹನಗಳ ನಡುವೆ ಇರುವ ಅಂತರ ಹೆಚ್ಚಾಗಲು ಸಾಧ್ಯ. ವೇಗ ಕಡಿಮೆ ಮಾಡಿಕೊಂಡು ಮತ್ತೆ ಅದೇ ಬಗೆಯಲ್ಲಿ ಪರಿಶೀಲಿಸಿ ಸುರಕ್ಷಿತ ಅಂತರ ಸಾಧಿಸಬೇಕು.

ರಸ್ತೆ ನೆನೆದಿದ್ದಾಗ ಮತ್ತು ಸ್ಪಷ್ಟವಾಗಿ ಕಾಣದಿದ್ದಾಗ ಈ ಎರಡು ಸೆಕೆಂಡ್ ಅಂತರವನ್ನು ಅದರ ಎರಡರಷ್ಟಾಗಲಿ, ಮೂರರಷ್ಟಾಗಲಿ ಹೆಚ್ಚಾಗಿರುವಂತೆ ನೋಡಿಕೊಳ್ಳಬೇಕು. ಈ ನಿಯಮವನ್ನು ಅನುಸರಿಸುವುದರಿಂದ ಚಾಲಕನು ವಾಹನವನ್ನು ಯಾವುದೇ ವೇಗದಲ್ಲಿ ನಡೆಸುತ್ತಿದ್ದರೂ, ಸುರಕ್ಷಿತ ಅಂತರವನ್ನು ಕಾಪಾಡಿಕೊಳ್ಳಲು ಸಾಧ್ಯವಿದೆ.

೧೨. ವೇಗದ ಮಿತಿ

ಕೇಂದ್ರ ಸರ್ಕಾರವು ವಿವಿಧ ವರ್ಗದ ವಾಹನಗಳಿಗೆ ಈ ಕೆಳಗೆ ಸೂಚಿಸಿರುವ ವೇಗದ ಮಿತಿಯನ್ನು ಗೊತ್ತುಮಾಡಿದೆ.

ವಾಹನದ ವರ್ಗ	ಪ್ರತಿ ಗಂಟೆಗೆ ಗರಿಷ್ಠ ವೇಗ (ಕಿಲೋ ಮೀಟರುಗಳಲ್ಲಿ)
ಎಲ್.ಎಂ.ವಿ. (ಕಾರು)	ಮಿತಿ ಇಲ್ಲ
ದ್ವಿಚಕ್ರ ವಾಹನಗಳು	೫೦
ಟ್ಯಾಕ್ಸಿ/ಮೋ. ಕ್ಯಾಬ್	೬೫
ಟೆಂಪೋ/ಬಸ್	೬೫
ಸರಕು ಸಾಗಣೆ ವಾಹನ (ಲಾರಿ)	೬೫
ಆರ್ಟಿಕ್ಯುಲೇಟೆಡ್ ವಾಹನ	೫೦

ರಾಜ್ಯ ಸರ್ಕಾರವಾಗಲಿ ಅಥವಾ ಯಾವುದೇ ಸ್ಥಳೀಯ ಸಂಸ್ಥೆಯಾಗಲಿ ಯಾವುದೇ ರಸ್ತೆ ಅಥವಾ ಸೇತುವೆಯಲ್ಲಿ ಸಾರ್ವಜನಿಕ ಹಿತರಕ್ಷಣೆಯ ದೃಷ್ಟಿಯಿಂದ ಮೇಲೆ ಸೂಚಿಸಿದ ವೇಗದಲ್ಲಿ ವಾಹನವನ್ನು ಚಲಾಯಿಸುವುದು ಸುರಕ್ಷಿತವಲ್ಲವೆಂದು ತಿಳಿದಾಗ, ಆ ವೇಗಕ್ಕಿಂತ ಕಡಿಮೆ ಮಿತಿಯನ್ನು ನಿಗದಿಗೊಳಿಸಿ ಅದನ್ನು ಫಲಕದಲ್ಲಿ ಸೂಚಿಸಿರುತ್ತಾರೆ. ಚಾಲಕರು ಅವುಗಳನ್ನು ನೋಡಿ ಆ ನಿರ್ಬಂಧದ ವೇಗಮಿತಿಯಲ್ಲಿ ವಾಹನಗಳನ್ನು ನಡೆಸಬೇಕು. ರಾಡಾರ್‌ಗನ್ ಅತಿವೇಗವಾಹನವನ್ನು ಗುರುತಿಸುತ್ತದೆ.

೧೩. ಸ್ಪರ್ಧಾ ಮನೋಭಾವನೆ ಸಲ್ಲದು

ಜೀವನದ ಇತರ ರಂಗದಲ್ಲಿ ಪ್ರಗತಿಗಾಗಿ ಸ್ಪರ್ಧಾ ಮನೋಭಾವನೆ ಇರಬೇಕಾದುದು ಸಹಜವಾದರೂ, ರಸ್ತೆಯಲ್ಲಿ ಆ ಮನೋಭಾವನೆ ಯೋಗ್ಯವಲ್ಲ. ಇನ್ನೊಬ್ಬ ವಾಹನ ಚಾಲಕ ಅಲಕ್ಷ್ಯದಿಂದ ವಾಹನ ಚಾಲನೆ ಮಾಡಿದ ಅಥವಾ ತಪ್ಪು ಮಾಡಿದ ಎಂದು ಅದನ್ನು ಸರಿಮಾಡುವಂತೆ ಪ್ರತೀಕಾರಭಾವದಿಂದ ವಾಹನ ಚಾಲನೆ ಮಾಡಿದರೆ ಇಬ್ಬರೂ ತಪ್ಪು ಮಾಡಿದಂತಾಗಿ ಅದರ ಫಲವೆಂಬಂತೆ ಆಸ್ಪತ್ರೆ ದಾರಿಯನ್ನೂ ಮಸಣದ ದಾರಿಯನ್ನೂ ಹಿಡಿಯಬೇಕಾಗಬಹುದು. ಆದಕಾರಣ **ಚಾಲಕನು ಸಹನೆ, ಸಂಯಮ, ಸೌಜನ್ಯಯುತ ನಡವಳಿಕೆ ಹಾಗೂ ಕ್ಷಮಾಗುಣದವನಾಗಬೇಕು. ಇದೇ ಚಾಲಕನ ರಸ್ತೆಸಂಹಿತೆ.**

೧೪. ವೃತ್ತಗಳಲ್ಲಿ

ವಾಹನ ಚಾಲಕನು ವೃತ್ತಗಳಲ್ಲಿ ಸುತ್ತುವರಿದು ಹೋಗುವಾಗ ಈಗಾಗಲೇ ಆ ವೃತ್ತದಲ್ಲಿರುವ ವಾಹನಗಳನ್ನು ಗಮನಿಸಬೇಕು. ಇದ್ದಕ್ಕಿದ್ದ ಹಾಗೆ ನುಗ್ಗುವ ಸೈಕಲ್ಲು ಮತ್ತು ಪಾದಚಾರಿಗಳನ್ನು ಎಚ್ಚರಿಕೆಯಿಂದ ಗಮನಿಸಬೇಕು. **ವೃತ್ತದಲ್ಲಿ ನಿಂತು, ತನ್ನ ಬಲಗಡೆಯಿಂದ ಬರುವ ಎಲ್ಲ ವಾಹನಗಳಿಗೆ ಮೊದಲು ಹೋಗಲು ಆದ್ಯತೆ ನೀಡಬೇಕು.** ಅವನ ಬಲಭಾಗದ ವಾಹನವೆಲ್ಲ ಹೋದ ನಂತರ ತಾನು ಹೋಗಬೇಕಾದ ಕಡೆಗೆ ವಾಹನವನ್ನು ನಡೆಸಬೇಕು. ವೃತ್ತದ ಬಳಿ ಗುರುತು ಮಾಡಿದ ಗಮನಪಥದ ರೇಖೆಗಳನ್ನು ಗಮನಿಸಿ ತಾನು ತಿರುಗಬೇಕಾದ ಹಾದಿಯ ವಲಯದಲ್ಲಿ ವಾಹನವನ್ನು ನಿಲ್ಲಿಸಿಕೊಳ್ಳಬೇಕು. ಪಾದಚಾರಿಗಳಿಗಾಗಿ ಗುರುತು ಮಾಡಿದ ಜೀಬ್ರಾ ಪಟ್ಟೆಗಳಿದ್ದರೆ, ಅದರ ಹಿಂದಕ್ಕೆ ವಾಹನವನ್ನು ನಿಲ್ಲಿಸಬೇಕು.

(ಅ) ಎಡತಿರುವು : ಎಡ ತಿರುವಿನ ಹಾದಿಯ ಗಮನಪಥದಲ್ಲಿ ನಿಲ್ಲಬೇಕು. ಮುಕ್ತ ಎಡ ತಿರುವು (ಫ್ರೀ ಲೆಫ್ಟ್) ಎಂದಿದ್ದರೆ ಎಡತಿರುವು ತೆಗೆದುಕೊಳ್ಳಬೇಕು. ಹಾಗಿಲ್ಲದಿದ್ದಲ್ಲಿ ವೃತ್ತದಲ್ಲಿರುವ ಪೊಲೀಸರ ಅಥವಾ ಸಂಚಾರ ಸಂಕೇತ ದೀಪದ ಆದೇಶಕ್ಕೆ ಕಾಯ್ದು, ಆದೇಶ ಬಂದಾಗ ರಸ್ತೆ ಎಡ ಅಂಚಿಗೆ ವಾಹನವನ್ನು ನಡೆಸುತ್ತ ನಿಧಾನವಾಗಿ ತಿರುಗಬೇಕು.

(ಆ) ನೇರವಾಗಿ ಹೋಗಬೇಕಾದಾಗ : ನೇರ ಚಾಲನ ಹಾದಿಯ ಗಮನ ಪಥದಲ್ಲಿ ನಿಲ್ಲಬೇಕು. ಸೂಕ್ತ ಸಂಕೇತಾದೇಶ ಬಂದಾಗ ಎಚ್ಚರಿಕೆಯಿಂದ ವೃತ್ತವನ್ನು ದಾಟಿಹೋಗಬೇಕು.

(ಇ) ಬಲ ತಿರುವು : ಬಲ ತಿರುವಿನ ಹಾದಿಯ ಗಮನಪಥದಲ್ಲಿ ನಿಲ್ಲಬೇಕು. ಸೂಕ್ತ ಸಂಕೇತಾದೇಶ ಬಂದಾಗ ಸುತ್ತುವರಿದು ಹೋಗುವ ವಾಹನಗಳ ಜೊತೆ ಸೇರಿ ಹೋಗಬೇಕು. ವೃತ್ತಾಕಾರದಲ್ಲಿ ಸುತ್ತು ಚಾಲನೆಯಲ್ಲಿ ಹೋಗುತ್ತ; ತಿರುಗಬೇಕಾದ ಹಾದಿಗೆ ಮುನ್ನ ಸೂಕ್ತ ಸೂಚನೆ ನೀಡಿ ಇತರ ವಾಹನಗಳಿಂದ ಬಿಡುಗಡೆ ಹೊಂದಿ, ಸೇರಬೇಕಾದ ಹಾದಿಯನ್ನು ಪ್ರವೇಶಿಸಬೇಕು.

೧೫. ಪಾದಚಾರಿಗಳ ಪಾತ್ರ

ರಸ್ತೆಯಲ್ಲಿ ನಡೆಯುವುದು ಒಂದು ಶಿಸ್ತಾಗಬೇಕಾಗಿದೆ. ತಂದೆ-ತಾಯಿಗಳು, ಪೋಷಕರು ತಮ್ಮ ಮಕ್ಕಳನ್ನು ಕೈ ಹಿಡಿದು ರಸ್ತೆಗೆ ತರುವಾಗಲೇ ಸೂಕ್ತ ಮಾರ್ಗದರ್ಶನ ನೀಡಬೇಕು. ತಂದೆ-ತಾಯಿಗಳು, ಪೋಷಕರು ವಾಹನ ಚಲಿಸುವ ಮಗ್ಗುಲಿಗೆ ತಾವಿದ್ದು, ಇನ್ನೊಂದು ಮಗ್ಗುಲಲ್ಲಿ ಮಕ್ಕಳನ್ನು ನಡೆಸಿಕೊಂಡು ಹೋಗಬೇಕು. ಕಾಲುದಾರಿಗಳಿದ್ದೆಡೆಯಲ್ಲಿ ಅವುಗಳನ್ನು ಬಳಸಬೇಕೇ ಹೊರತು ಮುಖ್ಯ ರಸ್ತೆಗಳಲ್ಲಿ ನಡೆಯಬಾರದು. **ಕಾಲುದಾರಿಗಳಿಲ್ಲದೆಡೆಯಲ್ಲಿ ರಸ್ತೆಯ ಬಲಬದಿಯ ಅಂಚನ್ನು ಹಿಡಿದು ನಡೆಯುವುದು ಕ್ಷೇಮ.** ಏಕೆಂದರೆ, ಹೀಗೆ ನಡೆದು ಹೋಗುವುದರಿಂದ ಎದುರುಬರುವ ವಾಹನಗಳು, ಅವುಗಳ ಚಲನೆ, ಚಾಲಕರ ವಾಹನ ಚಾಲನಾ ರೀತಿ ಗೊತ್ತಾಗುವುದರಿಂದ ಮತ್ತು ಚಾಲಕರಿಗೆ ಪಾದಚಾರಿಗಳು ಕಾಣುವುದರಿಂದ ಸುರಕ್ಷಿತ ನಡೆ ಸಾಧ್ಯವಾಗುತ್ತದೆ. ಹಾಗೆ ನಡೆಯುವಾಗ ಒಬ್ಬರ ಹಿಂದೆ ಒಬ್ಬರು ಸಾಗಬೇಕು.

ಸಾಂದ್ರವಾದ ವಾಹನ ಸಂಚಾರಗಳಿರುವೆಡೆಗಳಲ್ಲಿ ಪಾದಚಾರಿಗಳು ರಸ್ತೆಗಳನ್ನು ದಾಟುವಾಗ ಜೀಬ್ರಾ ಪಟ್ಟೆಗಳಿರುವ ಎಡೆಯನ್ನೇ ಆಶ್ರಯಿಸಬೇಕು. ಆ ತಾಣಗಳಲ್ಲಿ ಪೋಲೀಸರಿದ್ದರೆ ಅವರೇ ನಿಯಂತ್ರಿಸುತ್ತಾರೆ. ಇಲ್ಲದಿದ್ದಲ್ಲಿ ವಾಹನಗಳು ಜೀಬ್ರಾ ಪಟ್ಟೆಯ ಬಳಿ ಬಂದು ಪೂರ್ಣವಾಗಿ ನಿಂತ ನಂತರವೇ ರಸ್ತೆಯನ್ನು ದಾಟಬೇಕು. ಜೀಬ್ರಾ ಪಟ್ಟೆಗಳಿಲ್ಲದ ಕಡೆ ರಸ್ತೆ ದಾಟುವ ಮೊದಲು ಬಲವನ್ನು, ತರುವಾಯ ಎಡವನ್ನೂ, ಇನ್ನೇನು ದಾಟುತ್ತೇವೆನ್ನುವಾಗ ಮತ್ತೊಮ್ಮೆ ಬಲವನ್ನು ನೋಡಿ ಸಾಗಬೇಕು. ಮಕ್ಕಳಿಗಂತೂ ಈ ವಿಷಯದಲ್ಲಿ ಹೆಚ್ಚಿನ ಶಿಕ್ಷಣ ನೀಡಬೇಕು.

ರಸ್ತೆಯಲ್ಲಿ ಬೇಕಾಬಿಟ್ಟಿ ಓಡಾಡಬಾರದು ಮತ್ತು ಕುರುಡು ತಿರುವು (Blind Curve) ಗಳಲ್ಲಿ ಹೆಚ್ಚು ಎಚ್ಚರವಾಗಿರಬೇಕು. ಒಂದು ವಾಹನ ನಿಂತಿದ್ದಾಗ ಅಥವಾ ನಿಧಾನವಾಗಿ ಚಲಿಸುತ್ತಿರುವಾಗ ಆ ವಾಹನದ ಹಿಂಭಾಗದಿಂದ ರಸ್ತೆ ದಾಟಬಾರದು. ಹಾಗೆ ದಾಟಬೇಕಾದರೆ ಆ ವಾಹನದ ಹಿಂದೆ ಬಂದು ನಿಂತು ಎಡಬದಿಗೆ ಯಾವುದೇ ವಾಹನ ಬರುತ್ತಿಲ್ಲವೆಂದು, ರಸ್ತೆ ಸುಗಮವಾಗಿದೆಯೇ ಎಂದು ನೋಡಿ ಅನಂತರ ಸಾವಧಾನವಾಗಿ ದಾಟಬೇಕು. ದಾಟುವಾಗ ರಸ್ತೆಗೆ ಲಂಬವಾಗಿ ದಾಟಬೇಕು, ಓರೆಯಾಗಿ ದಾಟಬಾರದು. ಗಾಬರಿಯಿಂದ ಮತ್ತು ಓಟದಲ್ಲಿ ರಸ್ತೆ ದಾಟಬಾರದು.

ಕೂಡುರಸ್ತೆಯನ್ನು ದಾಟುವಾಗ, ಎಲ್ಲ ಕಡೆಯಿಂದ ಬರುವ ವಾಹನಗಳನ್ನು ಗಮನಿಸಿ ರಸ್ತೆ ಸರಾಗವಾಗಿದೆಯೆಂದೆನಿಸಿದಾಗ ಮಾತ್ರ ದಾಟಬೇಕು. ಸಂಚಾರ ದೀಪಗಳಿರುವ ಕೂಡುರಸ್ತೆಯಲ್ಲಿ 'ದಾಟಿ' ಎಂದು ಹಸಿರು ಸಂಕೇತ ಬಂದಾಗ ಮಾತ್ರ ದಾಟಬೇಕು. ಆಗಲೂ ಸಹ ದುಡುಕಿನಿಂದ ವಾಹನ ನಡೆಸುತ್ತ ಬರುವ ಚಾಲಕರನ್ನು

ನೋಡಿ ಎಚ್ಚರಿಕೆಯಿಂದ ದಾಟಬೇಕು. ಸಂಚಾರಿ ಪೊಲೀಸರಿರುವ ಕೂಡು ರಸ್ತೆಯಲ್ಲಿ ಅವರು ಆದೇಶ ನೀಡುವ ತನಕ ರಸ್ತೆ ದಾಟಬಾರದು. ಸಂಚಾರವನ್ನು ನಿಯಂತ್ರಿಸುವ ಅವರ ಆಜ್ಞೆಯನ್ನು ಯಾವುದೇ ಬಿಗುಮಾನಗಳಿಲ್ಲದೆ ಪಾಲಿಸಬೇಕು. ವಾಹನವು ಚಲಿಸುತ್ತಿರುವಾಗ ಹತ್ತುವುದಾಗಲಿ ಇಳಿಯುವುದಾಗಲಿ ಮಾಡಬಾರದು.

೧೬. ಸೈಕಲ್ಲು ಸವಾರರು

ಸೈಕಲ್ಲು ಸವಾರರು ರಸ್ತೆಯಲ್ಲಿ ಸಾಧ್ಯವಿದ್ದಷ್ಟು ಒಬ್ಬರ ಹಿಂದೆ ಒಬ್ಬರು ಹೋಗಬೇಕು. ಅವರು ಒಬ್ಬರ ಮಗ್ಗುಲಿಗೊಬ್ಬರು ಬಂದು ರಸ್ತೆಯ ಹೆಚ್ಚು ಭಾಗವನ್ನು ಆಕ್ರಮಿಸಬಾರದು. ಸೈಕಲ್ಲು ಸಮತೋಲ ಸಾಧಿಸಲಾಗದ ವಾಹನವಾದುದರಿಂದ ಹಿಂದೇ ಯಾರನ್ನೂ ಕುಳ್ಳಿರಿಸಿಕೊಂಡು ಹೋಗಬಾರದು, ಅದೇ ರೀತಿ ಹಿಂದೆ ಹೆಚ್ಚುಭಾರದ ವಸ್ತುಗಳನ್ನು ಕೊಂಡೊಯ್ಯಬಾರದು. ಸೈಕಲ್ಲಿನಲ್ಲಿ ಹೋಗುವಾಗ ತಮ್ಮನ್ನು ಎಳೆದುಕೊಂಡು ಹೋಗುವಂತೆ ಲಾರಿ, ಬಸ್ಸು ಮುಂತಾದವುಗಳನ್ನು ಹಿಡಿದು ಹೋಗಬಾರದು. ಇದ್ದಕ್ಕಿದ್ದ ಹಾಗೆ ಹಿಡಿದಿರುವ ವಾಹನದ ಚಾಲಕ ಬ್ರೇಕು ಹಾಕಿದರೆ, ಚಲನೆಯಲ್ಲಿರುವ ಸೈಕಲ್ಲು ಮತ್ತು ಸೈಕಲ್ ಸವಾರ ಆ ಚಕ್ರದಡಿ ಸಿಕ್ಕಿ ಸಾಯುವನು. ಹೀಗೆ ಸತ್ತ ಪ್ರಕರಣಗಳು ಇರುವ ಕಾರಣ ಈ ದುಸ್ಸಾಹಸಕ್ಕೆ ತೊಡಗುವುದು ಸಾವನ್ನು ಆಹ್ವಾನಿಸಿದಂತೆ.

ಸೈಕಲ್ ಸವಾರಿ ಮಾಡುವಾಗ ಯಾವುದೇ ಬಗೆಯ ಸರ್ಕಸ್ಸುಗಳನ್ನು ಪ್ರದರ್ಶಿಸಲು ಹೋಗಬಾರದು. ಕೈಬಿಟ್ಟು ಹೊಡೆಯುವುದು, ಹ್ಯಾಂಡಲ್ ಎತ್ತಿ ಹಾರಿಸುವುದು, ಹಾವಿನ ಹಾಗೆ ಓಡಿಸುವುದು ಮೊದಲಾದವನ್ನು ಮಾಡಬಾರದು. ಕೈ ನಿಂದ ಸಂಕೇತ ನೀಡುವಾಗ ಮಾತ್ರ ಹ್ಯಾಂಡಲ್‌ನಿಂದ ಒಂದು ಕೈ ತೆಗೆಯಬಹುದು. ಮಿಕ್ಕ ಹಾಗೆ ಕೈಗಳೆರಡೂ ಹ್ಯಾಂಡೆಲ್ ಮೇಲಿರಬೇಕು. ತಿರುಗುವಾಗ, ನಿಧಾನ ಮಾಡುವಾಗ, ನಿಲ್ಲುವಾಗ ಸೂಕ್ತವಾದ ಕೈ ಸಂಕೇತ ನೀಡಬೇಕು.

ರಸ್ತೆಯ ಎಡವನ್ನೇ ಹಿಡಿದು ಸೈಕಲ್ ನಡೆಸುತ್ತ, ಹಿನ್ನೋಟದ ಕನ್ನಡಿ ಬಳಸಿ ಹಿಂದೆ ಬರುತ್ತಿರುವ ವಾಹನದ ಮೇಲೆ ಲಕ್ಷ್ಯ ಕೊಟ್ಟು ಸಾಗಬೇಕು. ರಾತ್ರಿ ವೇಳೆಯಲ್ಲಿ ಎಲ್ಲ ಸೈಕಲ್ಲುಗಳ ಮುಂಭಾಗದಲ್ಲಿ ದೀಪವನ್ನು ಹೊತ್ತಿಸಿರಬೇಕು. ತನ್ನ ಪಥ ಕಾಣಬೇಕೆಂಬ ಅಗತ್ಯದ ಜೊತೆಗೆ, ಮಿಕ್ಕ ಮೋಟಾರು ವಾಹನಗಳ ಸಂಚಾರಕ್ಕೆ ಎಚ್ಚರಿಕೆ ನೀಡಲು ಅಂತಹ ದೀಪವಿರಬೇಕು. ಸೈಕಲ್ಲಿನ ಹಿಂಭಾಗದ ಮಡ್‌ಗಾರ್ಡ್‌ಗೆ ಒಂದು ಕೆಂಪು ಪ್ರತಿಫಲಕವನ್ನು ಅಳವಡಿಸಬೇಕು ಮತ್ತು ಬಿಳಿಬಣ್ಣವನ್ನು ಹಚ್ಚಿರಬೇಕು. ಹೀಗೆ ಮಾಡುವುದರಿಂದ ಹಿಂದಿನಿಂದ ಬರುವ ಮೋಟಾರು ವಾಹನಕ್ಕೆ ಸೈಕಲ್ಲು ಕಂಡು ಸುರಕ್ಷಿತ ಸಂಚಾರ ಸಾಧ್ಯವಾಗುತ್ತದೆ.

೧೭. ದ್ವಿಚಕ್ರ ವಾಹನಗಳು

ದ್ವಿಚಕ್ರ ವಾಹನಗಳನ್ನು ಗೇರ್ ಇರುವ ಮೋಟಾರು ಸೈಕಲ್ಲು (ಸ್ಕೂಟರು ಸಹಿತ) ಮತ್ತು ಗೇರ್ ಇಲ್ಲದ ಮೋಟಾರು ಸೈಕಲ್ಲು ಎಂದು ವಿಂಗಡಿಸಿದ್ದಾರೆ. ನಗರ ಪ್ರದೇಶದಲ್ಲಿ ದ್ವಿಚಕ್ರ ವಾಹನಗಳ ಸಂಖ್ಯೆ ಹೆಚ್ಚಿದ್ದು ಅವುಗಳ ಅಪಘಾತವೂ ಹೆಚ್ಚು. ಇತರ ವಾಹನಗಳಿಗೆ ಹೋಲಿಸಿದರೆ ಈ ಬಗೆಯ ವಾಹನಗಳು ಆಕಾರದಲ್ಲಿ ಚಿಕ್ಕದಾಗಿರುವುದು, ಪ್ರತಿಕೂಲ ಹವಾಮಾನದಲ್ಲಿ ಕಾಣದಿರುವುದು ಮತ್ತು ಚಾಲಕನಿಗೆ ರಕ್ಷಣೆಯಿಲ್ಲದಿರುವುದು ಹೆಚ್ಚು ಅಪಘಾತಕ್ಕೆ ಕಾರಣವಾಗಿವೆ. ಅಪಘಾತವಾದಾಗ ತಲೆಗೆ ಹೆಚ್ಚು ಏಟಾಗುವುದರಿಂದ ಪ್ರತಿಯೊಬ್ಬ ದ್ವಿಚಕ್ರವಾಹನ ಚಾಲಕನು ಶಿರಸ್ತ್ರಾಣವನ್ನು (ಹೆಲ್ಮೆಟ್) ಧರಿಸಲೇಬೇಕು. ಧೂಳು ಮತ್ತು ಹುಳುಗಳಿಂದ ರಕ್ಷಿಸಿಕೊಳ್ಳಲು ಚಾಲಕನು ಕನ್ನಡಕವನ್ನು ಧರಿಸಬೇಕು.

ಮೆದುಳಿನ ಭಾಗವೇ ಆದ ಹಿಮ್ಮೆದುಳು (Cerebellum) ತಲೆಯ ಹಿಂಭಾಗದಲ್ಲಿದೆ. ಅದು ಪೂರ್ಣವಾಗಿ ಗಟ್ಟಿ ಮೂಳೆಗಳಿಂದ ಸುರಕ್ಷಿತವಾಗಿಲ್ಲದ ಕಾರಣ ಅದನ್ನು ಸುಲಭವಾಗಿ ಭೇದಿಸಬಹುದಾಗಿದೆ. ಆ ಹಿಮ್ಮೆದುಳು ನಮ್ಮ ಶರೀರದ ಸಮತೋಲವನ್ನು, ನಮ್ಮ ನಿಲುವನ್ನು ಹಿಡಿತದಲ್ಲಿಟ್ಟುಕೊಂಡು ನಮ್ಮ ಚಲನೆಯನ್ನು ನಿಯಂತ್ರಿಸುತ್ತದೆ. ಅದು ಮಿದುಳಿನ ದಿಂಡಿನ ಮುಖಾಂತರ ಬೆನ್ನುಮೂಳೆಗೆ ಸಂಪರ್ಕವನ್ನು ಹೊಂದಿದೆ. ಹಿಮ್ಮೆದುಳಿಗೆ ಹಾನಿಯಾದಾಗ ಪಾರ್ಶ್ವವಾಯು ಉಂಟಾಗುವ ಸಾಧ್ಯತೆಯಿದೆ. ಈ ಎಲ್ಲ ಕಾರಣದಿಂದ ನಮ್ಮ ತಲೆಯನ್ನು, ಮುಖ್ಯವಾಗಿ ಕತ್ತಿನ ಹಿಂಭಾಗವನ್ನು ರಕ್ಷಣೆಗೆ ಒಳಪಡಿಸಲೇಬೇಕು. **ದ್ವಿಚಕ್ರ ವಾಹನದಲ್ಲಿ ಅಪಘಾತದಿಂದ ಉಂಟಾಗುವ ಸಾವಿನಲ್ಲಿ ಶೇ. ೪೦ ರಷ್ಟನ್ನು ಹೆಲ್ಮೆಟ್ ಧರಿಸುವುದರಿಂದ ತಪ್ಪಿಸಬಹುದು.**

ದ್ವಿಚಕ್ರ ವಾಹನಗಳಲ್ಲಿ ಎರಡು ಚಕ್ರಗಳಿಗೂ ಪ್ರತ್ಯೇಕ ಬ್ರೇಕು ಇರುವುದರಿಂದ ಎರಡೂ ಬ್ರೇಕುಗಳನ್ನು ಪರಿಣಾಮಕಾರಿಯಾಗಿ ಬಳಸಬೇಕು. ಚಲಿಸುತ್ತಿರುವ ದ್ವಿಚಕ್ರ ವಾಹನವನ್ನು ಸರಿಯಾಗಿ ನಿಲ್ಲಿಸುವ ಬಗೆಯೆಂದರೆ ಎರಡೂ ಬ್ರೇಕುಗಳನ್ನು ಸಾವಧಾನವಾಗಿ ಬಳಸುವುದೇ ಆಗಿದೆ. ವಾಹನಗಳಲ್ಲಿ ಮುಂಭಾಗದ ಚಕ್ರದ ಬ್ರೇಕು ತುಂಬಾ ಮುಖ್ಯವಾದುದಾಗಿ, ವಾಹನದ ಒಟ್ಟು ಬ್ರೇಕು ಸಾಮರ್ಥ್ಯದಲ್ಲಿ ಶೇ. ೭೦ ಭಾಗವನ್ನು ಈ ಮುಂಭಾಗದ ಬ್ರೇಕ್ ಒದಗಿಸುತ್ತದೆ. ಆದಕಾರಣ ನಿಧಾನ ಮಾಡುವಾಗ ಮತ್ತು ನಿಲ್ಲಿಸುವಾಗ ಎರಡೂ ಬ್ರೇಕನ್ನು ಉಪಯೋಗಿಸಬೇಕು. ಹಿಂದಿನ ಚಕ್ರದ ಬ್ರೇಕನ್ನು ಮಾತ್ರ ಬಳಸುತ್ತಿದ್ದರೆ, ವಾಹನ ಚಾಲಕನು ತುಂಬಾ ಅವಶ್ಯಕತೆ ಬಿದ್ದಾಗ ಮುಂಭಾಗದ ಬ್ರೇಕ್ ಬಳಸುವ ಚಾತುರ್ಯದಿಂದ ವಂಚಿತನಾಗುತ್ತಾನೆ.

ಸಾಮಾನ್ಯವಾಗಿ ಈ ಕೆಳಸೂಚಿಸಿರುವ ಸಂದರ್ಭಗಳಲ್ಲಿ ದ್ವಿಚಕ್ರ ವಾಹನಗಳು ಅಪಘಾತಕ್ಕೀಡಾಗುತ್ತವೆ.

೧. **ಜಾರಿ ಹೊರಳುವುದು :** ದ್ವಿಚಕ್ರ ವಾಹನಗಳು ಜಾರಿಹೊರಳು (ಸ್ಕಿಡ್)ವುದು ಹೆಚ್ಚು. ಹಾಗೆ ಜಾರಿ ಹೊರಳಲು ಕಾರಣವಾಗುವ ಕೆಲವು ಅಂಶಗಳೆಂದರೆ ವರ್ಷದ ಮೊದಲ ಮಳೆ ಅಥವಾ ತುಂತುರು ಮಳೆ ಬಿದ್ದಾಗ ರಸ್ತೆಯ ಮೇಲೆ ಬಿದ್ದಿರುವ ಎಣ್ಣೆ, ಧೂಳು ಮಳೆ ನೀರಿನೊಡನೆ ಬೆರೆತು ಜಾರುವಂತಹ ತೆಳುಪರದೆಯನ್ನು ರಸ್ತೆಯ ಮೇಲೆ ಸೃಷ್ಟಿಸುವುದು ಮತ್ತು ರಸ್ತೆಯಲ್ಲಿ ಚೆಲ್ಲಿದಂತಿರುವ ಮರಳು ಹಾಗೂ ನುರುಜುಗಲ್ಲು. ಇಂತಹ ಕಡೆ ಚಾಲಕನು ವೇಗವನ್ನು ಕಡಿಮೆ ಮಾಡಿ ಆತುರ ಮತ್ತು ಅವಸರದ ಚಾಲನೆಗೆ ಕಡಿವಾಣ ಹಾಕಿಕೊಳ್ಳಬೇಕು. ಗೇರ್ ಅನ್ನು ಕೆಳಹಂತದ (ಲೋಯರ್) ಗೇರ್‌ಗೆ ಬದಲಾಯಿಸುವುದರಿಂದ ವಾಹನದ ಹಿಡಿತ ಸಾಧಿಸಿ ಸುಲಭವಾಗಿ ಬ್ರೇಕ್ ಹಾಕಲು ಸಾಧ್ಯವಾಗುತ್ತದೆ. ಜಾರಿದ ದಿಕ್ಕಿಗೇ ವಾಹನ ಹಿಡಿದು ನಡೆಸಿ ವೇಗವನ್ನು ಕಡಿಮೆ ಮಾಡುತ್ತ ವಾಹನವನ್ನು ಹಿಡಿತಕ್ಕೆ ತೆಗೆದುಕೊಳ್ಳಬೇಕು.

೨. **ತಿರುವು :** ತಿರುವುಗಳಲ್ಲಿ ವೇಗವಾಗಿ ವಾಹನ ಚಾಲನೆ ಮಾಡಬಾರದು. ತಿರುವು ಪ್ರವೇಶಿಸುವ ಮೊದಲೇ ವೇಗವನ್ನು ಕಡಿಮೆ ಮಾಡಬೇಕು. ತಿರುಗುವಾಗ ಒಂದೇ ವೇಗದಲ್ಲಿ ವಾಹನವನ್ನು ನಡೆಸಬೇಕು. ಮತ್ತು ಬ್ರೇಕು ಹಾಕಬಾರದು. ಅಕಸ್ಮಾತ್ ಬ್ರೇಕು ಹಾಕುವುದಾದರೆ ಎರಡೂ ಬ್ರೇಕನ್ನು ನಿಧಾನವಾಗಿ ಸಾವಧಾನವಾಗಿ ಹಾಕಬೇಕು.

೩. **ಅನಿರೀಕ್ಷಿತವಾಗಿ ಟೈರಿನಗಾಳಿ ಬರಿದಾದಾಗ :** ದ್ವಿಚಕ್ರ ವಾಹನದ ಟೈರ್‌ನಲ್ಲಿನ ಗಾಳಿ ಬರಿದಾದಾಗ (Blowout) ವಾಹನದ ತೋಲ ತಪ್ಪುವುದರಿಂದ ಚಾಲಕನಾದವನು ಎಚ್ಚೆತ್ತುಕೊಳ್ಳಬೇಕು. ಮುಂದಿನ ಚಕ್ರದ ಗಾಳಿ ಬರಿದಾದಾಗ ಸ್ಟೀರಿಂಗ್ ಹಿಡಿತ ತಪ್ಪುವುದರಿಂದ ಅಪಾಯದ ಸಾಧ್ಯತೆಯಿದೆ. ಆಗ ಸ್ಟೀರಿಂಗ್ ಹ್ಯಾಂಡಲ್ ಭಾರವಾದಂತಾಗುತ್ತದೆ. ಹಿಂದಿನ ಚಕ್ರದ ಗಾಳಿ ಬರಿದಾದಾಗ (Blowout) ವಾಹನ ಪಕ್ಕದಿಂದ ಪಕ್ಕಕ್ಕೆ ವಾಲಿದಂತಾಗುತ್ತದೆ. ಚಾಲಕನು ಅಂತಹ ಸಂದರ್ಭದಲ್ಲಿ ಹ್ಯಾಂಡಲ್‌ನ ಹಿಡಿತಬಿಡದೆ ನೇರವಾಗಿ ನಡೆಸಲು ಪ್ರಯತ್ನಿಸಬೇಕು. ಬ್ರೇಕನ್ನು ಒತ್ತಬಾರದು. ಆಕ್ಸಿಲರೇಟರನ್ನು ಪೂರ್ತಿ ಹಿಂದಕ್ಕೆ ತಿರುಗಿಸಿ ವಾಹನ ಸುಮ್ಮನೆ ತನ್ನ ಸಂಚಿತ ಶಕ್ತಿಯಿಂದಲೇ ಉರುಳಲು ಬಿಡಬೇಕು. ತುಂಬಾ ಅವಶ್ಯವಾದರೆ ಬ್ರೇಕು ಬಳಸಿ ನಿಧಾನವಾದ ನಂತರ ರಸ್ತೆಯ ಅಂಚಿಗೆ ತೆಗೆದುಕೊಂಡು ಬಂದು ನಿಲ್ಲಿಸಬೇಕು.

೪. **ರಸ್ತೆಗಳು ನಾದುರಸ್ತಿಯಾಗಿ ಉಂಟಾಗಿರುವ ಉಬ್ಬು ತಗ್ಗುಗಳು ಗುಂಡಿ ಗೊರಟೆಗಳು ಮುಂತಾದವುಗಳು :** ದ್ವಿಚಕ್ರ ವಾಹನ ಚಾಲಕರಿಗೆ ಅಸಮರ್ಪಕ ರಸ್ತೆಯ ಉಬ್ಬು

ತಗ್ಗುಗಳು ಗುಂಟಿ ಗೊರಟೆಗಳು ಹಾಗೂ ರೈಲ್ವೆ ಲೆವೆಲ್ ಕ್ರಾಸಿಂಗ್‌ಗಳಲ್ಲಿ ಅಪಾಯ ಹೆಚ್ಚು. ಅವುಗಳಿಂದ ವಾಹನದ ಹಿಡಿತ ತಪ್ಪುತ್ತದೆ. ಅಂತಹ ರಸ್ತೆಗಳಲ್ಲಿ ಅಪಘಾತವಾಗುವುದನ್ನು ತಪ್ಪಿಸಲು ತಾಳ್ಮೆಯಿಂದ ಸಾವಧಾನವಾಗಿ ವಾಹನವನ್ನು ನಡೆಸಬೇಕು. ಹಗಲು ಹೊತ್ತಿನಲ್ಲಿ ಅಂತಹವು ಸಹಜವಾಗಿಯೇ ಕಾಣಿಸುತ್ತವೆ. ರಾತ್ರಿಯ ವೇಳೆಯಾದರೆ ಬೇರೆ ಬೆಳಕಿಲ್ಲದಿದ್ದಲ್ಲಿ ಮುಂದಿನ ವಾಹನದ ಹಿಂಬದಿಯ ದೀಪ(Tail lamp)ದ ಬೆಳಕಿನಲ್ಲಿ ಆವುಗಳನ್ನು ಗುರುತಿಸುತ್ತ; ಮುಂದಿನ ವಾಹನವನ್ನು ಮೀರಿ ಹೋಗಲು ಪ್ರಯತ್ನಿಸುವ ಹಂಬಲವನ್ನು ಬಿಟ್ಟು, ತುಂಬು ಎಚ್ಚರಿಕೆಯಿಂದ ವಾಹನವನ್ನು ನಡೆಸಬೇಕು.

೫. **ಬೀದಿ ನಾಯಿಗಳು :** ದ್ವಿಚಕ್ರ ವಾಹನಗಳಿಗೆ ಬೀದಿ ನಾಯಿಗಳು ಉಪದ್ರವ ಕೊಡುತ್ತವೆ. ಅವು ಬೊಗಳುತ್ತ ಅಟ್ಟಿಸಿಕೊಂಡು ಬಂದರೆ ಅವುಗಳನ್ನು ಒದೆಯಲು ಹೋಗಬೇಡಿ. ಒದೆಯಲು ಹೋದರೆ ಆಗಲೇ ವಾಹನದ ಹಿಡಿತ ತಪ್ಪಿ ಅಪಘಾತವಾಗುತ್ತದೆ. ರಸ್ತೆ ಬದಿಯಲ್ಲಿ ಒಂದು ನಾಯಿ ನಿಂತಿದ್ದರೆ ಅದರ ಹತ್ತಿರ ಹೋಗುವಾಗ ನಿಧಾನವಾಗಿ ಹೋಗಿ ನಾಯಿಯನ್ನು ತಲುಪಿದ ತಕ್ಷಣ ವೇಗ ಹೆಚ್ಚಿಸಿ, ಅದು ಬೊಗಳುತ್ತ ಅಟ್ಟಿಸಿಕೊಂಡು ಬರುವ ಹೊತ್ತಿಗೆ ಅದಕ್ಕೆ ಕಾಣದಷ್ಟು ದೂರ ಹೋಗಿದ್ದರೆ ಅದರ ಸಾಮಾನ್ಯ ಕುತೂಹಲ ತಗ್ಗಿ, ಅದು ಬಾಲ ಮುದುರಿಕೊಂಡು ಹಿಂದಕ್ಕೆ ಓಡಿರುತ್ತದೆ.

೬. **ಮೊಬೈಲ್ ಬಳಕೆ :** ಮೋ.ವಾಹನ ಚಾಲನೆ ಮಾಡುವಾಗ ಮೊಬೈಲ್ ಬಳಸುವುದು ಅಪರಾಧ. ಇತ್ತೀಚೆಗೆ ಮೋ.ಸೈಕಲ್ ಸವಾರರು ಮೊಬೈಲನ್ನು ಕಿವಿಗೆ ಆನಿಸಿಕೊಂಡು ಕತ್ತನ್ನು ಎಡಭುಜಕ್ಕೆ ಒರಗಿಸಿ ಚಾಲನೆ ಮಾಡುವ ಕೆಟ್ಟ ಚಾಳಿಗೆ ಒಳಗಾಗಿದ್ದಾರೆ. ಅದರಿಂದ ವಾಹನದ ತೋಲ ತಪ್ಪುತ್ತದೆ. ಅಪಘಾತಕ್ಕೆ ಕಾರಣವಾಗುತ್ತದೆ.

೧೮. ಅಪಾಯಕಾರಿ ಪೆಟ್ರೋಲಿಯಂ ಮತ್ತು ರಾಸಾಯನಿಕ ಉತ್ಪನ್ನಗಳ ಸಾಗಣೆ

ತೈಲ ಟ್ಯಾಂಕರ್ ಇಲ್ಲವೆ ಕ್ಲೋರಿನ್, ಸಂಯುಕ್ತ ಅಮ್ಲಗ್ಗಳಿಂದ ಕೂಡಿದ, ಒತ್ತಡ ತುಂಬಿದ ಅಪಾಯಕಾರಿ ಪೆಟ್ರೋಲಿಯಂ ಮತ್ತು ರಾಸಾಯನಿಕ ವಸ್ತುಗಳನ್ನು ಹೊತ್ತು ಸಾಗುವ ಸಾರಿಗೆ ವಾಹನಗಳು ಆಕಸ್ಮಿಕ ತೊಂದರೆಯನ್ನೂ ತಮ್ಮ ಜೊತೆಯಲ್ಲಿಯೇ ಹೊತ್ತು ಸಾಗುತ್ತವೆ. ಅವುಗಳು ಸ್ಫೋಟಗೊಂಡು, ಅಕಸ್ಮಾತ್ತಾಗಿ ಹೊತ್ತಿ ಉರಿಯುವುದರ ಜೊತೆಗೆ, ಟ್ಯಾಂಕರ್‌ಗಳಲ್ಲಿನ ವಸ್ತು ನಿಯಂತ್ರಣಕ್ಕೆ ಬಾರದಂತೆ ಹರಿಯುವಾಗ ಇತರ ಸಹಾಯಕ ಉಪಕರಣಗಳ ತೊಂದರೆಯಿಂದಲೂ ಅಪಾಯ ಸಂಭವಿಸುವ ಸಾಧ್ಯತೆಯಿದೆ. ಆದಕಾರಣ ಆ ಬಗೆಯ ವಾಹನ ನಡೆಸಲು ವಿಶೇಷ ತರಬೇತಿ ಪಡೆದ ಚಾಲಕರ ಅವಶ್ಯಕತೆಯಿದೆ.

ಅಪಾಯಕಾರಿ ಉತ್ಪನ್ನಗಳನ್ನು ಸಾಗಿಸುವ ವಾಹನ ಚಾಲಕನು ಆ ಬಗೆಯ ವಾಹನ ಚಾಲನೆ ಮಾಡಲು ವಿಶೇಷ ತರಬೇತಿ ಪಡೆದ ನಂತರ ಆ ಅರ್ಹತಾ ಪತ್ರದ ಆಧಾರದ ಮೇಲೆ ಆ ಬಗೆಯ ವಾಹನ ಚಾಲನಾ ಲೈಸನ್ಸನ್ನು ಪಡೆಯಲು ಕಲಿಕೆ ಲೈಸನ್ಸು ನೀಡಲಾಗುವುದು. ಅನಂತರ ಪರೀಕ್ಷೆಯಲ್ಲಿ ಉತ್ತೀರ್ಣನಾದ ಮೇಲೆ ಖಾಯಂ ಲೈಸನ್ಸು ನೀಡಲಾಗುವುದು. ಆ ಖಾಯಂ ಲೈಸನ್ಸು ಒಂದು ವರ್ಷದವರೆಗೆ ಚಾಲ್ತಿಯಲ್ಲಿರುತ್ತದೆ. ಮತ್ತೆ ನವೀಕರಣ ಮಾಡುವ ಮೊದಲು ಚಾಲಕನು ಪುನಶ್ಚೇತನ ತರಬೇತಿಗಾಗಿ ಹಾಜರಾಗಿ ಅರ್ಹತಾಪತ್ರ ಪಡೆದನಂತರ ಇನ್ನೊಂದು ವರ್ಷಕ್ಕೆ ನವೀಕರಣ ಮಾಡಲಾಗುವುದು. ಟ್ಯಾಂಕರ್ ಚಾಲಕನು ತುರ್ತುಸ್ಥಿತಿಯನ್ನು ಎದುರಿಸುವ ಸಾಮರ್ಥ್ಯ ಹಾಗೂ ಅಪಾಯವನ್ನು ಕಡಿಮೆ ಮಾಡಿಕೊಳ್ಳುವ ಚಾಕಚಕ್ಯತೆಯನ್ನು ಮೈಗೂಡಿಸಿಕೊಳ್ಳಲಿ ಎಂಬುದೇ ಈ ತರಬೇತಿಯ ಉದ್ದೇಶವಾಗಿದೆ.

ಈ ವಿಶೇಷ ತರಬೇತಿ ನೀಡಲು ಮಾನ್ಯತೆ ಪಡೆದ ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ ಹಾಗೂ ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್‌ನ ಘಟಕಗಳಲ್ಲಿ ಟ್ಯಾಂಕರ್ ಚಾಲಕರು ತರಬೇತಿ ಪಡೆಯಬಹುದು.

ಟ್ಯಾಂಕರ್ ಚಾಲಕನು ಆ ವಾಹನವನ್ನು ನಿಲ್ಲಿಸಿರುವಾಗ ಆ ಸ್ಥಳ ಬೆಂಕಿ ಹತ್ತಿಕೊಳ್ಳದಂತೆ ಸುರಕ್ಷಿತವಾಗಿದೆಯೆಂದು, ಯಾವುದೇ ಇತರ ಸ್ಫೋಟಕ್ಕೆ ಅವಕಾಶವಿಲ್ಲವೆಂದು ಖಚಿತಪಡಿಸಿಕೊಳ್ಳಬೇಕು. ಆ ವಾಹನ ಯಾವಾಗಲೂ ಅವನ ಹಿಡಿತದಲ್ಲಿಯೇ ಅವನ ಮೇಲ್ವಿಚಾರಣೆಯಲ್ಲಿಯೇ ಇರಬೇಕು. ಇಲ್ಲವೇ ಪರ್ಯಾಯವಾಗಿ ಹದಿನೆಂಟು ವರ್ಷ ತುಂಬಿದ ಜವಾಬ್ದಾರಿ ವ್ಯಕ್ತಿಯನ್ನು ಅಲ್ಲಿ ಬಿಟ್ಟು ಹೋಗಬೇಕು.

ಅಪಾಯಕಾರಿಯಾದ ಸರಕು ಒಯ್ಯುವ ವಾಹನಗಳ ಮೇಲೆ ಬಳಸಬೇಕಾದ ಚಿನ್ಹೆಗಳು




ಕ್ರಿಯಾಕಾರಿ
ವಾಹಕ
5
ಸಾವಯವ
ಪೆರಾಕ್ಸೈಡ್
5
ವಿಷ
6
ಸೋಂಕು
ಪದಾರ್ಥ
6
ಅಪಾಯಕಾರಿ ಆಹಾರ
ಪದಾರ್ಥಗಳಿಂದ
ದೂರವಿಡಿ
6
ವಿಕಿರಣ ಶೀಲ
ಅನಗತ್ಯವಾಗಿ ಈ ವಾಹನದೊಳ
ಗಾಗಲೀ ಸಮೀಪದಲ್ಲಾಗಲೀ
ಇರಬೇಡಿ
7
ಕ್ಷಾರೀಯ
8

ಅಪಾಯಕಾರಿ ಹಾಗೂ ಸ್ಫೋಟಕ ಪೆಟ್ರೋಲಿಯಂ ಮತ್ತು ರಾಸಾಯನಿಕ ಉತ್ಪನ್ನಗಳನ್ನು ಸಾಗಿಸುವ ಟ್ಯಾಂಕರ್ ವಾಹನದ ಮೂರುಬದಿಗೆ ವಜ್ರಾಕೃತಿಯ ಚಿಹ್ನೆಗಳನ್ನು ಪ್ರದರ್ಶಿಸಿ ಆ ಅಪಾಯಕಾರಿ ವಸ್ತುವಿನ ಹೆಸರು, ಅದರ ಸ್ವರೂಪ, ಅದು ಸ್ಫೋಟಕವೆ, ನಾಶಕಾರಿಯೆ, ಸುಲಭವಾಗಿ ಉರಿಹೊತ್ತಿಕೊಳ್ಳುವುದೆ, ವಿದ್ಯುತ್ ವಿಕಿರಣ ಕ್ರಿಯಾಶಕ್ತವಾದುದೆ ಎಂದು ತಿಳಿಸುವ ಸಚಿತ್ರ ಎಚ್ಚರಿಕೆ ಭಿತ್ತಿಪತ್ರವಿರಬೇಕು. ಆ ಬಗೆಯ ವಾಹನ ಚಾಲಕನಿಗೆ ಸಾಗಣೆ ತುರ್ತುಸ್ಥಿತಿಕಾರ್ಡ್ ನೀಡಿ; ಆ ವಾಹನದಲ್ಲಿ ತುಂಬಿರುವ ಸರಕು, ಅದರ ವಿವರ, ಅದರಿಂದ ಆಗಬಹುದಾದ ಆಕಸ್ಮಿಕ ತೊಂದರೆ, ಅನಾಹುತ ಸಂಭವಿಸಿದರೆ ಮಾಡಬೇಕಾದ ತುರ್ತುಕೆಲಸದ ಸಂಪೂರ್ಣ ವಿವರ ಮತ್ತು ಕೂಡಲೇ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ ಇರಬೇಕು.

೧೯. ಕುಡಿತ ಮತ್ತು ಮಾದಕ ದ್ರವ್ಯ ಸೇವನೆಯ ದುಷ್ಪರಿಣಾಮಗಳು

ಚಾಲಕ ತನ್ನ ಪಂಚೇಂದ್ರಿಯಗಳನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿದ್ದಾಗ ಮಾತ್ರ ತಾನು ನಡೆಸುವ ವಾಹನದ ಹತೋಟಿಯನ್ನು ಸಾಧಿಸಲು ಸಾಧ್ಯ. ಕುಡಿದಿದ್ದಾಗ ಅಥವಾ ಮಾದಕವಸ್ತುಗಳ ಪ್ರಭಾವಕ್ಕೊಳಗಾಗಿದ್ದಾಗ ಅವನಿಗೆ ತನ್ನ ದೇಹ ಮತ್ತು ಮನಸ್ಸುಗಳ ಮೇಲಣ ಹತೋಟಿ ತಪ್ಪಿಹೋಗಿರುತ್ತದೆ. ಏನೋ ಅರ್ಧಂಬರ್ಧ ಪ್ರಜ್ಞೆಯಲ್ಲಿ ಯಾವುದೋ ಅಭ್ಯಾಸಬಲದ ಮೇಲೆ ಮುಂದಕ್ಕೆ ಸಾಗುತ್ತಿರುತ್ತಾನೆ. ಅನಿರೀಕ್ಷಿತವಾಗಿ ಬಂದೊದಗುವ ಅಪಘಾತದ ಕ್ಷಣಗಳನ್ನು ಆವನು ತನ್ನ ವಿವೇಚನೆಯಿಂದ ತಪ್ಪಿಸಿಕೊಳ್ಳಲಾರದೆ ಆಗಿಂದಾಗಲೇ ಅವುಗಳಿಗೆ ತುತ್ತಾಗುತ್ತಾನೆ. ಆದಕಾರಣ 'ಮಾದಕ ವಸ್ತುಗಳ ಪ್ರಭಾವಕ್ಕೊಳಗಾಗಿದ್ದಾಗ ವಾಹನವನ್ನು ನಡೆಸಬಾರದು' ಎಂಬ ಸರಳ ನೀತಿಯನ್ನು ಪ್ರತಿಯೊಬ್ಬ ಚಾಲಕನೂ ಅನುಸರಿಸಬೇಕು. ನಿದ್ದೆಗೆಟ್ಟಿದ್ದಾಗ, ಅತಿಯಾದ ಆಯಾಸಕ್ಕೆ ತುತ್ತಾಗಿದ್ದಾಗ ವ್ಯಕ್ತಿಯ ಮೈ ಮನಸ್ಸುಗಳು ಅವನ ಹತೋಟಿಯಲ್ಲಿರುವುದಿಲ್ಲ. 'ನಿದ್ದೆಗೆಟ್ಟೆಯೊ ಬುದ್ಧಿಗೆಟ್ಟೆಯೋ' ಎಂಬ ಗಾದೆಯಿದೆ. ಆಗಲೂ ವಾಹನ ನಡೆಸಲು ಹೋಗಬಾರದು.

ಕುಡಿದು ಅಥವಾ ಮಾದಕ ವಸ್ತುಗಳ ಪ್ರಭಾವಕ್ಕೊಳಗಾಗಿದ್ದಾಗ ವಾಹನ ಚಾಲನೆ ಮಾಡುವವನಲ್ಲಿ ಸಾಮಾನ್ಯವಾಗಿ ಕಾಣುವ ದೋಷಗಳು ಈ ಕೆಳಕಂಡಂತಿವೆ.

೧. ವಾಹನವನ್ನು ವಿರುದ್ಧ ಪಥದಲ್ಲಿ ನಡೆಸುವುದು.

೨. ಕಾಲು ಹಾದಿಯ ಮೇಲೆ ವಾಹನವನ್ನು ನಡೆಸುವುದು.

೩. ಹಾವಿನ ಚಲನೆಯ ರೀತಿ ವಾಹನವನ್ನು ನಡೆಸುವುದು.

೪. ಅತಿ ವೇಗವಾಗಿ ಅಥವಾ ಅತಿ ನಿಧಾನವಾಗಿ ವಾಹನವನ್ನು ನಡೆಸುವುದು.

೫. ಸೂಕ್ತವಾದ ಕೈ ಸಂಕೇತ ಅಥವಾ ವಿದ್ಯುತ್ ದಿಕ್ಸೂಚಕಗಳ ಸಂಕೇತ ನೀಡದಿರುವುದು ಮತ್ತು ನಿಲ್ಲುವ ಸೂಚನೆ ನೀಡಿದರೂ ನಿಲ್ಲದೆ ವಾಹನವನ್ನು ನಡೆಸಿಕೊಂಡು ಹೋಗುವುದು.

ವಾಹನ ಚಾಲಕನು ಮಾದಕ ದ್ರವ್ಯಗಳ ಪ್ರಭಾವಕ್ಕೆ ತುತ್ತಾಗಿ ವಾಹನವನ್ನು ಚಲಾಯಿಸುತ್ತಿದ್ದರೆ, ಅದೊಂದು ಅಪರಾಧವೇ ಸರಿ. ಆಲ್ಕೋಮೀಟರ್ ಅಥವಾ ಉಸಿರು ವಿಶ್ಲೇಷಕವು ಮದ್ಯಪಾನಕ್ಕೊಳಗಾದ ಚಾಲಕನನ್ನು ಪತ್ತೆ ಹಚ್ಚುತ್ತದೆ. ಅಂತಹ ಚಾಲಕನ ಅಪರಾಧವು ಸಾಬೀತಾದಾಗ ಅವನಿಗೆ ನ್ಯಾಯಾಲಯವು ೨,೦೦೦ ರೂಪಾಯಿಗಳ ದಂಡವನ್ನು ವಿಧಿಸುತ್ತದೆ ಅಥವಾ ಸೆರೆಮನೆಗೆ ಕಳುಹಿಸುತ್ತದೆ. ಇನ್ನೂ ಹೆಚ್ಚೆಂದರೆ ಏಕಕಾಲಕ್ಕೆ ದಂಡ ಮತ್ತು ಸೆರೆಮನೆವಾಸ ಎರಡನ್ನೂ ವಿಧಿಸುತ್ತದೆ. (ಮೋ.ವಾ.ಕಾಯ್ದೆ ೧೯೮೮, ಕಲವು ೧೮೫)

೨೦. ರಾತ್ರಿ ವಾಹನ ಚಾಲನೆ

ರಾತ್ರಿ ವಾಹನ ಚಾಲನೆ ಮಾಡುವುದು ಕಷ್ಟವೂ ಅಪಾಯಕಾರಿಯೂ ಆಗಿದೆ. ಆ ಹೊತ್ತಿನಲ್ಲಿ ಆಗುವ ಪ್ರಾಣಾಂತಕ ಅಪಘಾತಗಳ ಪ್ರಮಾಣ ಹಗಲಿನಲ್ಲಾಗುವುದಕ್ಕಿಂತ ಎರಡೂವರೆಯಷ್ಟು ಅಧಿಕವಾಗಿದೆ. ಹಾಗೆಂದು ರಾತ್ರಿ ವಾಹನ ಚಾಲನೆ ಮಾಡದೆ ಇರುವುದಕ್ಕಾಗುವುದಿಲ್ಲ. ಆದರೆ ವಹಿಸಬೇಕಾದ ಎಚ್ಚರವನ್ನು ತಿಳಿದು ಸುರಕ್ಷಿತವಾಗಿರಲು ಪ್ರಯತ್ನಿಸಬೇಕು.

ರಾತ್ರಿಯಲ್ಲಿ ನಿಧಾನವಾಗಿ ವಾಹನ ನಡೆಸುವುದರಿಂದ ಕಣ್ಣಳತೆಗೆ ಸಿಗುವ ಇತರ ವಾಹನಗಳನ್ನು ನೋಡುತ್ತ ಅಪಾಯ ಕಂಡಾಗ ತನ್ನ ವಾಹನವನ್ನು ಹಿಡಿತದಲ್ಲಿಟ್ಟುಕೊಳ್ಳಬಹುದು. ಚಾಲಕನು ಹೆಡ್‌ಲೈಟ್ ಇರುವುದು ತನಗೆ ಮಾತ್ರ ಎಂದು ತಿಳಿಯದೆ, ತನ್ನದೊಂದು ವಾಹನ ರಸ್ತೆಯ ಮೇಲೆ ಓಡುತ್ತಿದೆ ಎಂಬುದನ್ನು ತಿಳಿಸಿಕೊಡಲು ಅದು ಇದೆ ಎಂದು ತಿಳಿಯಬೇಕು.

ಅತಿಹೆಚ್ಚು ವೋಲ್ಟೇಜ್‌ನ ಬಲ್ಬು ಮತ್ತು ಹೆಚ್ಚು ವೋಲ್ಟೇಜ್‌ನ ಅನಿಲ (Gaseous) ಲೈಟ್‌ನಿಂದ ತೀವ್ರ ಪ್ರಕಾಶ ಉಂಟಾಗುತ್ತದೆ. ಎದುರು ಬರುವ ವಾಹನಕ್ಕೆ ಅತೀವ ಪ್ರಕಾಶವೇ ಮಬ್ಬು ಉಂಟಾಗುವಂತೆ ಮಾಡುತ್ತದೆ. ಅದರಿಂದ ಎದುರುಗಡೆ ವಾಹನ ಚಾಲಕನಿಗೆ ಅತಿ ಬೆಳಕಿನ ಕತ್ತಲೆ ಉಂಟಾಗಿ (Dazzling effect) ಅಪಘಾತವಾಗುತ್ತದೆ. ಇದುವಾಹನದಿಂದಾಗುತ್ತಿರುವ ಬೆಳಕಿನ ಮಾಲಿನ್ಯ. ಉತ್ತಮ ಲೈಟ್ ಎಂದರೆ ಅದರಿಂದ ಚಾಲಕನು ೧೫೫ ಮೀಟರ್ ದೂರದಲ್ಲಿರುವ ಪಾದಚಾರಿಯನ್ನು, ವಾಹನವನ್ನು ಸ್ಪಷ್ಟವಾಗಿ ಕಾಣುವಂತಿರಬೇಕು.

ಎದುರುಗಡೆಯಲ್ಲಿ ಇನ್ನೊಂದು ವಾಹನ, ಸೈಕಲ್ಲು, ಎತ್ತಿನಗಾಡಿ ಮುಂತಾದವುಗಳನ್ನು ಕಂಡಾಗ ಡಿಪ್ಪರ್ ಉಪಯೋಗಿಸಿ ತನ್ನ ವಾಹನದ ಹೆಡ್‌ಲೈಟ್‌ನ ಪ್ರಕಾಶವನ್ನು ಕುಂದಿಸಬೇಕು. ಎದುರುಗಡೆಯ ವಾಹನದ ಹೆಡ್‌ಲೈಟನ್ನು ಡಿಮ್ ಮಾಡದ ಕಾರಣ ತನಗೆ ತೀವ್ರ ಪ್ರಕಾಶದಿಂದ ಕಣ್ಣುಕುಕ್ಕಿದಂತಾದರೆ ತನ್ನ ವಾಹನವನ್ನು ಎಡಕ್ಕೆ ನಿಲ್ಲಿಸಬೇಕು. ತರುವಾಯ ಮತ್ತೆ ಮುಂದುವರಿಯುವಾಗ ಎಡಗಡೆಯಲ್ಲಿರಬಹುದಾದ ಪಾದಚಾರಿಗಳು ಮತ್ತು ನಿಧಾನವಾಗಿ ಚಲಿಸುವ ವಾಹನಗಳನ್ನು ಗಮನಿಸಬೇಕು. ಎದುರು ವಾಹನದವನು ತನ್ನ ವಾಹನದ ಹೆಡ್‌ಲೈಟಿನ ಪ್ರಕಾಶದಿಂದ ಕಣ್ಣುಕುಕ್ಕಿಸಿದನೆಂದು ಅದೇ ರೀತಿ ತಾನು ವರ್ತಿಸುವುದು ಮತ್ತು ಅವನ ಪಥಕ್ಕೆ ಎದುರಾಗಿ ಹೋಗುವುದು ಮಕ್ಕಳಾಟಿಕೆಯಾಗಿ ದುರಂತವನ್ನು ತಂದೊಡ್ಡುತ್ತದೆ. ಆದಕಾರಣ ಪ್ರತಿಯೊಬ್ಬ ಚಾಲಕನು ರಾತ್ರಿಯಲ್ಲಿ ತನ್ನ ಹಾಗೂ ಇತರರ ಸುರಕ್ಷತೆಯ ದೃಷ್ಟಿಯಿಂದ ಹೆಡ್‌ಲೈಟಿನ ಡಿಪ್ಪರನ್ನು ಬಳಸಲೇಬೇಕು. ಅದೊಂದು ಸೌಜನ್ಯಪೂರ್ಣ ನಡತೆಯಿಂದ ಅಪಘಾತಗಳಾಗುವುದನ್ನು ತಪ್ಪಿಸಬಹುದು.

ರಾತ್ರಿಯಲ್ಲಿ ವಾಹನ ನಡೆಸುವ ಮೊದಲು ಅದರ ಎಲ್ಲ ದೀಪಗಳನ್ನು ಸುಸ್ಥಿತಿಯಲ್ಲಿಟ್ಟುಕೊಂಡು ವಾಹನವನ್ನು ನಡೆಸಿದರೆ ಸುರಕ್ಷತೆಯನ್ನು ಸಾಧಿಸಬಹುದು.

೧. ಗಾಳಿತಡೆಯೆಂಬ ವಿಂಡ್‌ಸ್ಕ್ರೀನ್ ಗ್ಲಾಸನ್ನು ಶುಚಿಯಾಗಿಟ್ಟುಕೊಂಡು ತನ್ನ ಪಥದಲ್ಲಿ ವಸ್ತುಗಳನ್ನು ನೋಡುತ್ತಿರಬೇಕು.

೨. ಎದುರು ಬರುವ ವಾಹನಗಳು ತನಗೇನೂ ಪ್ರತಿಕೂಲ ಪಥದಲ್ಲಿಲ್ಲವೆ ಎಂಬುದನ್ನು ಗಮನಿಸುತ್ತಲೇ ಇರಬೇಕು.

೩. ರಸ್ತೆಯ ಎಡ ಅಂಚನ್ನು ಅಥವಾ ತನ್ನ ವಾಹನದ ಮಧ್ಯಭಾಗವನ್ನು ಮಾರ್ಗದರ್ಶಿಯಾಗಿಟ್ಟುಕೊಂಡು ವಾಹನವನ್ನು ನಡೆಸಬೇಕು.

೪. ರಸ್ತೆಯಲ್ಲಿ ನಡೆದಾಡುವ ಪಾದಚಾರಿಗಳು ಮತ್ತು ನಿಂತಿರುವ ವಾಹನಗಳ ಕಡೆಗೆ ವಿಶೇಷವಾಗಿ ಗಮನಕೊಡಬೇಕು.

೫. ಯಾವುದೇ ಕಾರಣದಿಂದಲೂ ರಸ್ತೆಯ ಮಧ್ಯದಲ್ಲಿ ವಾಹನವನ್ನು ನಿಲ್ಲಿಸಬಾರದು.

೬. ಡ್ರೈವರ್ ಕ್ಯಾಬಿನ್‌ನಲ್ಲಿ ಕಿಟಕಿಗಳನ್ನು ಮುಚ್ಚಿರುವಾಗ ಇತರರು ಬೀಡಿ, ಸಿಗರೇಟು ಸೇದಲು ಅವಕಾಶ ಕೊಡಬಾರದು. ಅದರ ವಿಪರೀತ ಹೊಗೆಯಿಂದ ಉಸಿರುಗಟ್ಟುವಂತಾಗಿ ಚಾಲಕನ ದೃಷ್ಟಿಯನ್ನು ಮಂದವಾಗಿಸಬಹುದು ಮತ್ತು ಅವನ ಏಕಾಗ್ರತೆಗೆ ಭಂಗವುಂಟಾಗಬಹುದು.

೭. ರೇಡಿಯೋ, ಟೇಪ್ ರೆಕಾರ್ಡರ್‌ಗಳನ್ನು ಬಳಸಬಾರದು, ಮೊಬೈಲ್ ಬಳಸಬಾರದು. ಕೆಲವು ಚಾಲಕರು ವಾಹನವನ್ನು ನಿಶ್ಚಿತವೇಗದಲ್ಲಿ ನಡೆಸುತ್ತಿರುವ ಹೊತ್ತಿನಲ್ಲಿಯೇ; ರಾತ್ರಿ ಹೊತ್ತಿನಲ್ಲಾಗಲಿ, ಇತರ ಹೊತ್ತಿನಲ್ಲಾಗಲಿ ಸ್ಟೀರಿಂಗ್ ಕೈ ಬಿಟ್ಟು ಬೀಡಿ ಸಿಗರೇಟು ಹತ್ತಿಸಿಕೊಳ್ಳುವುದು, ಟೇಪ್‌ರೆಕಾರ್ಡ್‌ರಿನ ಟೇಪನ್ನು ಬದಲಾಯಿಸುವುದು, ಮೊಬೈಲ್ ಉಪಯೋಗಿಸುವುದು ಮೊದಲಾದ ಉಪಕಾರ್ಯಗಳನ್ನು ಮಾಡಲು ಹೋಗುವರು. ಹಾಗೆ ಮಾಡುವುದು ಅಪಾಯ.

೮. ಚಾಲಕನು ರಾತ್ರಿ ಹೊತ್ತಿನಲ್ಲಾಗಲಿ, ಇತರ ಹೊತ್ತಿನಲ್ಲಾಗಲಿ ವಾಹನವನ್ನು ನಡೆಸುವಾಗ ತನ್ನ ವಾಹನದಲ್ಲಿ ಕುಳಿತಿರುವ ಯಾರೊಡನೆಯೂ ಅಗತ್ಯಕ್ಕಿಂತ ಹೆಚ್ಚು ಮಾತನಾಡಬಾರದು. ಇತರರು ಮಾತನಾಡುತ್ತಿದ್ದರೆ ಅದನ್ನು ಕೇಳಿಯೂ ಕೇಳಿಸಿಕೊಳ್ಳದಂತೆ ತನ್ನ ಪಥದಲ್ಲಿ ಏಕಾಗ್ರ ಮನಸ್ಕನಾಗಿರಬೇಕು.

೨೧. ಸುರಕ್ಷತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ರೂಪಿಸಿದ ವಾಹನ

ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳನ್ನು ಹೊರತುಪಡಿಸಿ ಮಿಕ್ಕ ಎಲ್ಲಾ ವಾಹನಗಳನ್ನು ಸುರಕ್ಷತೆಯ ದೃಷ್ಟಿಯಿಂದ ವಾಹನ ತಯಾರಕರು ಈ ಕೆಳಗೆ ಸೂಚಿಸಿರುವ ರೀತಿಯಲ್ಲಿ ತಯಾರಿಸಬೇಕಾಗಿದೆ.

೧. ಚಾಲಕನಿಗೆ ಮುಂದೆ ಮತ್ತು ಹಿಂದೆ ಕುಳಿತುಕೊಳ್ಳುವ ವ್ಯಕ್ತಿಗಳಿಗೆ ಸುರಕ್ಷಾ ಬೆಲ್ಟನ್ನು ಒದಗಿಸಬೇಕು.

೨. ಕುಸಿದು ಬೀಳುವ ಸ್ಟೀರಿಂಗ್ ಕಾಲಂ ಅಳವಡಿಸಬೇಕು. ಇದರಿಂದ ಅಪಘಾತವಾದ ಸನ್ನಿವೇಶದಲ್ಲಿ ಸ್ಟೀರಿಂಗ್ ಚಕ್ರವೇ ಚಾಲಕನ ಎದೆಗೆ ಬಡಿದು ಅವನು ನುಗ್ಗಿನುರಿಯಾಗುವುದು ತಪ್ಪುತ್ತದೆ.

೩. ಹೊರ ಚಾಚಿಕೊಂಡಿರುವ ಗುಬಟುಗಳಿಲ್ಲದ ಮೆತ್ತನೆಯ ಡ್ಯಾಷ್ ಬೋರ್ಡ್ ಅನ್ನು ತಯಾರಿಸಬೇಕು. ಇಲ್ಲಿಯೂ ಮೇಲಿನಂತೆಯೇ ಅಪಘಾತಗಳಾದಾಗ ಚಾಲಕನಿಗೆ ಮತ್ತು ಅವನ ಪಕ್ಕ ಕುಳಿತವನಿಗೆ ಅವುಗಳಿಂದ ಆಗಬಹುದಾದ ಘಾಸಿ ತಪ್ಪುತ್ತದೆ.

೪. ಎದುರಿನ ವಾಹನದಿಂದ ಕಣ್ಣುಕುಕ್ಕುವ ಬೆಳಕು ಬಿದ್ದಾಗ ಆ ಬೆಳಕಿಗೆ ತಂತಾನೆ ಮಂದಬೆಳಕು ಬೀರುವಂತಾಗುವ ಸ್ವಯಂಚಾಲಿತ ಡಿಪ್ಪರ್ (Auto dipper) ಅನ್ನು ಎಲ್ಲ ವಾಹನಗಳಿಗೂ ಅಳವಡಿಸಬೇಕು. ಇದರಿಂದ ರಾತ್ರಿವೇಳೆಯಲ್ಲಿ ಡಿಪ್ಪರ್ ಬಳಸದೆ ಅಪಘಾತಕ್ಕೆ ಕಾರಣವಾಗುತ್ತಿರುವ ಕೆಟ್ಟ ಪ್ರಕರಣ ಇಲ್ಲದಂತಾಗುತ್ತದೆ. (ಕೇಂ.ಮೋ.ವಾ. ನಿಯಮ ೧೯೮೯, ಕಲಮು ೧೨೫)

ದೀಪಗಳು

ಮೋಟಾರು ವಾಹನಕ್ಕೆ ದೀಪಗಳನ್ನು ಮೋಟಾರು ವಾಹನದ ನಿಯಮದ ಪ್ರಕಾರವೇ ಜೋಡಿಸಬೇಕು. ಹಿಂಭಾಗಕ್ಕೆ ಕೆಂಪು ಬೆಳಕಿನ ದೀಪವನ್ನು, ಮುಂಭಾಗಕ್ಕೆ ಬಿಳಿಯ ಬೆಳಕಿನ ದೀಪವನ್ನು ಜೋಡಿಸಬೇಕು. ಯಾವುದೇ ಸಂದರ್ಭದಲ್ಲಿಯೂ ಮುಂಭಾಗದಲ್ಲಿ ಕೆಂಪು ದೀಪವನ್ನು ಬೆಳಗಿಸುವಂತಿಲ್ಲ. ಹೆಡ್‌ಲೈಟ್‌ನಲ್ಲಿ ಸ್ವಯಂಚಾಲನ ಡಿಪ್ಪರ್ ಅಳವಡಿಸಬೇಕು.

ಉಜ್ವಲ ಪ್ರಕಾಶದ, ಯಾವ ಕಡೆಗೆಬೇಕಾದರೂ ತಿರುಗಿಸಿ ಪ್ರಬಲ ಪ್ರಕಾಶವನ್ನು ಬೀರಬಲ್ಲ ಶೋಧನಾದೀಪ ಮತ್ತು ಮೋಜು ದೀಪಗಳನ್ನು ನಿಷೇಧಿಸಲಾಗಿದೆ.

ಹಿನ್ನೋಟದ ಕನ್ನಡಿ

ಪ್ರತಿವಾಹನದಲ್ಲಿಯೂ ವಾಹನ ಚಾಲಕನಿಗೆ ಹಿಂಭಾಗದ ವಾಹನ ಸಂಚಾರ ಸ್ಪಷ್ಟವಾಗಿ ಕಾಣುವಂತೆ ಹಿನ್ನೋಟದ ಕನ್ನಡಿಯನ್ನು ಅಳವಡಿಸಬೇಕು. ಅದನ್ನು ಚಾಲಕನ ಮೂರನೆಯ ಕಣ್ಣು ಎಂದು ಕರೆಯುತ್ತಾರೆ.

ಪ್ರತಿಫಲಕಗಳು

ಇವು ಬೆಕ್ಕಿನ ಕಣ್ಣಿನಂತಹ ಪ್ರತಿಫಲನಗುಣ ಹೊಂದಿದ್ದು, ಇವುಗಳ ಮೇಲೆ ಬೆಳಕುಬಿದ್ದಾಗ ಪ್ರತಿಫಲಿಸಿ ವಾಹನವು ಕಾಣುವಂತೆ ಮಾಡುತ್ತವೆ. ಇವುಗಳನ್ನು ಕ್ಯಾಟ್ಸ್ ಐ ರಿಫ್ಲೆಕ್ಟರ್ ಎಂದು ಕರೆಯುವರು. ಇದರಿಂದ ಮುಂದೆ ವಾಹನವಿರುವುದು ಗೊತ್ತಾಗಿ ಅಪಘಾತವಾಗುವುದು ತಪ್ಪುತ್ತದೆ. ಆದಕಾರಣ ಸಾರಿಗೆ ವಾಹನಗಳ ಮುಂಭಾಗದ ಬಲ ಮತ್ತು ಎಡಭಾಗದಲ್ಲಿ ಎರಡು ಬಿಳಿ ಪ್ರತಿಫಲಕಗಳನ್ನು ಮತ್ತು ಹಿಂಭಾಗದಲ್ಲಿ ಅದೇ ರೀತಿ ಎರಡು ಕೆಂಪು ಪ್ರತಿಫಲಕಗಳನ್ನು ಅಳವಡಿಸಬೇಕು.

ಸುರಕ್ಷತಾ ಗಾಜುಗಳು

ಮೋಟಾರು ವಾಹನದಲ್ಲಿ ಗಾಳಿತಡೆಯೆಂಬ ವಿಂಡ್‌ಸ್ಕ್ರೀನ್‌ಗಾಜುಗಳು ಮತ್ತು ಎಲ್ಲ ಕಿಟಕಿಯ ಗಾಜುಗಳು ಪರಿಶುದ್ಧ ಪಾರದರ್ಶಕಗಳಾಗಿರಬೇಕು. ವರ್ಣಛಾಯೆಯ, ದೃಷ್ಟಿಯನ್ನು ತಡೆಯುವ ಗಾಜುಗಳನ್ನು ಉಪಯೋಗಿಸಬಾರದು.

೨೨. ರಸ್ತೆಯ ಸುರಕ್ಷತಾ ಸಪ್ತಾಹ

ಪೊಲೀಸಿನವರು ಮತ್ತು ಮೋಟಾರು ವಾಹನಗಳ ಇಲಾಖೆಯವರು ಜನರಲ್ಲಿ ರಸ್ತೆ ಸುರಕ್ಷತೆಯ ಬಗ್ಗೆ ಅರಿವು ಮೂಡಿಸಲು ಮತ್ತು ವಿಶೇಷವಾಗಿ ಮಕ್ಕಳಲ್ಲಿ ಸಂಚಾರಪ್ರಜ್ಞೆ ಬೆಳೆಯಲು ವರ್ಷಕ್ಕೊಮ್ಮೆ 'ರಸ್ತೆ ಸುರಕ್ಷತಾ ಸಪ್ತಾಹ'ವನ್ನು ಆಚರಿಸುತ್ತಾರೆ. ಆ ಸಪ್ತಾಹದಲ್ಲಿ ಸಾರ್ವಜನಿಕರ, ಮಕ್ಕಳ ಮತ್ತು ಎಲ್ಲ ಬಗೆಯ ವಾಹನ ಚಾಲಕರ ತಿಳಿವಳಿಕೆಗಾಗಿ ರಸ್ತೆ ಸುರಕ್ಷತೆ ಕುರಿತು ಭಿತ್ತಿ ಪತ್ರಗಳನ್ನು ಪ್ರದರ್ಶಿಸುತ್ತಾರೆ, ಕರಪತ್ರಗಳನ್ನು ಹಂಚುತ್ತಾರೆ. ಮಕ್ಕಳಲ್ಲಿ ಸಂಚಾರ ಪ್ರಜ್ಞೆ, ರಸ್ತೆ ಸುರಕ್ಷತಾ ತಿಳಿವಳಿಕೆ ಬೆಳೆಯಬೇಕೆಂದು; ಆ ವಿಷಯಕ್ಕೆ ಸಂಬಂಧಿಸಿದಂತೆ ಪ್ರಬಂಧ ಸ್ಪರ್ಧೆ, ಆಶುಭಾಷಣ ಸ್ಪರ್ಧೆ, ಸ್ಥಳದಲ್ಲಿಯೇ ಚಿತ್ರಬಿಡಿಸುವ ಸ್ಪರ್ಧೆ ಏರ್ಪಡಿಸಿ ಬಹುಮಾನಗಳನ್ನು ನೀಡಿ ಪ್ರೋತ್ಸಾಹಿಸುತ್ತಾರೆ. ಅವರಿಗೆ ವಾಹನ ಮತ್ತು ಅಪಘಾತ, ಸಂಚಾರ ಮತ್ತು ಸುರಕ್ಷತೆ ಕುರಿತು ಚಲನಚಿತ್ರಗಳನ್ನು ತೋರಿಸಿ, ಪರಿಣತರಿಂದ ಉಪನ್ಯಾಸಗಳನ್ನು ಏರ್ಪಡಿಸುತ್ತಾರೆ. ಸೇಂಟ್ ಜಾನ್ ಆಂಬುಲೆನ್ಸ್ ಅಸೋಸಿಯೇಷನ್ ಅವರಿಂದ ಪ್ರಥಮ ಚಿಕಿತ್ಸೆಗೆ ಸಂಬಂಧಿಸಿದ ಉಪನ್ಯಾಸವನ್ನು, ಪ್ರಾತ್ಯಕ್ಷಿಕೆಯನ್ನು ಏರ್ಪಡಿಸುತ್ತಾರೆ. ಇದೊಂದು ಜನಾಂದೋಲನವಾಗಲು ಖಾಸಗಿ ಹಾಗೂ ವಾಣಿಜ್ಯ ಸಂಸ್ಥೆಗಳ ಸಹಕಾರದಿಂದ ಕಾರ್ಯಕ್ರಮವನ್ನು ರೂಪಿಸಿ, ಜನರನ್ನು ಎಚ್ಚರಿಸುವ ಪ್ರಯತ್ನ ಮಾಡುತ್ತಾರೆ. ರಸ್ತೆ, ಸಂಚಾರ, ಚಿಹ್ನೆಗಳು, ಸಂಕೇತಗಳು, ಅಪಘಾತಗಳು, ವಾಹನ ವಿಮೆ, ರಸ್ತೆ ನಿಯಮಗಳು ಮತ್ತು ನಿಬಂಧನೆಗಳು ಹಾಗೂ ಪ್ರಥಮ ಚಿಕಿತ್ಸೆ ಕುರಿತು ಪ್ರದರ್ಶನವನ್ನೇರ್ಪಡಿಸುತ್ತಾರೆ.

ಜನರ ಮನಸ್ಸಿಗೆ ತಟ್ಟುವ ಈ ಕೆಳಗೆ ಸೂಚಿಸಿರುವಂತಹ ಕೆಲವು ಸುರಕ್ಷಾ ತಿಳಿವಳಿಕೆ ಘೋಷಣೆಗಳನ್ನು ಪ್ರದರ್ಶಿಸುತ್ತಾರೆ.

೧. ಆತುರವೇ ಅಪಘಾತಕ್ಕೆ ಕಾರಣ.

೨. ರಸ್ತೆಯ ಮೇಲೆ ಗಮನ ಸುಖಸಂಚಾರಕ್ಕೆ ಸೋಪಾನ.

೩. ಸಂಪನ್ನ ಚಾಲಕನೇ ದೇಶದ ಸಂಪತ್ತು.

೪. ಮುನ್ನೆಚ್ಚರಿಕೆ ಮರಣವನ್ನು ಗೆಲ್ಲುತ್ತದೆ.

೫. ವೇಗಶೀಲತೆಯ ರೋಮಾಂಚನ ಯಮನಿಗೆ ಆಮಂತ್ರಣ.

೬. ಕುಡಿತದಮತ್ತು ಸಾವಿಗೆ ತುತ್ತು.

೭. ಸಂಚಾರ ಚಿಹ್ನೆ ಜಾಗತಿಕ ಚಿಹ್ನೆ.

೮. ಸಂಚಾರ ಪ್ರಜ್ಞೆಯೇ ಸಾಮಾಜಿಕ ಪ್ರಜ್ಞೆ.

ಆಟೋರಿಕ್ಷಾ, ಟ್ಯಾಕ್ಸಿ, ಲಾರಿ, ಬಸ್ಸುಗಳ ಚಾಲಕರಿಗೆ ಪುನಶ್ಚೇತನ ತರಬೇತಿಯ ರೀತಿಯಲ್ಲಿ ವಿಶೇಷ ಉಪನ್ಯಾಸಗಳನ್ನು ಏರ್ಪಡಿಸುತ್ತಾರೆ. ಆ ಚಾಲಕರಿಗಾಗಿ ಕಣ್ಣು ಪರೀಕ್ಷೆಯನ್ನು ನೇತ್ರವೈದ್ಯರಿಂದ ಮಾಡಿಸಿ ಸೂಕ್ತ ಮಾರ್ಗದರ್ಶನ ನೀಡುತ್ತಾರೆ.

ಎಲ್ಲ ವರ್ಗದ ಮೋಟಾರು ವಾಹನಗಳ ಹೊಗೆಯ ಪ್ರಮಾಣದ ಪರೀಕ್ಷಾ ವ್ಯವಸ್ಥೆಯನ್ನು ಕೈಗೊಂಡು ದೋಷಪೂರಿತವಾದ ವಾಹನದ ಚಾಲಕ/ಮಾಲೀಕರಿಗೆ ವಾಹನವನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಲು ಮಾರ್ಗದರ್ಶನ ಮಾಡುತ್ತಾರೆ.

ವಾಹನವನ್ನು ನಡೆಸುತ್ತಿರುವಾಗ ಮೊಬೈಲ್ ಫೋನ್ ಮಾಡಬಾರದು. ಸಂಭಾಷಣೆಯಲ್ಲಿ ತೊಡಗಬಾರದು. ಸಂಗೀತವನ್ನು ಕೇಳಬಾರದು. ದೂರದರ್ಶನವನ್ನು ವೀಕ್ಷಿಸಬಾರದು ಎಂಬ ಎಚ್ಚರಿಕೆ ನೀಡುತ್ತಾರೆ.

ಪಾದಚಾರಿಗಳು ಮತ್ತು ಮಕ್ಕಳಿಗೆ ಜೀಬ್ರಾಪಟ್ಟೆಯಲ್ಲಿ ರಸ್ತೆ ದಾಟುವಂತೆಯೂ, ಜೀಬ್ರಾ ಪಟ್ಟೆಯಿಲ್ಲದ ಕಡೆ 'ನಿಲ್ಲು, ಬಲಕ್ಕೆ ನೋಡು, ಎಡಕ್ಕೆ ನೋಡು, ಮತ್ತೆ ಬಲಕ್ಕೆ ನೋಡು. ಯಾವುದೂ ವಾಹನ ಬರುತ್ತಿಲ್ಲ. ರಸ್ತೆ ಸುಗಮ. ಈಗ ನಡಿ' ಎಂದು ಕವಾಯಿತು ರೀತಿಯಲ್ಲಿ ಅಭ್ಯಾಸ ನೀಡುವ ಕೆಲಸವನ್ನು ಮಾಡುತ್ತಾರೆ.

ಸೈಕಲ್ ಸವಾರರಿಗೆ ತಮ್ಮನ್ನು ಎಳೆದುಕೊಂಡು ಹೋಗುವಂತೆ ಲಾರಿ, ಬಸ್ಸುಗಳನ್ನು ಹಿಡಿದು ಹೋಗಬಾರದು ಎಂದು ತಿಳಿವಳಿಕೆ ನೀಡುತ್ತಾರೆ. ಅವರ ಸೈಕಲ್ಲಿನ ಹಿಂದಿನ ಚಕ್ರದ ಮಡ್‌ಗಾರ್ಡ್‌ಗೆ ಬಿಳಿಬಣ್ಣ ಬಳಿದು ಅದು ರಾತ್ರಿ ಹೊತ್ತಿನಲ್ಲಿ ಹಿಂದಿನಿಂದ ಬರುವ ವಾಹನ ಚಾಲಕರಿಗೆ ಕಾಣಲು ಸಹಾಯವಾಗುತ್ತದೆ ಎಂಬ ಅರಿವು ಮೂಡಿಸುವ ಕೆಲಸ ಮಾಡುತ್ತಾರೆ.

ಅವಿದ್ಯಾವಂತ ಗ್ರಾಮಾಂತರ ಜನರಲ್ಲಿ ಸಂಚಾರ ಸುರಕ್ಷತಾ ಪ್ರಜ್ಞೆ ಬೆಳೆಯಬೇಕೆಂದು ಅವರ ಎತ್ತಿನ ಗಾಡಿಗಳ ಹಿಂಭಾಗಕ್ಕೆ ಕೆಂಪು ಪ್ರತಿಫಲಕಗಳನ್ನು ಅಳವಡಿಸುತ್ತಾರೆ. ರಾತ್ರಿ ವೇಳೆಯಲ್ಲಿ ಹಿಂದಿನಿಂದ ಬರುವ ವಾಹನದ ಬೆಳಕಿನಿಂದ ಅದು ಪ್ರತಿಫಲನಗೊಳ್ಳುವುದರಿಂದ ಎತ್ತಿನಗಾಡಿಗೆ ಅಪಘಾತವಾಗುವುದು ತಪ್ಪುತ್ತದೆ ಎಂಬ ತಿಳಿವಳಿಕೆ ನೀಡುತ್ತಾರೆ.

ಪೊಲೀಸಿನವರು ೧೯೭೭ರಲ್ಲಿ ಬೆಂಗಳೂರಿನಲ್ಲಿ ಶಾಲಾ ಮಕ್ಕಳಲ್ಲಿ ಸಂಚಾರ ಪ್ರಜ್ಞೆ ಬೆಳೆಸುವ ಸಲುವಾಗಿ 'ರಸ್ತೆ ಸುರಕ್ಷತೆಯ ವಿದ್ಯಾರ್ಥಿ ಸಂಘ' SARC (Student Association for Road Safety) ಯನ್ನು ಸ್ಥಾಪಿಸಿದರು. ಆ ಸಂಘದ ಶಾಖೆಗಳು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿವೆ. ಆ ಸಂಘವು ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ, ವೃತ್ತಗಳಲ್ಲಿ ಸಂಚಾರ ಸಂಕೇತ ನೀಡುವುದರ ಬಗ್ಗೆ ತರಬೇತಿ ನೀಡಿ ಅವರನ್ನು ವೈಯಕ್ತಿಕವಾಗಿ ಸಂಚಾರವನ್ನು ಹತೋಟಿಗೆ ತರಲು ಸಂಚಾರ ಮಾರ್ಗದರ್ಶಿಗಳಾಗಲು ನಿಯೋಜಿಸುತ್ತದೆ.

೨೩. ಐದು ವರ್ಷದ ಒಳಗಿನ ಪುಟ್ಟ ಮಕ್ಕಳು

ರಸ್ತೆಯಲ್ಲಿ ಪುಟ್ಟ ಮಕ್ಕಳ ರಕ್ಷಣೆ ತಂದೆ–ತಾಯಿಗಳ/ಪೋಷಕರ ಹೊಣೆಯಾಗಿದೆ. ಪುಟ್ಟ ಮಕ್ಕಳು ಎಲ್ಲವನ್ನೂ ಹೊಸದಾಗಿ ಕಾಣುವುದರಿಂದ, ಎಲ್ಲದರ ಬಗ್ಗೆ ಕುತೂಹಲಗೊಂಡು ಆಕರ್ಷಿತರಾಗುವುದರಿಂದ ಇಂದಿನ ಮೋಟಾರು ವಾಹನ ಜಗತ್ತಿನಲ್ಲಿ ಅವರನ್ನು ಸಂಚಾರ ವ್ಯವಸ್ಥೆಗೆ ಅಣಿಗೊಳಿಸುವಾಗ ತುಂಬಾ ಎಚ್ಚರಿಕೆಯಿಂದಿರಬೇಕು. ಪುಟ್ಟ ಮಕ್ಕಳು ಆ ಕಡೆ ಈ ಕಡೆ ನೋಡದೆ ಇದ್ದಕ್ಕಿದ್ದ ಹಾಗೆ ರಸ್ತೆಗೆ ನುಗ್ಗುತ್ತಾರೆ. ಅವರು ತಮ್ಮ ಪುಟ್ಟ ಆಕಾರದಿಂದ, ತಕ್ಷಣ ಕಣ್ಣಿಗೆ ಗೋಚರವಾಗದಿರುವುದರಿಂದ ನಿಂತಿರುವ ಕಾರು, ಬಸ್, ಲಾರಿ ಮುಂತಾದ ಕಡೆ ಅವಿತು ಕೊಂಡು ಆಟವಾಡುತ್ತ ನಿಂತರೆ ಕಾಣುವುದಿಲ್ಲ. ಸದಾ ಕುತೂಹಲದ ಆ ಮಕ್ಕಳು ಯಾವ ಕ್ಷಣಕ್ಕೆ ಏನು ಮಾಡುತ್ತಾರೆಂದು ಗೊತ್ತಾಗುವುದಿಲ್ಲ. ಆದಕಾರಣ ಆ ಮಕ್ಕಳಿಗೆ ರಸ್ತೆಯಲ್ಲಿ ನಿಂತ ವಾಹನದ ಹತ್ತಿರ ಆಡದಿರಲು ತಿಳಿಸಿ; ಪಾರ್ಕು, ತೋಟ ಅಥವಾ ಆಟದ ಮೈದಾನದಲ್ಲಿ ಆಡಲು ಹೇಳುತ್ತ ಅವರ ಜೊತೆಗೆ ಹಿರಿಯರು ಆಟವಾಡುತ್ತ ಸೂಕ್ತ ಮಾರ್ಗದರ್ಶನ ನೀಡಬೇಕು.

ರಸ್ತೆಯಲ್ಲಿ ನಡೆಯುವಾಗ ಹಿರಿಯರು ವಾಹನ ಚಲಿಸುವ ಮಗ್ಗುಲಿಗೆ ತಾವಿದ್ದು, ತಮ್ಮ ಇನ್ನೊಂದು ಮಗ್ಗುಲಲ್ಲಿ ಮಕ್ಕಳನ್ನು ನಡೆಸಿಕೊಂಡು ಹೋಗಬೇಕು. ಹಿರಿಯರು ತಾವು ರಸ್ತೆಯ ಬದಿಯಲ್ಲಿ ನಡೆಯುವಾಗ ವಾಹನ ಚಾಲಕರಿಗೆ ಕಾಣುವ ಕಾರಣದಿಂದ ಅವನು ಎಚ್ಚರ ವಹಿಸುತ್ತಾನೆ. ಮಕ್ಕಳಾದರೆ ಚಾಲಕನ ಕಣ್ಣೋಟಕ್ಕೆ ಕಾಣದೆ ಅಪಾಯ ಸಂಭವಿಸಬಹುದು. ರಸ್ತೆಯಲ್ಲಿ ಕರೆದುಕೊಂಡು ಹೋಗುವಾಗ ಆ ಪುಟ್ಟ ಮಕ್ಕಳಿಗೆ ಬಿಳಿ ಮತ್ತು ಉಜ್ವಲ ಬಣ್ಣದ ಬಟ್ಟೆ ಹಾಕುವುದರಿಂದ ಅವು ಚಾಲಕರಿಗೆ ಸ್ಪಷ್ಟವಾಗಿ ಕಾಣಿಸುತ್ತವೆ.

ಮಕ್ಕಳನ್ನು ಕಾರಿನಲ್ಲಿ ಕರೆದುಕೊಂಡು ಹೋಗುವಾಗ ಮಕ್ಕಳನ್ನು ಹಿಡಿದಿಡುವ ಸುರಕ್ಷಿತ ಬೆಲ್ಟ್ ಬಳಸಬೇಕು. ವಾಹನ ನಡೆಸುವಾಗ ಚಾಲಕರು ಮಕ್ಕಳನ್ನು ಮುದ್ದುಮಾಡಿ ತಾವು ವಿಚಲಿತರಾಗಿ ಅಪಘಾತಕ್ಕೆ ಕಾರಣರಾಗಬಾರದು. ಮಕ್ಕಳ ಕೈಗೆ ಆಟಿಕೆ ಕೊಟ್ಟು ಅವು ತಮ್ಮ ಗಮನವನ್ನು ಸೆಳೆಯದಂತೆ ಆಡಿಕೊಂಡಿರುವ ಹಾಗೆ ಮಾಡಬೇಕು. ಮಕ್ಕಳಿಗೆ **ಯಾವಾಗಲೂ ಕಾರಿನ ಎಡಗಡೆಯೇ, ಕಾಲು ದಾರಿಯ ಕಡೆಯೇ ಇಳಿಯುವುದನ್ನು ಕಲಿಸಬೇಕು.**

ರಸ್ತೆಯಲ್ಲಿ ಮಕ್ಕಳನ್ನು ಕೈ ಹಿಡಿದು ನಡೆಸಿಕೊಂಡು ಹೋಗುತ್ತ ರಸ್ತೆ, ವಾಹನ, ಸಂಚಾರ ಇವುಗಳ ಬಗ್ಗೆ ತಿಳಿಸಿ ಹೇಳಬೇಕು. ರಸ್ತೆಗೂ ಕಾಲುದಾರಿಗೂ ವ್ಯತ್ಯಾಸ ತಿಳಿಸಬೇಕು. **ರಸ್ತೆ ದಾಟುವ ಮೊದಲು ತಾವು ಮಕ್ಕಳಿಗೆ 'ಬಲಕ್ಕೆ ನೋಡು, ಎಡಕ್ಕೆ ನೋಡು,**

ಮತ್ತೆ ಬಲಕ್ಕೆ ನೋಡು, ಯಾವುದೂ ವಾಹನ ಬರುತ್ತಿಲ್ಲ. ರಸ್ತೆ ಸುಗಮ, ಈಗ ನಡಿ' ಎಂದು ಬಾಯಿಪಾಠ ಮಾಡಿಸಬೇಕು. ಮಕ್ಕಳು ಒಂದೊಂದು ವಿಷಯವನ್ನು ಒಂದೊಂದಾಗಿ ತಿಳಿದುಕೊಳ್ಳಲು ಸಾಕಷ್ಟು ಸಮಯ ತೆಗೆದುಕೊಳ್ಳುವುದರಿಂದ ಮತ್ತು ಅದು ಏನೆಂದು ಮರೆತುಬಿಡುವುದರಿಂದ ಒಂದು ದಿನ ಕೆಂಪು ಸೂಚನೆ ತೋರಿಸಿ 'ನಿಲ್ಲು' ಎಂದು ತಿಳಿಸಿ, ಕೆಂಪು ಬಣ್ಣ ಕಂಡಾಗ ಹೋಗಬಾರದು, ಅಪಾಯ, ಎಂದು ಕಲಿಸಬೇಕು. ಇನ್ನೊಂದು ದಿನ ಕಿತ್ತಲೆ ಹಳದಿ ಬಣ್ಣ, ತೋರಿಸಿ 'ಸಿದ್ಧವಾಗು' ಎಂದು ಹೇಳಿ ಕೊಡಬೇಕು. ಮತ್ತೊಂದು ದಿನ 'ಹೊರಡು' ಎಂಬ ಹಸಿರು ಸೂಚನೆ ತೋರಿಸಿ ನಡೆಯಲು ಹೇಳಬೇಕು.

ಸೈಕಲ್ಲು, ಕಾರು, ಲಾರಿ, ಬಸ್ಸು, ಆಟೋರಿಕ್ಷಾವನ್ನು ಒಂದೊಂದನ್ನೇ ಪರಿಚಯಿಸಿ ವಿವಿಧ ವಾಹನಗಳ ಶಬ್ದ, ಅದು ಬರುವ ದಿಕ್ಕು, ಸಮೀಪಿಸುವಾಗಿನ ಶಬ್ದ ಆಲಿಸುವಂತೆ ಮಾಡಿ, ತಾವೂ ಆಲಿಸಬೇಕು. ಯಾವ ಕಡೆಯಿಂದ ಶಬ್ದ ಬರುತ್ತಿದೆ ಎಂದು ಪ್ರಶ್ನಿಸಿ, ಸರಿ ಉತ್ತರಕ್ಕೆ ಬೆನ್ನು ತಟ್ಟಿ ಕುಣಿಯಬೇಕು. ನಿಲ್ಲು, ಕೇಳು, ನೋಡು, ನಡೆ ಎಂದು ವಾಹನಗಳನ್ನು ತೋರಿಸುತ್ತ ಸಂಚಾರ ಸಂಕೇತಗಳ ಚಿಹ್ನೆಗಳನ್ನು ಪರಿಚಯಿಸುತ್ತ ಸಂಚಾರ ನಿಯಮದ ಪ್ರಥಮ ಪಾಠ ಶುರು ಮಾಡಬೇಕು. 'ಮನೆಯೆ ಮೊದಲ ಪಾಠಶಾಲೆ, ಜನನಿತಾನೆ ಮೊದಲ ಗುರುವು'.

೨೪. ಸರಕು ಸಾಗಣೆ ವಾಹನ ಚಾಲಕರಿಗೆ ವಿಶೇಷ ಸೂತ್ರಗಳು

ವಾಹನದಲ್ಲಿ ಸರಕು ಸಾಗಿಸುವಾಗ ಪಾಲಿಸಬೇಕಾದ ಮಿತಿಗಳು

ಮೋಟಾರು ವಾಹನದಲ್ಲಿ ಅಕ್ಕಪಕ್ಕಕ್ಕೆ ಚಾಚಿಕೊಂಡಿರುವ, ತುಂಬಾ ಹಿಂಚಾಚಿದಂತಿರುವ ಸರಕು, ಸಂಚಾರಕ್ಕೆ ತೊಂದರೆಯನ್ನುಂಟು ಮಾಡಿದರೆ; ಅತಿ ಎತ್ತರವಾಗಿ ಹೇರಿದ ಸರಕು ತಿರುವು ಮುಂತಾದ ಕಡೆ ವಾಹನ ಚಾಲನೆಗೆ ತೊಂದರೆಯಾಗಿ ಸಮತೋಲ ತಪ್ಪುವ ಸಾಧ್ಯತೆಗಳಿವೆ. ಆದಕಾರಣ ಕೇಂದ್ರ ಮೋಟಾರು ವಾಹನಗಳ ನಿಯಮ ೧೯೮೯ರ ಪ್ರಕಾರ ಮೋಟಾರು ವಾಹನಗಳನ್ನು ತಯಾರಿಸಬೇಕು. ಹಾಗೆ ತಯಾರಿಸಬೇಕಾಗಿರುವ ಮಿತಿ ಈ ಕೆಳಗೆ ಸೂಚಿಸಿದಂತಿದೆ.

ಒಟ್ಟು ಅಗಲ

ಸಾರಿಗೇತರ ವಾಹನಗಳು	= ೨.೫	ಮೀಟರುಗಳು
ಸಾರಿಗೆ ವಾಹನಗಳು	= ೨.೭	ಮೀಟರುಗಳು

ಒಟ್ಟು ಉದ್ದ

ಸಾರಿಗೇತರ ವಾಹನಗಳು	= ೯.೫	ಮೀಟರುಗಳು
ಸಾರಿಗೆ ವಾಹನಗಳು	= ೧೧.೨೫	ಮೀಟರುಗಳು
ಆರ್ಟಿಕ್ಯುಲೇಟೆಡ್ ವಾಹನಗಳು	= ೧೬	ಮೀಟರುಗಳು
ಟ್ರಕ್ ಟ್ರೈಲರ್ ಅಥವಾ ಟ್ರಾಕ್ಟರ್ ಟ್ರೈಲರ್‌ಗಳು	= ೧೮	ಮೀಟರುಗಳು

ಒಟ್ಟು ಎತ್ತರ

ಡಬಲ್ ಡೆಕ್ಕರ್‌ವಾಹನ ಹೊರತುಪಡಿಸಿ ಮಿಕ್ಕ ಎಲ್ಲ ವಾಹನಗಳು	= ૩.೮	ಮೀಟರುಗಳು
ಡಬಲ್ ಡೆಕ್ಕರ್‌ವಾಹನ	= ೪.೨೫	ಮೀಟರುಗಳು
ಸರಕು ಸಾಗಣೆ ಪೆಟ್ಟಿಗೆ ಸಾಗಿಸುವ ಟ್ರೈಲರ್‌ಗಳು	= ೪.೨	ಮೀಟರುಗಳು

ಮೇಲೆ ಸೂಚಿಸಿರುವ ಮೋಟಾರು ವಾಹನಗಳಲ್ಲಿ ಆ ಮಿತಿಗಳನ್ನು ಮೀರಿ ಸರಕನ್ನು ಸಾಗಿಸಬಾರದು. ಆದರೆ ಮರದ ತುಂಡು, ಕಬ್ಬಿಣದ ಸರಳು ಮತ್ತು

ತುಂಡರಿಸಲಾಗದ ಸರಕುಗಳನ್ನು ಸರಕು ಸಾಗಣೆ ವಾಹನ (ಲಾರಿ)ಗಳಲ್ಲಿ ಸಾಗಿಸುವಾಗ ಅಂತಹ ಸರಕನ್ನು ವಾಹನದ ಹಿಂಭಾಗದಿಂದ ಒಂದು ಮೀಟರು ಹೆಚ್ಚು ಚಾಚಿಕೊಂಡಿರುವಂತೆ ಸಾಗಿಸಲು ಅನುಮತಿ ನೀಡಲಾಗಿದೆ. ಹಾಗೆ ಸಾಗಿಸುವಾಗ ಅಪಾಯದ ಸೂಚನೆಯೆಂದು ಕೆಂಪು ಬಾವುಟವನ್ನು ಸರಕಿನ ಹಿಂಚಾಚಿಕೊಂಡಿರು ತುದಿಯಲ್ಲಿ ಹಾರಿಸಬೇಕು. ಅಷ್ಟೇ ಅಲ್ಲದೆ ರಾತ್ರಿ ವೇಳೆಯಲ್ಲಿ ಸರಕಿನ ಹಿಂಚಾಚಿಕೊಂಡಿರುವ ತುದಿಯಲ್ಲಿ ಕೆಂಪು ದೀಪವನ್ನು ಬೆಳಗಿಸಬೇಕು. (ಕೇಂ.ಮೋ.ವಾ.ನಿಯಮಗಳು ೧೯೮೯, ನಿಯಮ ೯೩).

ಸರಕು ಸಾಗಣೆ ವಾಹನದಲ್ಲಿ ಪ್ರಾಣಿಗಳನ್ನು ಕೊಂಡೊಯ್ಯುವುದು

ಸರಕು ಸಾಗಣೆ ವಾಹನದಲ್ಲಿ ಪ್ರಾಣಿಗಳನ್ನು ಕೊಂಡೊಯ್ಯಬಾರದು. ಪ್ರಾಣಿಗಳನ್ನು ಸಾಗಿಸಲು ವಿಶೇಷವಾಗಿ ರಚಿಸಿದ ಲಾರಿಯಲ್ಲಿ ಅವುಗಳನ್ನು ಕೊಂಡೊಯ್ಯಬೇಕು. ಅಂತಹ ವಾಹನವನ್ನು ಗಂಟೆಗೆ ೨೪. ಕಿ.ಮೀ ವೇಗದಲ್ಲಿ ನಡೆಸಬೇಕು. (ಕೇಂ.ಮೋ.ವಾ.ನಿಯಮಗಳು ೧೯೮೯, ನಿಯಮ ೭೪).

ಸರಕು ಸಾಗಣೆ ವಾಹನದಲ್ಲಿ ಜನರನ್ನು ಸಾಗಿಸುವುದು

ಆರ್.ಟಿ.ಓ. ಅವರು ನೋಂದಣಿ ಪುಸ್ತಕದಲ್ಲಿ ನಮೂದಿಸಿರುವಷ್ಟು ಜನರನ್ನು ಮಾತ್ರ ಸರಕು ಸಾಗಣೆ ವಾಹನದಲ್ಲಿ ಕೊಂಡೊಯ್ಯಬೇಕು. ಚಾಲಕನು ತನ್ನ ಜೊತೆಗೆ ಮಾಲೀಕ, ಮಾಲೀಕನಲ್ಲಿ ಕೆಲಸಕ್ಕಿರುವ ವ್ಯಕ್ತಿಗಳು, ವಾಹನದ ಕ್ಲೀನರ್‌ಗಳನ್ನು ಅಥವಾ ಸಮವಸ್ತ್ರ ಧರಿಸಿ ಕರ್ತವ್ಯದಲ್ಲಿರುವ ಪೊಲೀಸ್ ಅಧಿಕಾರಿಗಳನ್ನು ಮಾತ್ರ ಕೊಂಡೊಯ್ಯಬೇಕು.

ಈ ವಾಹನದಲ್ಲಿ ಬಾಡಿಗೆಗಾಗಿ ಜನರನ್ನು ಕೊಂಡೊಯ್ಯಬಾರದು. ಹಾಗೆ ಕೊಂಡೊಯ್ದಲ್ಲಿ ದಂಡನೆಗೆ ಈಡಾಗಬೇಕಾಗುತ್ತದೆ.

(ಕೇಂ.ಮೋ.ವಾ.ನಿಯಮಗಳು ೧೯೮೯, ನಿಯಮ ೯೩).

_ಮಿತಿ ಮೀರಿದ ಭಾರ_

ಮೋಟಾರು ವಾಹನಗಳ ತೂಕವನ್ನು ಪರಿಗಣಿಸುವಾಗ ಖಾಲಿ ವಾಹನ ತೂಕವನ್ನು (unladen weight), ಖಾಲಿ ವಾಹನ ತೂಕ ಮತ್ತು ಸರಕಿನ ಅಥವಾ ಪ್ರಯಾಣಿಕರು ಕೂಡಿದ ಒಟ್ಟು ತೂಕವನ್ನು ನೋಂದಿತ ವಾಹನ ತೂಕ (RLW : Registered laden weight) ವೆಂದು ಕರೆಯುವರು. ಆ ನೋಂದಿತ ವಾಹನ ತೂಕವನ್ನು ವಾಹನ ತಯಾರಕರು ಆ ವಾಹನದ ಮುಂಭಾಗದ ಮತ್ತು ಹಿಂಭಾಗದ

ಅಚ್ಚುಗಳ ಸಾಮರ್ಥ್ಯವನ್ನು ಆಧರಿಸಿ ನಿಗದಿಗೊಳಿಸುತ್ತಾರೆ. ಅದನ್ನು ಆರ್.ಟಿ.ಓ. ಅವರು ನೋಂದಣಿ ಪುಸ್ತಕದಲ್ಲಿ ದಾಖಲಿಸಿರುತ್ತಾರೆ. ನೋಂದಿತವಾಹನ ತೂಕದಲ್ಲಿ ಖಾಲಿ ವಾಹನ ತೂಕವನ್ನು ಕಳೆದರೆ ಉಳಿಯುವ ತೂಕವೇ ಆ ವಾಹನದಲ್ಲಿ ಸಾಗಿಸಬೇಕಾದ ಸರಕಿನ ತೂಕ. ಹೀಗೆ ಸಾಗಿಸುವ ಸರಕನ್ನು ಮಿತಿ ಮೀರಿ ಹೇರಿದಾಗ ಅದು (over load) ಅತಿ ಹೇರಿಕೆ ಎನಿಸುತ್ತದೆ.

ವಾಹನದಲ್ಲಿ ಸರಕನ್ನು ಹೇರಿಕೊಂಡು ರಸ್ತೆಯ ಮೇಲೆ ನಡೆಸುವಾಗ ಯಾವುದೇ ಸಂದರ್ಭದಲ್ಲಿಯೂ ನೋಂದಿತ ತೂಕವನ್ನು ಅದು ಮೀರಿರಬಾರದು. ಅತಿಹೇರಿಕೆ (over load) ಯಾಗಿದ್ದರೆ ಆ ವಾಹನ ಚಾಲಕನ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುವುದು. ಸ್ಥಳದಲ್ಲಿಯೇ ದಂಡ ತುಂಬಲು ಒಪ್ಪಿದರೆ ಕೋರ್ಟಿಗೆ ಹೋಗುವ ಅಗತ್ಯವಿಲ್ಲ. ಸ್ಥಳದಲ್ಲಿ ದಂಡ ಕಟ್ಟಲು ಒಪ್ಪದ ಚಾಲಕನಿಗೆ ಕೋರ್ಟ್‌ಗೆ ಹಾಜರಾಗುವಂತೆ ಮಾಡಲಾಗುತ್ತದೆ. ಅಲ್ಲಿಯೇ ಅವನು ದಂಡ ಕಟ್ಟಬಹುದು.

ಅಧಿಕ ಭಾರ ಸಾಗಿಸಿದ್ದಕ್ಕೆ ರೂ. ೨೦೦೦/- ಮತ್ತು ಪ್ರತಿ ೧ ಟನ್ (೧,೦೦೦ ಕೆ.ಜಿ.) ಅಧಿಕ ಭಾರ ಸಾಗಿಸಿದ್ದಕ್ಕೆ ಅಥವಾ ಅದರ ಭಾಗಶಃ ಪ್ರಮಾಣದ ತೂಕದ ಸಾಗಾಣಿಕೆಗೆ ರೂ. ೧,೦೦೦/- ದಂಡಹಾಕಲಾಗುವುದು. ಹೆಚ್ಚುವರಿ ಸರಕನ್ನು ಇಳಿಸಿ, ನಂತರ ಪ್ರಯಾಣಿಸಲು ಅನುಮತಿಸಲಾಗುವುದು.

ಅಂತಹ ಸಂದರ್ಭಗಳಲ್ಲಿ ತೂಕ ಮಾಡುವ ಯಂತ್ರಸೌಲಭ್ಯವಿರುವ ಜಾಗಕ್ಕೆ ಆ ವಾಹನವನ್ನು ಕೊಂಡೊಯ್ಯಬೇಕಾಗುತ್ತದೆ.

ಮಿತಿ ಮೀರಿದ ಭಾರದ ಸರಕು ಸಾಗಿಸಬಾರದೆಂದು ಹೆಚ್ಚು ದಂಡ ವಿಧಿಸಿರುವ ಕಾಯ್ದೆಯಲ್ಲಿ ಚಾಲಕ, ಮಾಲೀಕ ಹಾಗೂ ಸಾರ್ವಜನಿಕರ ಸಂರಕ್ಷಣೆಯ ಉದ್ದೇಶವಿದೆ.

(ಮೋ. ವಾ. ಕಾಯ್ದೆ ೧೯೮೮, ಕಲಮು ೧೧೩, ೧೧೪, ೨೦೦).

೨೫. ಮಾಲಿನ್ಯ

೧. ಶಬ್ದ ಮಾಲಿನ್ಯ

ವಾಹನಗಳಿಂದ ಉಂಟಾಗುವ ಅಸಹನೀಯ ಗಟ್ಟಿಯಾದ ಹಾಗೂ ಕರ್ಕಶವಾದ ಶಬ್ದವೇ ಇಂದು ನಗರಗಳಲ್ಲಿ ಶಬ್ದ ಮಾಲಿನ್ಯಕ್ಕೆ ಕಾರಣವಾಗಿದೆ. ಅದು ನಾಗರಿಕರ ಮನಸ್ಸಿನ ಸ್ವಾಸ್ಥ್ಯವನ್ನು ಹದಗೆಡಿಸುತ್ತಿದೆ. ಅದರಿಂದ ಅಸಹನೆ, ಆಕ್ರಮಣ ಪ್ರವೃತ್ತಿ, ಅಧಿಕ ರಕ್ತದೊತ್ತಡ, ಹೆಚ್ಚು ಆಯಾಸಗೊಳ್ಳುವುದು, ನಿದ್ರಾಹೀನತೆ ಮುಂತಾದ ತೊಂದರೆಗಳಾಗುತ್ತಿವೆ. ಅದನ್ನು ತಪ್ಪಿಸಲು ವಾಹನಗಳು ಉಂಟು ಮಾಡುವ ಶಬ್ದಕ್ಕೆ ಮಿತಿಯನ್ನು ಸರ್ಕಾರ ವಿಧಿಸಿದೆ. ಅದರ ಅನ್ವಯ ಪ್ರತಿಯೊಂದು ವಾಹನಕ್ಕೆ ಎಲೆಕ್ಟ್ರಿಕ್ ಹಾರನ್ನು ಅಳವಡಿಸಬೇಕು. ಪ್ರತಿಯೊಂದು ವಾಹನಕ್ಕೆ ಸೈಲೆನ್ಸರ್ ಇರಬೇಕು. ಸೈಲನ್ಸರ್‌ಯಿಲ್ಲದ, ಇದ್ದರೂ ದೋಷದಿಂದ ಕೂಡಿದ್ದು ಭೋರ್ಗರೆಯುವ ವಾಹನಗಳನ್ನು ರಸ್ತೆಗಳಲ್ಲಿ ನಡೆಸಬಾರದು.

೨. ವಾಯು ಮಾಲಿನ್ಯ

ಡೀಸಲ್ ಎಂಜಿನ್‌ನಿಂದ ಹೊರಬೀಳುವ ಹೊಗೆಯಲ್ಲಿರುವ ಸೂಕ್ಷ್ಮವಾದ ಇಂಗಾಲದ ಧೂಳು ಕಣ್ಣುಗಳಿಗೆ ಉರಿಯನ್ನೂ ನೋವನ್ನೂ ಉಂಟು ಮಾಡಿ, ದೃಷ್ಟಿ ದೋಷಕ್ಕೆ ಕಾರಣವಾಗುತ್ತದೆ. ಅಂತಹ ಹೊಗೆಯಲ್ಲಿರುವ ಸಾರಜನಕದ ಆಕ್ಸೈಡು ಉಸಿರಾಟದ ತೊಂದರೆ ತಂದೊಡ್ಡಿ ಸಾಮಾನ್ಯ ದೇಹಾರೋಗ್ಯಕ್ಕೂ ಧಕ್ಕೆಯಾಗುತ್ತದೆ.

ಪೆಟ್ರೋಲ್ ಎಂಜಿನ್‌ನಿಂದ ಹೊರಬೀಳುವ ಹೊಗೆಯಲ್ಲಿ ಸೀಸದ ಕಣಗಳು ಬೆರೆತಿದ್ದು ಅದು ಮಾಂಸಖಂಡಗಳ ಮತ್ತು ನರಮಂಡಲದ ಮೇಲೆ ಕೆಟ್ಟ ಪರಿಣಾಮವನ್ನುಂಟು ಮಾಡುತ್ತದೆ. ಅಷ್ಟೆ ಅಲ್ಲದೆ ಆ ಹೊಗೆಯಲ್ಲಿರುವ ಬಣ್ಣ ವಾಸನೆಯಿಲ್ಲದ ಕಾರ್ಬನ್ ಮಾನಾಕ್ಸೈಡ್ ಇನ್ನೂ ಅಪಾಯಕಾರಿ. ಅದೊಂದು ವಿಷಾನಿಲವಾಗಿದ್ದು, ರಕ್ತದಲ್ಲಿಯ ಅಮ್ಲಜನಕದ ಪ್ರಮಾಣವನ್ನು ಕುಗ್ಗಿಸಿ ಹೆಚ್ಚು ತೀವ್ರವಾದರೆ ಸಾವನ್ನೂ ಉಂಟುಮಾಡುತ್ತದೆ.

ಡೀಸಲ್ ಎಂಜಿನ್‌ನಿಂದ ಹೊರಡುವ ಹೊಗೆ ದಟ್ಟವಾಗಿ ಕಣ್ಣಿಗೆ ಕಾಣಿಸುತ್ತದೆ ಆದ್ದರಿಂದ ಜನಸಾಮಾನ್ಯರು ಅದನ್ನು ಸಹಜವಾಗಿಯೇ ಅಪಾಯಕಾರಿಯೆಂದು ತಿಳಿಯುತ್ತಾರೆ. ಆದರೆ ಪೆಟ್ರೋಲ್ ಎಂಜಿನ್‌ಗಳಿಂದ ಹೊರಬರುವ ಕಣ್ಣಿಗೆ ಕಾಣದೆಯೇ ಕೊಲ್ಲುವ ವಿಷಾನಿಲಗಳ ಬಗ್ಗೆ ಅವರು ಅರಿಯರು. ಅದರಲ್ಲಿಯೂ ಕಾರ್ಬನ್ ಮಾನಾಕ್ಸೈಡಂತೂ ವರ್ಣನೆಗೆ ಮೀರುವಷ್ಟು ಅಪಾಯಕಾರಿ. ಆದ್ದರಿಂದ, ವಾಹನಗಳನ್ನು

ಅತಿಯಾದ ಹೊಗೆ ಅಥವಾ ಕೆಟ್ಟ ಹಬೆ ಬಾರದಂತೆ ತಯಾರು ಮಾಡಿರಬೇಕು. ನಡೆಸುವ ಕಾಲದಲ್ಲಿಯೂ ಅದರ ಆ ಗುಣವನ್ನು ಸಂರಕ್ಷಿಸಿಕೊಂಡಿರಬೇಕು. ಅಷ್ಟೇ ಅಲ್ಲದೆ ಸೈಲನ್ಸರಿನಿಂದ ಬೆಂಕಿ ಕಿಡಿಗಳಾಗಲಿ, ತೈಲಾಂಶವಾಗಲಿ ವಿಸರ್ಜಿಸಲ್ಪಡಬಾರದು.

ವಾಹನಗಳಿಗೆ ಮಾಲಿನ್ಯ ಮಿತಿಯನ್ನು ನಿಗದಿಪಡಿಸುವ ಹೊಣೆ ಕೂಡ ಸಾರಿಗೆ ನಿಯಮಗಳ ವ್ಯಾಪ್ತಿಯಲ್ಲೇ ಬರುತ್ತದೆ. ನಿಯಮಗಳು ಈ ಕೆಳಕಂಡಂತಿವೆ :

ಡೀಸಲ್ ವಾಹನಗಳು

೧. ಡೀಸಲ್ ವಾಹನ ನಿಂತ ಸ್ಥಿತಿಯಲ್ಲಿ, ಎಂಜಿನ್ನನ್ನು ಮಾತ್ರವೇ ಚಾಲನೆ ಮಾಡಿ, ಎಂಜಿನ್ ತನ್ನಷ್ಟಕ್ಕೆ ತಾನು ಕೆಲಸ ಮಾಡುತ್ತಿದ್ದಾಗ ಅಂದರೆ ಐಡ್ಲಿಂಗ್‌ನಲ್ಲಿದ್ದಾಗ ಹೊರಹೊಮ್ಮುವ ಹೊಗೆಯ ಸಾಂದ್ರತೆಯು ೬೫ ಹಾರ್ಟ್ರಿಜ್ ಮೂಲಮಾನಗಳನ್ನು ಮೀರಿರಬಾರದು.

೨. ಮೇಲೆ ವಿವರಿಸಿದಂತೆಯೇ ಎಂಜಿನ್ನಿನ ಪರಿಸ್ಥಿತಿಯಿದ್ದಲ್ಲಿ ಪೂರ್ಣವಾಗಿ ಆಕ್ಸಿಲರೇಟರ್ ಕೊಟ್ಟಾಗ ಹೊರಹೊಮ್ಮುವ ಹೊಗೆಯ ಸಾಂದ್ರತೆಯು ೭೫ ಹಾರ್ಟ್ರಿಜ್ ಮೂಲಮಾನಗಳನ್ನು ಮೀರಿರಬಾರದು.

ಪೆಟ್ರೋಲ್ ವಾಹನಗಳು

ಪೆಟ್ರೋಲ್ ವಾಹನ ನಿಂತ ಸ್ಥಿತಿಯಲ್ಲಿ, ಎಂಜಿನ್ನನ್ನು ಮಾತ್ರವೇ ಚಾಲನೆ ಮಾಡಿ, ಎಂಜಿನ್ ತನ್ನಷ್ಟಕ್ಕೆ ತಾನು ಕೆಲಸ ಮಾಡುತ್ತಿದ್ದಾಗ ಅಂದರೆ ಐಡ್ಲಿಂಗ್‌ನಲ್ಲಿದ್ದಾಗ ಹೊರಹೊಮ್ಮುವ ಇಂಗಾಲದ ಮಾನಾಕ್ಸೈಡ್ ಪ್ರಮಾಣವು ಈ ಕೆಳಗೆ ಸೂಚಿಸಿರುವ ಮಿತಿಯನ್ನು ಮೀರಿರಬಾರದು.

೧. ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳು	–	ಹೊರಬೀಳುವ ಒಟ್ಟು ಹೊಗೆಯ ಶೇ. ೪.೫ ಭಾಗ
೨. ನಾಲ್ಕು ಚಕ್ರದ ವಾಹನಗಳು	–	ಹೊರಬೀಳುವ ಒಟ್ಟು ಹೊಗೆಯ ಶೇ. ೩ ಭಾಗ

ಈ ಮಿತಿಯನ್ನು ಕಾಯ್ದುಕೊಳ್ಳದಿದ್ದರೆ ದಂಡ ವಿಧಿಸಲಾಗುತ್ತದೆ.
(ಮೋ. ವಾ. ಕಾಯ್ದೆ ೧೯೮೮ ಕಲಮು ೧೯೦ (೨) ಮತ್ತು
ಕೇಂ. ಮೋವಾ.ನಿ. ೧೯೮೯ ನಿಯಮ ೧೧೫, ೧೧೬).

ವಾಯುಮಾಲಿನ್ಯ ನಿವಾರಣೆಗಾಗಿ ಅನುಸರಿಸಬೇಕಾದ ಕ್ರಮಗಳು

ವಾಹನವನ್ನು ಯಾವಾಗಲೂ ಸುಸ್ಥಿತಿಯಲ್ಲಿಟ್ಟಿರಬೇಕು. ಕಾಲಕಾಲಕ್ಕೆ ಸರ್ವೀಸು ಮಾಡಿಸಬೇಕು. ವಾಹನವನ್ನು ಯಾವಾಗಲೂ ಸಮನಾದ ವೇಗದಲ್ಲಿ ಓಡಿಸಬೇಕು. ಬಸ್‌ಸ್ಟಾಪ್, ಸಂಚಾರ ಸಂಕೇತಗಳ ಬಳಿ ನಿಲ್ಲಿಸಿರುವಾಗ ಎಂಜಿನ್‌ಅನ್ನು ಚಾಲನೆಯಲ್ಲಿಡಬಾರದು. ವಾಹನಗಳ ಮೇಲೆ ಅವುಗಳ ಸಾಮರ್ಥ್ಯಕ್ಕಿಂತಲೂ ಹೆಚ್ಚಾಗಿ ಭಾರ ಹೇರಬಾರದು.

ಪೆಟ್ರೋಲ್ ಎಂಜಿನ್ನಾದರೆ ಕಾರ್ಬ್ಯುರೇಟರನ್ನು ಸರಿಯಾದ ವಾಯು ಇಂಧನ ಮಿಶ್ರಣ ಕೂಡುವಂತೆ ಹೊಂದಿಸಿ, ಕಾರ್ಬನ್ ಮಾನಾಕ್ಸೈಡ್ ಪ್ರಮಾಣವನ್ನು ಕುಗ್ಗಿಸಬೇಕು. ಡೀಸಲ್ ಎಂಜಿನ್ನಾದರೆ ಪ್ಯುಯಲ್ ಇಂಜೆಕ್ಷನ್ ಪಂಪ್ ಮತ್ತು ಪ್ಯುಯಲ್ ಇಂಜೆಕ್ಟರನ್ನು ಕ್ಯಾಲಿಬರೇಷನ್ ಮಾಡಿಸಬೇಕು. ಕಾಲಕಾಲಕ್ಕೆ ಡೀಸಲ್ ಫಿಲ್ಟರನ್ನು ಮತ್ತು ಆಯಿಲ್ ಫಿಲ್ಟರನ್ನು ಬದಲಾಯಿಸಬೇಕು.

ವಾಯು ಮಾಲಿನ್ಯದಿಂದಾಗುವ ದುಷ್ಪರಿಣಾಮಗಳು :

೧. ದೃಷ್ಟಿ ಮಂದವಾಗುವುದು.

೨. ಮೆದುಳಿನ ಕಾರ್ಯಾಚರಣೆ ಕುಂಠಿತಗೊಳ್ಳುವುದು.

೩. ಗರ್ಭಿಣಿಯರಿಗೆ ಗರ್ಭಸ್ರಾವವಾಗುವುದು. ಹುಟ್ಟುವ ಮಕ್ಕಳ ಆರೋಗ್ಯಕ್ಕೆ ಹಾನಿಕಾರಕವಾಗುವುದು.

೪. ಆಸ್ತಮಾ, ಉಸಿರಾಟದ ತೊಂದರೆ.

೫. ಪಿತ್ತಕೋಶ, ಮೂತ್ರಕೋಶ, ಕರುಳಿಗೆ ಮತ್ತು ಸಂತಾನೋತ್ಪತ್ತಿಗೆ ಹಾನಿಯುಂಟು ಮಾಡುವುದು.

೬. ಮಕ್ಕಳಲ್ಲಿ ಮಾನಸಿಕ ದುರ್ಬಲತೆ ಮತ್ತು ಬುದ್ಧಿ ಮಾಂಧ್ಯತೆ.

೭. ಶ್ವಾಸಕೋಶ ಕ್ಯಾನ್ಸರ್.

೨೬. ಇಂಧನ ಉಳಿತಾಯ

ನಾವು ಬಳಸುವ ಇಂಧನವು ರಾಷ್ಟ್ರದ ಆರ್ಥಿಕ ಪರಿಸ್ಥಿತಿಯ ಮೇಲೆ ಪ್ರಭಾವ ಬೀರುತ್ತದೆ. ನಾವು ಉಳಿಸುವ ಒಂದೊಂದು ಹನಿ ಇಂಧನವೂ ದೇಶದ ಆರ್ಥಿಕ ಪ್ರಗತಿಗೆ ಸಹಾಯಕವಾಗುತ್ತದೆ. ಆದಕಾರಣ ಖಾಸಗಿ ವಾಹನವನ್ನು ಅವಶ್ಯ ಬಿದ್ದಾಗ ಮಾತ್ರ ಬಳಸುತ್ತ, ಮಿಕ್ಕೆಲ್ಲ ಸಮಯದಲ್ಲಿ ಸಾರ್ವಜನಿಕ ವಾಹನಗಳಲ್ಲಿ ಪ್ರಯಾಣ ಮಾಡುವುದು ಉತ್ತಮ. **ಚಾಲಕರು ವಾಹನವನ್ನು ನಡೆಸುವಾಗ ಸುರಕ್ಷಾ ಚಾಲನೆಯ ಜೊತೆಗೆ ಇಂಧನ ಉಳಿತಾಯವನ್ನೂ ಗಮನದಲ್ಲಿಟ್ಟುಕೊಳ್ಳಬೇಕು.**

ಇಂಧನ ಉಳಿತಾಯಕ್ಕಾಗಿ ಅನುಸರಿಸಬೇಕಾದ ಕ್ರಮಗಳು

೧. ಇಂಧನ ಉಳಿತಾಯವು ಚಾಲಕನ ವಾಹನಚಾಲನಾ ಪರಿಣತಿಯನ್ನು ಅವಲಂಬಿಸಿದೆ. ಆತನು ವಾಹನವನ್ನು ಲಾಭದಾಯಕವಾಗಿ ನಡೆಸುವುದರ ಕಡೆಗೆ ಗಮನ ಕೊಡಬೇಕು.

೨. ಎಂಜಿನ್ನನ್ನು ಚಾಲನೆಗೊಳಿಸುವಾಗ ಕ್ಲಚ್ ಪೆಡಲನ್ನು ಒತ್ತಿ ಗೇರ್ ಲಿವರನ್ನು ನ್ಯೂಟ್ರಲ್‌ನಲ್ಲಿಡಬೇಕು. ಹೀಗೆ ಮಾಡುವುದರಿಂದ ಸ್ಟಾರ್ಟರ್‌ನ ಮೇಲೆ ಒತ್ತಡ ಬೀಳುವುದಿಲ್ಲ. ಎಂಜಿನ್ ಚಾಲನೆಯಾದ ನಂತರ ಕ್ಲಚ್ಚನ್ನು ಬಿಡಬೇಕು.

೩. ಎಂಜಿನ್ನು ಚಾಲನೆಗೊಂಡ ನಂತರ ತಣ್ಣಗಿದ್ದ ಎಂಜಿನ್ನನ್ನು ವಿಪರೀತ ವೇಗದಲ್ಲಿ ಚಾಲನೆಗೊಳಿಸಬಾರದು. ಹ್ಯಾಂಡ್‌ಬ್ರೇಕನ್ನು ಮುಕ್ತಗೊಳಿಸಿ ಕೆಳಗೇರ್‌ನಲ್ಲಿ ವಾಹನವನ್ನು ಮುನ್ನಡೆಸಬೇಕು.

೪. ಆಕ್ಸಿಲರೇಟರನ್ನು ಒಂದು ಗೊತ್ತಾದ ಹಿಡಿತದಲ್ಲಿ ಒತ್ತಬೇಕು. ಅದನ್ನು ಒತ್ತುವಾಗ ಹೆಚ್ಚಿನ ಏರುಪೇರಾಗದಂತೆ ನೋಡಿಕೊಳ್ಳಬೇಕು. ಏರುಪೇರುಗಳುಂಟಾದರೆ ಹೆಚ್ಚು ಇಂಧನ ವ್ಯರ್ಥವಾಗುತ್ತದೆ.

೫. ಬೆಟ್ಟವನ್ನು ಏರುವಾಗಲಾಗಲಿ, ಬೆಟ್ಟದಿಂದ ಇಳಿಯುವಾಗಲಾಗಲಿ ಒಂದೇಗೇರ್‌ನಲ್ಲಿ ಹೋಗಬೇಕು.

೬. ವಾಹನವನ್ನು ಅತಿವೇಗದಲ್ಲಿ ಓಡಿಸುವುದರಿಂದ ಸಾಧಾರಣ ವೇಗದಲ್ಲಿ ಖರ್ಚಾಗುವ ಇಂಧನಕ್ಕಿಂತ ಎರಡು ಪಟ್ಟು ಖರ್ಚಾಗುತ್ತದೆ. ಹಾಗೆ ಹೋದಾಗ ಉಳಿಯುವ ಸಮಯ ಅಷ್ಟೇನೂ ಹೇಳಿಕೊಳ್ಳುವಷ್ಟಲ್ಲದಿದ್ದು ಅದರಿಂದಾಗುವ ಆರ್ಥಿಕ ನಷ್ಟ ಹೆಚ್ಚಿರುತ್ತದೆ. **ವೇಗ ಜಾಸ್ತಿಯಾದಾಗ ಗಾಳಿಯ ಪ್ರತಿರೋಧವೂ ಹೆಚ್ಚಾಗಿ ಅದನ್ನು ಎದುರಿಸಲು ಹೆಚ್ಚಿನ ಇಂಧನ ವ್ಯರ್ಥವಾಗುತ್ತದೆ.**

೭. ಉತ್ತಮ ಚಾಲಕನಾದವನು ಮುಂದೇನಾಗುತ್ತದೆ ಎಂದು ಅವಲೋಕಿಸುತ್ತಿದ್ದು, ದಡಕ್ಕನೆ ಬ್ರೇಕ್ ಹಾಕುವುದನ್ನು ತಪ್ಪಿಸಬೇಕು. ದಡಕ್ಕನೆ ಬ್ರೇಕ್ ಹಾಕುವುದರಿಂದ ಹೆಚ್ಚು ಇಂಧನ ಬಳಕೆಗೊಂಡು ಬ್ರೇಕ್ ಡ್ರಮ್, ಗೇರ್ ಬಾಕ್ಸ್ ಮುಂತಾದವುಗಳಿಗೆ ಹಾನಿಯಾಗುತ್ತದೆ. ಗಂಟೆಗೆ ೬೦ ಕಿ.ಮೀ. ಗಳಷ್ಟು ಏಕರೂಪದ ವೇಗದಲ್ಲಿ ವಾಹನವನ್ನು ನಡೆಸುತ್ತಿದ್ದರೆ, ಅದು ೬೫೦ ಮೀಟರ್‌ಗಳಷ್ಟು ದೂರವನ್ನು, ಇಂಧನವನ್ನು ಉಪಯೋಗಿಸಿಕೊಳ್ಳದೆಯೇ ಕ್ರಮಿಸಬಲ್ಲದೆಂಬುದನ್ನು ಪ್ರಯೋಗಗಳು ದೃಢಪಡಿಸಿಕೊಟ್ಟಿವೆ. ಆದ್ದರಿಂದ ಅಡಿಗಡಿಗೆ ಬ್ರೇಕ್ ಹಾಕದೆ ಏಕರೂಪದ ವೇಗದಲ್ಲಿ ನಡೆಸುವುದು ಇಂಧನ ಉಳಿತಾಯದ ಕ್ಷೇತ್ರದಲ್ಲಿ ಉತ್ತಮ ಫಲಿತಾಂಶಗಳನ್ನು ನೀಡುತ್ತದೆ.

೮. ವಾಹನವನ್ನು ನಡೆಸುತ್ತಿರುವಾಗ ಕ್ಲಚ್ಚು ಪೆಡಲಿನ ಮೇಲೆ ಕಾಲು ಹೇರಿಕೊಂಡಿರಬಾರದು. ಅದೊಂದು ದುರಭ್ಯಾಸ. ಅದರಿಂದಾಗಿ ಕ್ಲಚ್ ಜಾರಿ ಎಂಜಿನ್‌ನ ಶಕ್ತಿ ಗೇರ್‌ಬಾಕ್ಸ್‌ಗೆ ಸಾಗುವಾಗ ತಡೆಯಾದಂತಾಗಿ ಆಗ ಇಂಧನ ವ್ಯಯವಾಗುತ್ತದೆ. ಜೊತೆಗೆ ಕ್ಲಚ್‌ನ ಭಾಗಗಳು ಬೇಗ ಸವೆಯುತ್ತವೆ.

ಇಳಿಜಾರಿನಲ್ಲಿ ಕ್ಲಚ್ಚನ್ನು ಒತ್ತಿಹಿಡಿದು ಆಕ್ಸಿಲರೇಟರನ್ನು ಒತ್ತುವುದರಿಂದ ಇಂಧನ ವ್ಯಯವಾಗುತ್ತದೆ. ಜೊತೆಗೆ ಕ್ಲಚ್‌ಗೆ ಹಾನಿಯಾಗುತ್ತದೆ.

೯. ಅನಾವಶ್ಯಕವಾಗಿ ಎಂಜಿನ್ ಚಾಲನೆಯಲ್ಲಿರಲು ಬಿಡಬಾರದು. ೨ ನಿಮಿಷಕ್ಕಿಂತ ಹೆಚ್ಚು ಹೊತ್ತು ನಿಲ್ಲಬೇಕಾದ ಬಸ್‌ಸ್ಟಾಪ್, ಸಂಚಾರ ಸಂಕೇತ ದೀಪಗಳು ಮುಂತಾದ ಕಡೆ ಎಂಜಿನ್ನನ್ನು ಚಾಲನೆಯಲ್ಲಿಡಬಾರದು. ತನ್ನಷ್ಟಕ್ಕೆ ತಾನು ಎಂಜಿನ್ ಕೆಲಸ ಮಾಡಿದರೂ ಅದಕ್ಕೆ ಗಂಟೆಗೆ ೨ ಲೀಟರ್ ಡೀಸಲ್ ಬೇಕಾಗುತ್ತದೆ.

೧೦. ಪೆಟ್ರೋಲ್, ಡೀಸಲ್ ಮತ್ತು ಎಂಜಿನ್ ಆಯಿಲ್‌ನ ಸೋರಿಕೆ ಏನಾದರೂ ಕಂಡುಬಂದಲ್ಲಿ ತಕ್ಷಣ ಅದರ ಕಾರಣವನ್ನು ಶೋಧಿಸಿ ತಡೆಗಟ್ಟಬೇಕು.

೨೭. ಅಪರಾಧಗಳು ಮತ್ತು ಜುಲ್ಮಾನೆ

ಮೋಟಾರು ವಾಹನಗಳನ್ನು ನಡೆಸುವ ಸಂದರ್ಭದಲ್ಲಿ ಉಂಟಾಗುವ ಅಪರಾಧಗಳಿಗೆ, ನ್ಯಾಯಾಲಯವು ವಿಚಾರಣೆ ನಡೆಸಿ ಸೂಕ್ತವಾದ ಬಗೆಯಲ್ಲಿ ಶಿಕ್ಷೆ ನೀಡುತ್ತದೆ. ಆ ಶಿಕ್ಷೆಯು ಜುಲ್ಮಾನೆಯ ರೂಪದಲ್ಲಿರಬಹುದು ಅಥವಾ ಜೈಲುವಾಸದ ರೂಪದಲ್ಲಿರಬಹುದು ಅಥವಾ ಎರಡನ್ನೂ ಕೂಡಿಕೊಂಡಂತೆಯೂ ಇರಬಹುದು. ಕೆಲವು ಸಂದರ್ಭಗಳಲ್ಲಿ ಅಪರಾಧಿಗಳು ಕೋರ್ಟಿನ ಕಟ್ಟೆಯನ್ನು ಹತ್ತದೆಯೇ ಅಪರಾಧ ಮಾಡಿದ ಸ್ಥಳದಲ್ಲಿಯೇ ಸೂಕ್ತವಾದ ದಂಡವನ್ನು ಒಪ್ಪಿಸಿ ತಮ್ಮ ತಪ್ಪಿಗೆ ಪ್ರಾಯಶ್ಚಿತ್ತ ಮಾಡಿಕೊಳ್ಳಬಹುದು. ಹಾಗೆ ಉಂಟಾಗುವ ಅಪರಾಧಗಳು ಮತ್ತು ಅವುಗಳಿಗೆ ಸಂಬಂಧಿಸಿದ ಶಿಕ್ಷೆ ಮೊದಲಾದ ಕೆಲವು ವಿವರಗಳನ್ನು ಇಲ್ಲಿ ಕೊಡಲಾಗಿದೆ.

(ಮೋ.ವಾ.ಕಾ. ೧೯೮೮ ಕಲಮು ೨೦೦)

ಕ್ರಮ ಸಂಖ್ಯೆ	ಅಪರಾಧಗಳು	ಪ್ರಕರಣ/ ನಿಯಮ	ಪ್ರಸ್ತಾಪಿಸಲಾದ ಮೊಬಲಗು ರೂ.
೧.	ಲೈಸನ್ಸು ಹೊಂದದೆಯೆ ವಾಹನ ನಡೆಸುವುದು ಅಥವಾ ನವೀಕರಣವಾಗದ ಲೈಸನ್ಸು ಹೊಂದಿ ವಾಹನವನ್ನು ನಡೆಸುವುದು	ಮೋ.ವಾ.ಕಾ. ಕಲಂ ೩ರ ಉಲ್ಲಂಘನೆ ಕಲಂ ೧೮೧ ರ ಅಡಿಯಲ್ಲಿ ಸೂಚಿಸಿರುವ ದಂಡಕ್ಕೆ ಅನುಗುಣವಾಗಿ	
		(೧) ದ್ವಿಚಕ್ರ ವಾಹನ	೩
		(೨) ಸಾರಿಗೇತರ ವಾಹನ	೪೦೦
		(೩) ಸಾರಿಗೆ ವಾಹನ	೫೦೦
೨.	ಅಪ್ರಾಪ್ತ ವಯಸ್ಕನು ಮೋಟಾರು ವಾಹನವನ್ನು ನಡೆಸುವುದು	ಮೋ.ವಾ.ಕಾ. ಕಲಂ ೪ರ ಉಲ್ಲಂಘನೆ ಕಲಂ ೧೮೧ರ ಅಡಿಯಲ್ಲಿ ಸೂಚಿಸಿರುವ ದಂಡಕ್ಕೆ ಅನುಗುಣವಾಗಿ	೫೦೦
೩.	ಮಾಲೀಕನೊಬ್ಬನು ಲೈಸನ್ಸುದಾರ ನಲ್ಲದ ಚಾಲಕನಿಗೆ ವಾಹನವನ್ನು ನಡೆಸಲು ಕೊಟ್ಟಿರುವುದು	ಮೋ.ವಾ.ಕಾ. ಕಲಂ ೫ರ ಉಲ್ಲಂಘನೆ ಕಲಂ ೧೮೦ರ ಅಡಿಯಲ್ಲಿ ಸೂಚಿಸಿರುವ ದಂಡಕ್ಕೆ ಅನುಗುಣವಾಗಿ	೧,೦೦೦
೪.	ತನ್ನ ಲೈಸನ್ಸನ್ನು ಇನ್ನೊಬ್ಬ ಚಾಲಕನು ಉಪಯೋಗಿಸಲು ಕೊಟ್ಟಿರುವುದು	ಮೋ.ವಾ.ಕಾ. ಕಲಂ ೬(೨)ರ ಉಲ್ಲಂಘನೆ ಕಲಂ ೧೮೧ರ ಅಡಿಯಲ್ಲಿ ಸೂಚಿಸಿರುವ ದಂಡಕ್ಕೆ ಅನುಗುಣವಾಗಿ	೧,೦೦೦


ಕ್ರಮ ಸಂಖ್ಯೆ	ಅಪರಾಧಗಳು	ಪ್ರಕರಣ/ ನಿಯಮ	ಪ್ರಸ್ತಾಪಿಸಲಾದ ಮೊಬಲಗು ರೂ.
೫.	ಲೈಸನ್ಸು ಅನೂರ್ಜಿತವಾಗಿದ್ದಾಗ ವಾಹನವನ್ನು ನಡೆಸುವುದು	ಮೋ.ವಾ.ಕಾ. ಕಲಂ ೨೩ರ ಉಲ್ಲಂಘನೆ ಕಲಂ ೧೮೨ರ ಅಡಿಯಲ್ಲಿ ಸೂಚಿಸಿರುವ ದಂಡಕ್ಕೆ ಅನುಗುಣವಾಗಿ	೫೦೦
೬.	೧೨ ತಿಂಗಳಿಗಿಂತಲೂ ಹೆಚ್ಚಿನ ಅವಧಿಯವರೆಗೆ ಇತರ ರಾಜ್ಯದ ನೋಂದಣಿ ಗುರುತು ಇರುವ ವಾಹನದ ಉಪಯೋಗ	ಮೋ.ವಾ.ಕಾ. ಕಲಂ ೪೭ರ ಉಲ್ಲಂಘನೆ ಕಲಂ ೧೭೭ರ ಅಡಿಯಲ್ಲಿ ಸೂಚಿಸಿರುವ ದಂಡಕ್ಕೆ ಅನುಗುಣವಾಗಿ	೧೦೦
೭.	ಕಾನೂನುರೀತಿಯಿಂದ ನೀಡಿದ ನಿರ್ದೇಶನವನ್ನು ಪಾಲಿಸದಿರುವುದು ಅಥವಾ ಕಛೇರಿ ಕೆಲಸಗಳನ್ನು ನಿರ್ವಹಿಸಲು ಅಡಚಣೆಯುಂಟು ಮಾಡುವುದು ಮತ್ತು ಮಾಹಿತಿ ನೀಡಲು ನಿರಾಕರಿಸುವುದು	ಮೋ.ವಾ.ಕಾ. ಕಲಂ ೧೭೯ರ ಉಲ್ಲಂಘನೆ ಮತ್ತು ಅದರ ಅಡಿಯಲ್ಲಿ ಸೂಚಿಸಿರುವ ದಂಡಕ್ಕೆ ಅನುಗುಣವಾಗಿ	೫೦೦
೮.	ವಿಷಯವನ್ನು ಉದ್ದೇಶಪೂರ್ವಕ ವಾಗಿ ತಡೆಹಿಡಿಯುವುದು ಅಥವಾ ಅವನು ಸುಳ್ಳೆಂದು ತಿಳಿದಿರುವ ಅಥವಾ ಅವನು ನಿಜವೆಂದು ನಂಬದಿರುವ ವಿಷಯವನ್ನು ತಿಳಿಸುವುದು	ಮೋ.ವಾ.ಕಾ. ಕಲಂ ೧೭೯ (೨)ರ ಉಲ್ಲಂಘನೆ ಅದರ ಅಡಿಯಲ್ಲಿ ಸೂಚಿಸಿರುವ ದಂಡಕ್ಕೆ ಅನುಗುಣವಾಗಿ	೫೦೦
೯.	ಗರಿಷ್ಠ ವೇಗಮಿತಿಯನ್ನು ಮೀರಿ ವಾಹನವನ್ನು ಚಾಲನೆ ಮಾಡುವುದು	ಮೋ.ವಾ.ಕಾ. ಕಲಂ ೧೧೨ರ ಉಲ್ಲಂಘನೆ ಕಲಂ ೧೮೩ (೧) ಮತ್ತು ೧೮೩ (೨) ರ ಅಡಿಯಲ್ಲಿ ಸೂಚಿಸಿರುವ ದಂಡಕ್ಕೆ ಅನುಗುಣವಾಗಿ	೩೦೦
೧೦.	ಅಪಾಯಕಾರಿಯಾಗಿ ವಾಹನವನ್ನು ಚಾಲನೆ ಮಾಡುವುದು	ಮೋ.ವಾ.ಕಾ. ಕಲಂ ೧೮೪ರ ಉಲ್ಲಂಘನೆ ಮತ್ತು ಅಡಿಯಲ್ಲಿ ಸೂಚಿಸಿರುವ ದಂಡಕ್ಕೆ ಅನುಗುಣವಾಗಿ	
		(೧) ದ್ವಿಚಕ್ರ ವಾಹನ	೨೦೦
		(೨) ಸಾರಿಗೇತರ ವಾಹನ	೩೦೦
		(೩) ಸಾರಿಗೆ ವಾಹನ	೫೦೦

ಕ್ರಮ ಸಂಖ್ಯೆ	ಅಪರಾಧಗಳು	ಪ್ರಕರಣ/ ನಿಯಮ	ಪ್ರಸ್ತಾಪಿಸಲಾದ ಮೊಬಲಗು ರೂ.
೧೧.	ವೇಗದ ಸ್ಪರ್ಧೆ ಮತ್ತು ವೇಗ ಪರೀಕ್ಷೆ	ಮೋ.ವಾ.ಕಾ. ಕಲಂ ೧೮೯ರ ಉಲ್ಲಂಘನೆ ಮತ್ತು ಅದರ ಅಡಿಯಲ್ಲಿ ಸೂಚಿಸಿರುವ ದಂಡಕ್ಕೆ ಅನುಗುಣವಾಗಿ	೫೦೦
೧೨.	ಚಾಲನೆ ಮಾಡಲು ಮಾನಸಿಕವಾಗಿ ಅಥವಾ ದೈಹಿಕವಾಗಿ ಅನರ್ಹನಾಗಿದ್ದಾಗ ಚಾಲನೆ ಮಾಡುವುದು	ಮೋ.ವಾ.ಕಾ. ಕಲಂ ೧೮೬ರ ಉಲ್ಲಂಘನೆ ಮತ್ತು ಅದರ ಅಡಿಯಲ್ಲಿ ಸೂಚಿಸಿರುವ ದಂಡಕ್ಕೆ ಅನುಗುಣವಾಗಿ:	
		ಮೊದಲ ಅಪರಾಧಕ್ಕೆ	೨೦೦
		೨ನೇ ಮತ್ತು ಪುನಾರವರ್ತಿತ ಅಪರಾಧಗಳಿಗೆ	೫೦೦
೧೩.	ನಮೂನೆ ೬ರಲ್ಲಿ ಅಧಿಕಾರ ಪತ್ರವಿಲ್ಲದೆ ಸಾರಿಗೆ ವಾಹನವನ್ನು ಚಾಲನೆ ಮಾಡುವುದು	ಮೋ.ವಾ.ಕಾ. ಕಲಂ ೧೮೧ರ ಉಲ್ಲಂಘನೆ ಮತ್ತು ಅದರ ಅಡಿಯಲ್ಲಿ ಸೂಚಿಸಿರುವ ದಂಡಕ್ಕೆ ಅನುಗುಣವಾಗಿ	೫೦೦
೧೪.	ಮಜಲು ವಾಹನ (ಸ್ಟೇಜ್ ಕ್ಯಾರೇಜ್ ಬಸ್)ದಲ್ಲಿ ಸ್ಫೋಟಕಗಳನ್ನು ಒಯ್ಯುವುದು	ಕ.ಮೋ.ವಾ.ನಿ. ೨೧೦ರ ಉಲ್ಲಂಘನೆಗೆ ಮೋ.ವಾ.ಕಾ. ಕಲಂ ೧೭೭ರ ಅಡಿಯಲ್ಲಿ ಸೂಚಿಸಿರುವ ದಂಡಕ್ಕೆ ಅನುಗುಣವಾಗಿ:	
		ಮೊದಲ ಅಪರಾಧಕ್ಕೆ	೧೦೦
		೨ನೇ ಮತ್ತು ಪುನಾರವರ್ತಿತ ಅಪರಾಧಗಳಿಗೆ	೩೦೦
೧೫.	ವಿಮೆ ಮಾಡಿಸದೆ ಇರುವ ವಾಹನವನ್ನು ಚಾಲನೆ ಮಾಡುವುದು ಅಥವಾ ಚಾಲನೆ ಮಾಡುವಂತೆ ಮಾಡುವುದು ಅಥವಾ ಚಾಲನೆ ಮಾಡಲು ಅನುಮತಿಸುವುದು	ಮೋ.ವಾ.ಕಾ. ಕಲಂ ೧೪೬ರ ಉಲ್ಲಂಘನೆ ಕಲಂ ೧೯೬ ರ ಅಡಿಯಲ್ಲಿ ಸೂಚಿಸಿರುವ ದಂಡಕ್ಕೆ ಅನುಗುಣವಾಗಿ	೫೦೦

ಕ್ರಮ ಸಂಖ್ಯೆ	ಅಪರಾಧಗಳು	ಪ್ರಕರಣ/ ನಿಯಮ	ಪ್ರಸ್ತಾಪಿಸಲಾದ ಮೊಬಲಗು ರೂ.
೧೬.	ವಾಹನವನ್ನು ನೋಂದಾಯಿಸದೆ ರಸ್ತೆಯ ಮೇಲೆ ಚಾಲನೆ ಮಾಡುವುದು ಅಥವಾ ಚಾಲನೆ ಮಾಡಲು ಅನುಮತಿಸುವುದು	ಮೋ.ವಾ.ಕಾ. ಕಲಂ ೩೯ರ ಉಲ್ಲಂಘನೆ ಕಲಂ ೧೯೨ ರ ಅಡಿಯಲ್ಲಿ ಸೂಚಿಸಿರುವ ದಂಡಕ್ಕೆ ಅನುಗುಣವಾಗಿ:	
		ಮೊದಲ ಅಪರಾಧಕ್ಕೆ	೩,೦೦೦
		೨ನೇ ಮತ್ತು ಪುನಾರವರ್ತಿತ ಅಪರಾಧಗಳಿಗೆ	೫,೦೦೦
೧೭.	ಯೋಗ್ಯತಾ ಪ್ರಮಾಣಪತ್ರ (Fitness Certificate) ವಿಲ್ಲದೆ ಸಾರ್ವಜನಿಕ ರಸ್ತೆಯ ಮೇಲೆ ಸಾರಿಗೆ ವಾಹನವನ್ನು ನಡೆಸುವುದು ಅಥವಾ ನಡೆಸಲು ಅನುಮತಿಸುವುದು	ಮೋ.ವಾ.ಕಾ. ಕಲಂ ೫೬ರ ಉಲ್ಲಂಘನೆ ಕಲಂ ೧೯೨ ರ ಅಡಿಯಲ್ಲಿ ಸೂಚಿಸಿರುವ ದಂಡಕ್ಕೆ ಅನುಗುಣವಾಗಿ	
		ಮೊದಲ ಅಪರಾಧಕ್ಕೆ ರೂ.	೨ನೇ ಮತ್ತು ಪುನಾರವರ್ತಿತ ಅಪರಾಧಕ್ಕೆ ರೂ.
	ಆಟೋರಿಕ್ಷಾ ಮತ್ತು ಲಕ್ಷುರಿ ಟ್ಯಾಕ್ಸಿ	೫೦೦	೧,೦೦೦
	ಮ್ಯಾಕ್ಸಿ ಕ್ಯಾಬ್	೧,೦೦೦	೨,೦೦೦
	ಸರಕು ವಾಹನ	೧,೫೦೦	೩,೦೦೦
	ಬಸ್	೨,೦೦೦	೪,೦೦೦
	ಇತರೆ ವಾಹನ	೧,೦೦೦	೨,೦೦೦
೧೮.	ವಾಯು/ಶಬ್ದ ಮಾಲಿನ್ಯಕ್ಕೆ ಸಂಬಂಧಿಸಿದಂತೆ ನಿಯಮಿಸಲಾದ ಗುಣಮಟ್ಟಗಳನ್ನು ಉಲ್ಲಂಘಿಸಿ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಯಾವುದೇ ಮೋ.ವಾ.ವನ್ನು ನಡೆಸುವುದು, ನಡೆಸುವಂತೆ ಮಾಡುವುದು ಅಥವಾ ನಡೆಸಲುಅನುಮತಿಸುವುದು	ಕೇಂ.ಮೋ.ವಾ.ನಿ. ಗಳ ನಿಯಮ ೧೧೫, ೧೧೯, ೧೨೦ರ ಉಲ್ಲಂಘನೆ ಮೋ.ವಾ.ಕಾ. ಕಲಂ ೧೯೦ (೨) ರ ಅಡಿಯಲ್ಲಿ ಸೂಚಿಸಿರುವ ದಂಡಕ್ಕೆ ಅನುಗುಣವಾಗಿ	
	೧. ದ್ವಿಚಕ್ರ ಮತ್ತು ತ್ರಿಚಕ್ರವಾಹನಗಳಿಗೆ		೩೦೦
	೨. ನಾಲ್ಕು ಚಕ್ರದ ವಾಹನಗಳಿಗೆ		೬೦೦
	೩. ಪ್ರಯಾಣಿಕರ ವಾಹನ ಮತ್ತು ಭಾರಿ ವಾಹನಗಳಿಗೆ		೮೦೦

ಕರ್ನಾಟಕ ರಾಜ್ಯದಲ್ಲಿರುವ ಪ್ರಾದೇಶಿಕ ಸಾರಿಗೆ ಕಛೇರಿಗಳು(ಆರ್.ಟಿ.ಓ.) ಮತ್ತು ಉಪ ಪ್ರಾದೇಶಿಕ ಸಾರಿಗೆ ಕಛೇರಿಗಳು(ಎ.ಆರ್.ಟಿ.ಓ.) ಹಾಗೂ ಅವುಗಳ ಸಂಕೇತಗಳು

೦೧. ಬೆಂಗಳೂರು–ಕೇಂದ್ರ
೦೨. ಬೆಂಗಳೂರು–ಪಶ್ಚಿಮ
೦೩. ಬೆಂಗಳೂರು–ಪೂರ್ವ
೦೪. ಬೆಂಗಳೂರು–ಉತ್ತರ
೦೫. ಬೆಂಗಳೂರು–ದಕ್ಷಿಣ
೦೬. ತುಮಕೂರು
೦೭. ಕೋಲಾರ
೦೮. ಕೆ.ಜಿ.ಎಫ್.
೦೯. ಮೈಸೂರು–ಪೂರ್ವ
೧೦. ಚಾಮರಾಜನಗರ
೧೧. ಮಂಡ್ಯ
೧೨. ಮಡಿಕೇರಿ
೧೩. ಹಾಸನ
೧೪. ಶಿವಮೊಗ್ಗ
೧೫. ಸಾಗರ
೧೬. ಚಿತ್ರದುರ್ಗ
೧೭. ದಾವಣಗೆರೆ
೧೮. ಚಿಕ್ಕಮಗಳೂರು
೧೯. ದಕ್ಷಿಣಕನ್ನಡ
೨೦. ಉಡುಪಿ
೨೧. ಪುತ್ತೂರು
೨೨. ಬೆಳಗಾಂ
೨೩. ಚಿಕ್ಕೋಡಿ
೨೪. ಬೈಲಹೊಂಗಲ
೨೫. ಧಾರವಾಡ
೨೬. ಗದಗ



ಡಾ॥ ಜಿ. ಕೃಷ್ಣಪ್ಪ ಮೋಟಾರು ವಾಹನ ಇಲಾಖೆಯಲ್ಲಿ ಎ.ಆರ್.ಟಿ.ಓ. ಹುದ್ದೆಯಲ್ಲಿದ್ದು ನಿವೃತ್ತರಾದವರು. ಬೇಂದ್ರೆ ಕಾವ್ಯದ ಬಗೆಗೆ ಇವರಿಗಿರುವ ಆಳವಾದ ಆಸಕ್ತಿಯಿಂದಲೂ, ಬೆಂದ್ರೆ ಕಾವ್ಯವನ್ನು ಅಧ್ಯಯನ ಮಾಡಿ ಪಿ.ಎಚ್.ಡಿ. ಪದವಿ ಪಡೆದಿರುವುದರಿಂದಲೂ ಇವರನ್ನು 'ಬೇಂದ್ರೆ ಕೃಷ್ಣಪ್ಪ' ಎಂದೇ ಕರೆಯುವರು.

ಪ್ರಸ್ತುತ 'ರಸ್ತೆ ನಿಯಮಗಳು' ಕೃತಿಯಲ್ಲಿ ಬೇಂದ್ರೆ ಕೃಷ್ಣಪ್ಪನವರು ತಮ್ಮ ವೃತ್ತಿಧರ್ಮದ ಕಡೆಗೆ ಗಮನಹರಿಸಿದ್ದಾರೆ. ಏನನ್ನು ಮಾಡಿದರೂ ತುಂಬ ಅಚ್ಚುಕಟ್ಟಾಗಿ ಮಾಡುವ ಕೃಷ್ಣಪ್ಪನವರು ಈ ಕೃತಿಯನ್ನು ತುಂಬ ಚೆನ್ನಾಗಿ ರಚಿಸಿದ್ದಾರೆ. ಸುಮಾರು ಇಪ್ಪತ್ತೇಳು ಅಧ್ಯಾಯಗಳ ಈ ಪುಸ್ತಕದಲ್ಲಿ ವಾಹನ ಚಾಲನೆ ಮತ್ತು ರಸ್ತೆ ಸುರಕ್ಷತೆಗೆ ಸಂಬಂಧಿಸಿದ ಎಲ್ಲ ವಿವರಗಳನ್ನೂ ಕೃಷ್ಣಪ್ಪನವರು ತುಂಬ ತೃಪ್ತಿಕರವಾಗಿ ನೀಡಿದ್ದಾರೆ. ವಾಹನ ಚಾಲಕರು ರಸ್ತೆಯ ನಿಯಮಗಳನ್ನು ಪಾಲಿಸುವುದಕ್ಕಿಂತ ಧಿಕ್ಕರಿಸುತ್ತಿರುವುದೇ ಅಧಿಕವಾಗುತ್ತಿರುವ ಇಂದಿನ ದಿನಗಳಲ್ಲಿ ಈ ಪುಸ್ತಕದ ಮಹತ್ವವನ್ನು ಉತ್ಪ್ರೇಕ್ಷಿಸಬೇಕಾಗಿಲ್ಲ.

'ರಸ್ತೆ ನಿಯಮಗಳು' ಕೃತಿಯ ಪರಿಷ್ಕೃತ ದ್ವಿತೀಯ ಮುದ್ರಣವನ್ನು ಕಾಮಧೇನು ಪುಸ್ತಕ ಭವನದವರು ಸರ್ವಾಂಗ ಸುಂದರವಾಗಿ ಹೊರತಂದಿದ್ದಾರೆ.

ಡಾ॥ ಬಿ.ಎಸ್. ರಾಮಪ್ರಸಾದ್

ಕಾಮಧೇನು
ಪುಸ್ತಕ ಭವನ
ಶಾಸಕರ ಭವನದ ಆವರಣ, ಬೆಂಗಳೂರು–೧

₹ 99/-